SAPTHAGIRI(KANNADA)
SPIRITUAL ILLUSTRATED MONTHLY
Volume:02, Issue:6, Pages:56
January - 2023,Price Rs.20/-

ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

ಜನವರಿ 2023

ಬೆಲೆ ರೂ. 20/-




ರಥಸಪ್ತಮಿ
(28-01-2023)

ವಿಶ್ವೇಶಂ ವಿಶ್ವಕರ್ತಾರಂ ಮಹಾತೇಜಃ ಪ್ರದೀಪನಮ್।
ಮಹಾಪಾಪಹರಂ ದೇವಂ ತಂ ಸೂರ್ಯಂ ಪ್ರಣಮಾಮ್ಯಹಮ್॥

**20-11-2022 ರಿಂದ 29-11-2022 ರ ವರೆಗೆ ಶ್ರೀ ತಿರುಚಾನೂರು ಅಮ್ಮನವರ ಕಾರ್ತೀಕ ಬ್ರಹ್ಮೋತ್ಸವಗಳು ನಡೆಯಿತು. ಈ ಕಾರ್ಯಕ್ರಮದಲ್ಲಿ ಆಂಧ್ರಪ್ರದೇಶದ ಡಿಪ್ಯೂಟಿ ಸಿ.ಎಂ. ಶ್ರೀ.ಕೆ. ನಾರಾಯಣ ಸ್ವಾಮಿ ಆಂಧ್ರಪ್ರದೇಶದ ವತಿಯಿಂದ ಅಮ್ಮನವರಿಗೆ ರೇಷ್ಮೆ ವಸ್ತ್ರಗಳನ್ನು ಸಮರ್ಪಿಸಿದರು. ಒಂಬತ್ತು ದಿನಗಳವರೆಗೆ ನಡೆದ ಈ ಉತ್ಸವದಲ್ಲಿ ತಿ.ತಿ.ದೇ.,ಅಧ್ಯಕ್ಷರು ಶ್ರೀ.ವೈವಿ.ಸುಬ್ಬಾರೆಡ್ಡಿ ಸತಿ ಸಮೇತವಾಗಿ ಪಾಲ್ಗೊಂಡರು. ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ. ಧರ್ಮಾರೆಡ್ಡಿ ಐ.ಡಿ.ಈ.ಎಸ್. ರವರು ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿಗಳು. ಶ್ರೀ .ವಿ. ವೀರಬ್ರಹ್ಮ ಐ.ಎ.ಎಸ್., ಮತ್ತು ಶ್ರೀಮತಿ ಎಸ್. ಭಾರ್ಗವಿ ಐ.ಎ.ಎಸ್., ಇತರ ತಿ.ತಿ.ದೇ., ಉನ್ನತಾಧಿಕಾರಿಗಳು ಪಾಲ್ಗೊಂಡರು.**





















# ಭಗವದ್ಗೀತೆ

**ಯದಿ ಮಾಮಪ್ರತೀಕಾರಂ ಅಶಸ್ತ್ರಂ ಶಸ್ತ್ರ ಪಾಣಯಃ**

**ಧಾರ್ತ ರಾಷ್ಟ್ರಾ ರಣೇ ಹನ್ಯುಃ ತನ್ಮೇ ಕ್ಷೇಮತರಂ ಭವೇತ್ ॥45॥**

**(ಶ್ರೀಮದ್ಭಗವದ್ಗೀತೆ ಅಧ್ಯಾಯ - 1, ಶ್ಲೋಕ - 45)**

**ಒಂದು ವೇಳೆ ಹೋರಾಡ ಬಯಸದೇ ನಿರಾಯುಧನಾಗಿ ನಿಂತ ನನ್ನನ್ನು ಆಯುಧ ಪಾಣಿಗಳಾದ ಕೌರವರು ಯುದ್ಧದಲ್ಲಿ ಕೊಂದರೆ ಅದರಿಂದ ನನಗೆ ಹೆಚ್ಚಿನ ಒಳ್ಳೆಯದೇ ಆದೀತು.**





ಹರಿನಾರಾಯಣ ಹರಿನಾರಾಯಣ,
ಹರಿನಾರಾಯಣ ನೆನೆ ಮನವೆ ॥ಪ॥

ನಾರಾಯಣನೆಂಬ ನಾಮದ ಬೀಜವ,
ನಾರದ ಬಿತ್ತಿದ ಧರೆಯೊಳಗೆ ॥ಅ. ಪ.॥

ತರಳ ಧೃವನಿಂದಲಿ ಅಂಕುರಿಸಿತು ಅದು,
ವರ ಪ್ರಹ್ಲಾದನಿಂದ ಮೊಳಕೆಯಾಯ್ತು
ಧರಣೀಶ ರುಕ್ಮಾಂಗದನಿಂದ ಚಿಗುರಿತು,
ಕುರುಪಿತಾಮಹನಿಂದ ಹೂವಾಯ್ತು ॥೧॥

ವಿಜಯನ ಸತಿಯಿಂದ ಫಲವಾಯ್ತು - ಅದು,
ಗಜೇಂದ್ರನಿಂದ ದೋರೆ ಹಣ್ಣಾಯ್ತು,
ದ್ವಿಜಶುಕಮುನಿಯಿಂದ ಫಲಪಕ್ವವಾಯಿತು,
ಅಜಾಮಿಳ ತಾನುಂಡು ರಸಸವಿದ ॥೨॥

ಕಾಮಿತ ಫಲವೀವ ನಾಮವೊಂದಿರಲಾಗಿ,
ಹೋಮ ನೇಮ ಜಪತಪವೇಕೆ,
ಸ್ವಾಮಿ ಶ್ರೀಪುರಂದರವಿಠಲರಾಯನ,
ನೇಮದಿಂದಲಿ ನೀ ನೆನೆ ಮನವೆ ॥೩॥

-ಶ್ರೀಪುರಂದರದಾಸರು

(ಎಂಟನೆಯ ದಶಕ)

# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

ವೃಷಗಿರಿಸುಧಾಸಿಂಧೌ ಜಂತುರ್ದಯೇ ನಿಹಿತಸ್ತ್ವಯಾ ಭವಭಯಪರೀತಾಪಚ್ಛಿತ್ತ್ಯೈ ಭಜನ್ನ ಘಮರ್ಷಣಮ್ ।
ಮುಷಿತಕಲುಷೋ ಮುಕ್ತೆರಗ್ರೇಸರೈ ರಭಿಪೂರ್ಯತೇ ಸ್ವಯಮುಪನತೈಃ ಸ್ವಾತ್ಮಾನಂದ ಪ್ರಭೃತ್ಯನುಬಂಧಿಭಿಃ ॥೭೬॥

ಹಿಂದಿನ ಪದ್ಯದಲ್ಲಿ ದಯಾದೇವಿಯು ಐಶ್ವರ್ಯ . ಕೈವಲ್ಯವೇ ಮೊದಲಾದ ಫಲಗಳನ್ನು ಕೊಟ್ಟು ಅದೇ ಮಾರ್ಗದಿಂದ ಶ್ರೀನಿವಾಸನ ಸಂಬಂಧವನ್ನು ಏರ್ಪಡಿಸಿ ಕ್ರಮವಾಗಿ ಮೋಕ್ಷವನ್ನು ಕೊಡುವಳೆಂದು ವರ್ಣಿಸಿರುತ್ತಾರೆ. ಹೀಗೆ ತಾವು ಬಯಸಿದ ಫಲಕ್ಕಾಗಿ ಭಗವಂತನನ್ನು ಆಶ್ರಯಿಸಿದವರಿಗೆ ಪ್ರಪತ್ತಿ ರೂಪವಾದ ಉಪಾಯಾನ್ವಯವನ್ನು ಉಂಟು ಮಾಡುವುದನ್ನೂ ಉಪಾಯಾನಷ್ಠಾನಾನಂತರ ಉಂಟಾಗುವ ಫಲಗಳನ್ನೂ ಈ ಪದ್ಯದಲ್ಲಿಯೂ ಮುಂದಿನ ಪದ್ಯದಲ್ಲಿಯೂ ವರ್ಣಿಸುತ್ತಾರೆ.

ಪ್ರಪತ್ತಿ ಎಂಬುದು ಅಘಮರ್ಷಣವೆಂದು ತಿಳಿಯಲ್ಪಡುವುದು. ಅಂದರೆ ಸರ್ವಕರ್ಮಗಳನ್ನೂ ತೊಲಗಿಸುವಂತಹ ಪ್ರಾಯಶ್ಚಿತ್ತವದು. ಇದನ್ನು ಪ್ರಾಣಿಗಳಿಗೆ ಉಂಟುಮಾಡಬೇಕೆಂದು ಬಯಸಿದ ದಯಾದೇವಿಯು ಮೊದಲು ವೇಂಕಟಾಚಲದಲ್ಲಿರುವ ಅಮೃತಸಮುದ್ರದಂತಿರುವ ಶ್ರೀನಿವಾಸನನ್ನು ಆಶ್ರಯಿಸುವಂತೆ ಮಾಡುವಳು. ಹಾಗೆ ಬೇರೆ ಫಲವನ್ನೇ ಉದ್ದೇಶಿಸಿ ಶ್ರೀನಿವಾಸನನ್ನು ಆಶ್ರಯಿಸಿದವನಿಗೂ ಆ ವಸ್ತುವಿನ ಪ್ರಭಾವದಿಂದ ಮೋಕ್ಷದಲ್ಲಿ ಅಭಿರುಚಿಯೂ ಅದರ ಉಪಾಯದಲ್ಲಿ ಬೇಡಿಕೆಯೂ ತಾನಾಗಿಯೇ ಉಂಟಾಗುವುದು. ಹಾಗೆ ಉಪಾಯದಲ್ಲಿ ಅನ್ವಯವು ಉಂಟಾಗಿಬಿಟ್ಟರೆ ಪರಮಪದಕ್ಕೆ ಹೋಗುವ ಮೊದಲು ಈ ಲೋಕದಲ್ಲಿ ಇರುವವರೆಗೂ ಮೋಕ್ಷವನ್ನು ಹೊಂದಿ ಎಂತಹ ಭೋಗವನ್ನು ಅನುಭವಿಸಬಹುದೋ ಅಂತಹ ಪರಮಾತ್ಮಾನುಭವವನ್ನು (ತಾನಾಗಿಯೇ ಬರುವಂತಹ ಅನುಭವವನ್ನು) ಪೂರ್ಣವಾಗಿ ಅನುಭವಿಸಬಹುದು. ಅಂದರೆ,ಸರ್ವೇಶ್ವರನಲ್ಲಿ ಪ್ರಪತ್ತಿ ಮಾಡಿದ ಮೇಲೆ ಈ ಪ್ರಪನ್ನನು ತಾನು ಮಾಡುವ ಕಾರ್ಯಗಳನ್ನೂ ಭಗವತ್ಪ್ರರಿಧಿಯನ್ನು ಉದ್ದೇಶಿಸಿಯೇ ಮಾಡುವುದರಿಂದ ಭಗವಂತನೂ ಅವನ ಗುಣಗಳೂ ಸರ್ವದಾ ಇವನ ಬುದ್ಧಿಯಲ್ಲಿ ಪ್ರಕಾಶಗೊಂಡಿರುವುದರಿಂದಲೇ ಪರಮಾತ್ಮಾನುಭವವು ಇವನಿಗೆ ಪೂರ್ಣವಾಗಿ ಉಂಟಾಗುವುದು. ಇದಿಷ್ಟೂ ದಯಾದೇವಿಯ ಕಾರ್ಯವೇ.

ಇಲ್ಲಿ ಭಗವಂತನನ್ನು ಅಮೃತಸಮುದ್ರದಂತೆ ವರ್ಣಿಸುವುದರಿಂದ ಬೇಸಿಗೆಯ ಕಾಲದಲ್ಲಿ ತಾಪದಿಂದ ಅತ್ಯಂತ ಬಳಲಿದವನು ಅಮೃತದಂತಹ ತಂಪಾದ ಕಡಲಿನಲ್ಲಿ ಮುಳುಗಿ ಸ್ನಾನಮಾಡಿದರೆ ಹೇಗೆ ಮಹಾನಂದವುಂಟಾಗುವುದೋ ಹಾಗೆಯೇ ಈ ಬ್ರಹ್ಮನೆಂಬ ಕಡಲಿನಲ್ಲಿ ಮುಳುಗಿದವನಿಗೆ ಸರ್ವತಾಪಗಳೂ ನೀಗುವುದೆಂಬ ಅಭಿಪ್ರಾಯವು ತೋರುವುದು.

ಧರ್ಮಶಾಸ್ತ್ರದಲ್ಲಿ ಹೇಳಲ್ಪಟ್ಟಿರುವ ಅಘಮರ್ಷಣಾ ಸ್ನಾನದಂತಿರುವುದು ಬ್ರಹ್ಮಹ್ರದಾವಗಾಹನ (ಬ್ರಹ್ಮವೆಂಬ ಕಡಲಿನ ಸ್ನಾನ! ಅಂದರೆ ಪ್ರಪತ್ತಿ ಎಂಬುದು ಸರ್ವ ಪಾಪ ಪ್ರಾಯಶ್ಚಿತ್ತ ರೂಪವಾದುದು. ಈ ವಿಚಾರವು ಈ ಸ್ತೋತ್ರದಲ್ಲಿಯೇ ಕೆಲವಾರು ಕಡೆ ತಿಳಿಸಲ್ಪಟ್ಟಿರುವುದು ಇಲ್ಲಿ 'ಸ್ವಾತ್ಮಾನಂದ ಪ್ರಭೃತ್ಯನುಬಂಧಿಭಿಃ ಎಂಬಲ್ಲಿ ಸ್ವಾತ್ವಾನಂದ ಎಂಬುದರಿಂದ ತನಗೆ ಆತ್ಮವಾಗಿರುವ ಪರಮಪುರುಷನ ಆನಂದಾನುಭವವೆಂದು ಹೇಳಿದವು ಪರಮಾತ್ಮನನ್ನು ಅನುಸಂಧಾನ ಮಾಡುವಾಗ ತನಗೆ ಆತ್ಮಾವಾಗಿ ಅನುಸಂಧಾನಮಾಡಬೇಕೆಂದು ತಿಳಿಸುವುದಕ್ಕಾಗಿಯೇ ಸ್ವಾತ್ಮಾನಂದವೆಂದು ಹೇಳಿರುವುದು.

ಹಾಗಿಲ್ಲದೆ 'ಸ್ವಾತ್ಮಾನಂದ' ಎಂಬ ಶಬ್ದದಿಂದ ತನ್ನ (ಜೀವತ್ಮಾನ) ಸ್ವರೂಪಾನಂದಾನುಭವವೂ, 'ಪ್ರಭೃತಿ' ಎಂಬ ಶಬ್ದದಿಂದ ಮೊದಲು ಹೇಳಿದ ಭಗವದನುಭವವು ಹೇಳಲ್ಪಡುವುದೆಂದು ಹೇಳುವರೂ ಉಂಟು. ಆಗ ಜೀವಾನುಭವವೆನ್ನುವುದು ಭಗವಚ್ಛೇವೆನಾಗಿಯೂ, ಭಗವದ್ದಾಸನಾಗಿಯೂ ಜೀವಾತ್ಮನನ್ನು ಅನುಭವಿಸುವುದೇ ಆಗಿರುತ್ತದೆ. ಒಂದೊಂದು ಕರ್ಮವನ್ನು ಮಾಡುವಾಗಲೂ ತನ್ನನ್ನು ಭಗವಚ್ಛೇಷನೆಂದೇ ನೆನೆದೇ ಅನುಷ್ಠಿಸುವುದರಿಂದಲೇ ಆಗ ಉಂಟಾಗುವ ಆನಂದವು ಅತ್ಯಂತ ಶ್ರೇಷ್ಠವಾದುದೆಂದು ಭಾವವು.

ಪ್ರಪತ್ತಿ ಎಂಬುದು ಮೋಕ್ಷಾರ್ಥವಾಗಿಯೇ ಮಾಡಲ್ಪಟ್ಟರೂ ಮೋಕ್ಷವನ್ನು ಪಡೆಯುವುದಕ್ಕೆ ಮೊದಲೂ ಈ ಲೋಕದಲ್ಲಿರುವವರೆಗೂ ಇಂತಹಾ ಸ್ವಾತ್ಮಾನುಭವಾನಂದವೂ ಭಗವದನಭವವೂ ಅನುಷಂಗಿಕವಾಗಿ ತಾನಾಗಿಯೇ ದಯಾದೇವಿಯ ಅನುಗ್ರಹದಿಂದ ಉಂಟಾಗುವುದೆಂಬುದು 'ಸ್ವಯಮುಪನತೈಃ' ಎಂಬುದರ ಅರ್ಥ.

ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸ ಪತ್ರಿಕೆ

ಶ್ರೀ ಶುಭಕೃತ್ ನಾಮ ಸಂವತ್ಸರ ಪುಷ್ಯ - ಮಾಘ ಮಾಸ ಸಂಚಿಕೆ

ಸಂಪುಟ : 02 ಜನವರಿ - 2023 ಸಂಚಿಕೆ : 06

## ವಿಷಯಸೂಚಿಕೆ


| | | |
|---|---|---|
| ಸಂಪಾದಕೀಯ | | 6 |
| ಮಕರಸಂಕ್ರಾಂತಿ | - ಡಾ॥ ಎ. ಕುಮುದ | 7 |
| ಭಗವದ್ಗೀತೆಯಲ್ಲಿ ಗಾಯಿತ್ರಿ ಮಂತ್ರಚಿಂತನೆ | -ವಿ. ನಾಗೇಂದ್ರ ಪ್ರಸಾದ್ | 9 |
| ಪ್ರಕೃತಿಗೆ ಕೃತಜ್ಞತೆ ಸೂಚಿಸುವ ಸಂಕ್ರಾಂತಿ | - ಎ.ಆರ್. ರಘುರಾಮ್ | 11 |
| ದೈತ್ಯತಾರತಮ್ಯ - ಒಂದು ವಿಶ್ಲೇಷಣೆ | -ಡಾ॥ ರಾಮಚಂದ್ರ ದಾಸ್ ಸಿ.ಜೆ. | 14 |
| ಸಂಪ್ರದಾಯದೊಂದಿಗೆ ಸ್ವಾಸ್ಥ್ಯಪಾಲನೆ | -ವಾರುಣಿ ರಾಂ | 16 |
| ಜಯ ಜಯ ಜಯ ಜಯ ದಯಾನಿಧೆ | -ಡಾ॥ ಸುಭಾಸ ಕಾಖಂಡಕಿ | 1 9 |
| ನಾಗಮಂಗಲದ ಸೌಮ್ಯಕೇಶವ ದೇವಾಲಯ | - ಕೆಂಗೇರಿ ಚಕ್ರಪಾಣಿ | 20 |
| ಮಕರ ಸಂಕ್ರಮಣ ಸುಗ್ಗಿಯ ಅನಾವರಣ | - ಡಾ॥ ಗುರುರಾಜ ಪೋಶೆಟ್ಟಿಹಳ್ಳಿ | 22 |
| ಆರೋಗ್ಯಾಮೃತ ಬಾಳೆ | - ಶ್ರೀಮತಿ | 24 |
| ದಾರಿ ಯಾವುದಯ್ಯ ವೈಕುಂಠಕ್ಕೆ | - ಪ್ರಣವ | 25 |
| ಮಾತಿಗೂ ಮತ್ತು ಸಂಗೀತಕ್ಕೂ ಸರಸ್ವತಿಯೇ ದೇವತೆ | - ಹನುಮಂತ ಮ. ದೇಶಕುಲಕರ್ಣಿ | 31 |
| ತಿಲದಾನ ಮಹತ್ವ | - ಪ್ರತ್ಯಗ್ರ | 34 |
| ಪರಸ್ಪರ ಶಾಂತಿ ಸೌಹಾರ್ದಕ್ಕಾಗಿ ಶ್ರೀ ಮಧ್ವರ ಮಹಾಸಂದೇಶ | - ಓಂ ಪ್ರಕಾಶ್ ಭಟ್ | 37 |
| ರಥಸಪ್ತಮಿ | -ಬಿ. ಆರ್. ಶ್ರೀಕಂಠಯ್ಯ | 38 |
| ನಾದ ಬ್ರಹ್ಮಶ್ರೀ ತ್ಯಾಗರಾಜರು | -ಡಾ॥ ಎಸ್. ನಂಜುಂಡಸ್ವಾಮಿ | 40 |
| ರಾಶಿ ಫಲಗಳು | - ಬ್ರಹ್ಮಶ್ರೀ ಟಿ.ವಿ.ಕೆ. ಪೂರ್ಣ ಪ್ರಸಾದ್ ಸಿದ್ಧಾಂತಿ | 44 |
| ವೀರನಾರಾಯಣ ಪ್ರೇಮ ಕಿಂಕರ ಕುಮಾರವ್ಯಾಸ | -ಶ್ರೀಮತಿ. ವಾಣಿಶ್ರೀ ಬಿ. ಎಂ. | 45 |
| ಸಂಸ್ಕೃತ ಕಲಿಯೋಣ | - ಮಹಾಮಹೋಪಾಧ್ಯಾಯ ಸಮುದ್ರಾಲ ಲಕ್ಷ್ಮಣಯ್ಯ | 46 |
| ಶ್ರೇಷ್ಠ ಜ್ಯೋತಿಷ್ಯಕಾರರು ಗೋಪಾಲದಾಸರು | -ಪ್ರಿಯಾಪ್ರಾಣೇಶ ಹರಿದಾಸ | 47 |
| ನೀತಿ ಕಥೆ - ಹತ್ತಿರದವರೇ ದೂರದವರು | - ಡಾ॥ ಪ್ರದೀಪ್ ಕುಮಾರ್ ಹೆಬ್ರಿ | 48 |
| ರಸಪ್ರಶ್ನೆಗಳು | - | 50 |
| ಚಿತ್ರಕಥೆ - ಅನ್ನಪ್ರದಾತ | - ಡಾ॥ ಕೆ. ರವಿಚಂದ್ರನ್ | 52 |


ಮುಖಚಿತ್ರ - ಸೂರ್ಯಪ್ರಭವಾಹನದಲ್ಲಿ ಶ್ರೀ ಮಲೆಯಪ್ಪಸ್ವಾಮಿ, ತಿರುಮಲೆ

ಹಿಂಬದಿಚಿತ್ರ - ವೀಣಾಪಾಣಿಯಾಗಿ ಸರಸ್ವತಿದೇವಿ



ವೆಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ


**ಗೌರವ ಸಂಪಾದಕರು**
ಎ.ವಿ. ಧರ್ಮಾರೆಡ್ಡಿ , ಐ.ಡಿ.ಇ.ಎಸ್.
ಕಾರ್ಯನಿರ್ವಹಣಾಧಿಕಾರಿ,.(ಎಫ್.ಎ.ಸಿ.)
ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಡಾ॥ಕೆ.ರಾಧಾರಮಣ, ಎಮ್.ಎ.ಎಮ್.ಫಿಲ್.ಪಿಎಚ್.ಡಿ.

**ಸಂಪಾದಕರು**
ಡಾ॥ ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ .ಪಿ. ರಾಮರಾಜು , ಎಮ್.ಎ.
ವಿಶೇಷಾಧಿಕಾರಿ,
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಗ್ರಹಣ:**
ಶ್ರೀ ಪಿ.ಎನ್.ಶೇಖರ್,
ಸಹಾಯ ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.



ಲೇಖನ / ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ - 517 507

**ಇತರ ವಿವರಗಳಿಗೆ**
ಕಾರ್ಯಾಲಯ : 0877 - 2264543
: 0877 - 2264359
ಸಂಪಾದಕರು : 0877 - 2264360

24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಲಹೆ/ದೂರುಗಳಿಗೆ ಟೋಲ್ ಫ್ರೀ ಸಂಖ್ಯೆ :
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri.helpdesk@tirumala.org


ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org
ಮೂಲಕ ಓದಬಹುದು.

| | |
|---|---|
| ಬಿಡಿ ಪ್ರತಿ | ರೂ. 20/- |
| ವಾರ್ಷಿಕ ಚಂದಾ | ರೂ. 240/- |
| ಆಜೀವ ಚಂದಾ (12 ವರ್ಷಗಳು) | ರೂ. 2400/- |
| ವಿದೇಶಿ ವಾರ್ಷಿಕ ಚಂದಾ | ರೂ. 1030/- |

ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

## ಸಂಪಾದಕೀಯ

# ಸಂಭ್ರಮದ ಸಂಕ್ರಾಂತಿ

ಈ ಮಾಸದಲ್ಲಿ ಅತ್ಯಂತ ಪವಿತ್ರವಾದ ಮತ್ತು ಶ್ರೇಷ್ಠಕರವಾದ ಪುಣ್ಯಕರವಾದ ದಿನ "ಮಕರಸಂಕ್ರಾಂತಿ" ಸೂರ್ಯನು ದಕ್ಷಿಣಾಯನದಿಂದ ಉತ್ತರಾಯಣಕ್ಕೆ ಪ್ರವೇಶಿಸುವಂತಹಾ ಶುಭಕಾಲ ! ಈ ದಿನದಂದು ನದ್ಯಾದಿಗಳಲ್ಲಿ ಸ್ನಾನವನ್ನು ಆಚರಿಸಿ, ಸೂರ್ಯನಿಗೆ ಅರ್ಘ್ಯವನ್ನು ನೀಡುವ ಮೂಲಕ ಈ ಪರ್ವದಿನವನ್ನು ಪ್ರಾರಂಭಿಸುವುದು ನಮ್ಮ ಹಿಂದೂ ಸಂಪ್ರದಾಯದಲ್ಲಿ ಅನಾದಿಯಿಂದಿ ಬಂದಿರುವ ಪದ್ಧತಿ !

ಹಳ್ಳಿಗಳ್ಲಾದರೆ ಸುಗ್ಗಿ ಹಬ್ಬವೆಂದೂ , ಹೊಸ ಬೆಳೆಗಳನ್ನು ಬೆಳೆದಿದ್ದರೆ ದ್ಯೋತಕವಾಗಿ ಆ ಬೆಳೆಗಳಿಗೆ ಪೂಜೆ ಮಾಡಿ, ಅದನ್ನು ಉಪಯೋಗಿಸುವುದೂ ಒಂದು ವಾಡಿಕೆಯಾಗಿದೆ.

ಆ ಪರ್ವದಿನದಲ್ಲಿ ಎಳ್ಳು, ಬೆಲ್ಲ, ಕೊಬ್ಬರಿ, ಹುರಿಗಡಲೆಯ ಮಿಶ್ರಣವನ್ನು ಬಂಧು - ಬಾಂಧವರಿಗೆ, ಸ್ನೇಹಿತರಿಗೆ, ಹಂಚಿ ಎಳ್ಳೂ ಬೆಲ್ಲ ತಿಂದು ಒಳ್ಳೆಯ ಮಾತಾಡಿ ಎಂದು ಹೇಳುವುದು ಅನಾದಿಯಿಂದಲೂ ಬಂದಿರುವ ಸಂಪ್ರದಾಯವಾಗಿದೆ. ಆ ಸುಗ್ಗಿಯ ಕಾಲದಲ್ಲಿ ವಿಶೇಷವಾಗಿ ಬೆಳೆಯುವ ಕಬ್ಬು, ಅದರಿಂದ ತಯಾರಿಸಿದ ಬೆಲ್ಲ, ಹೊಸದಾಗಿ ಬೆಳೆದ ಎಳ್ಳು, ಕೊಬ್ಬರಿ ಎಲ್ಲವನ್ನೂ ಮಿಶ್ರಣಮಾಡಿ, ಸೌಹಾರ್ದಪೂರ್ವಕವಾಗಿ ಹಂಚಿ, ಎಲ್ಲರ ನಡುವೆ ಸ್ನೇಹ ಬಾಂಧವ್ಯವನ್ನು ಬಲಪಡಿಸುವಂತಹಾ ಉದ್ದೇಶ ಇದರಲ್ಲಿ ಅಡಗಿದೆ. ಹಾಗೆಯೇ ವೈಜ್ಞಾನಿಕವಾಗಿ ಈ ಛಳಿಗಾಲದಲ್ಲಿ ಎಳ್ಳು ,ಬೆಲ್ಲ, ಕೊಬ್ಬರಿ, ಹುರಿಗಡಲೆಯ ಮಿಶ್ರಣ ದೇಹಕ್ಕೆ ಆರೋಗ್ಯವನ್ನು ನೀಡುವಂತಹಾ ಪದಾರ್ಥಗಳಾದ್ದರಿಂದ ಅವೆಲ್ಲವೂ ದೇಹಕ್ಕೆ ಸೇರಿ ಯಾವುದೇ ರೀತಿಯ ಶೀತಬಾಧೆಗಳನ್ನು ಉಂಟುಮಾಡುವುದಿಲ್ಲವೆಂದು ಹಿರಿಯರು ಇಂತಹಾ ಸಂಪ್ರದಾಯವನ್ನು ತಂದಂತಿದೆ.

ಹಳ್ಳಿಗಳಲ್ಲಿ ಹಸುಗಳನ್ನು, ಎತ್ತುಗಳನ್ನು ಸಿಂಗರಿಸಿ, ಕಿಚ್ಚು ಹಾಯಿಸುವುದರ ಮೂಲಕ ಅವುಗಳ ಆರೋಗ್ಯವನ್ನು ಕಾಪಾಡುವ ಕಾರ್ಯವೂ ನಡೆಯುತ್ತದೆ. ಇದರಿಂದ ಅವುಗಳ ಮೈಮೇಲೆ ಸೇರಿಕೊಳ್ಳುವ ಕ್ರಿಮಿಕೀಟಗಳನ್ನು ತೊಲಗಿಸುವುದಕ್ಕೆ ಸಹಕಾರಿಯಾಗುತ್ತದೆ. ಸಂಕ್ರಾಂತಿಯ ಮತ್ತೊಂದು ವಿಶೇಷವೆಂದರೆ ಪತಂಗಗಳನ್ನು ಹಾರಿಸುವುದು, ದೀಪೋತ್ಸವ ಹೀಗೆ ಹಲವಾರು ಪ್ರತ್ಯೇಕತೆಗಳೊಂದಿಗೆ ಈ ಸಂಕ್ರಾಂತಿಯು ಎಲ್ಲರ ಸುಖಸಂತೋಷಕ್ಕೆ ಕಾರಣವಾಗುತ್ತಿದೆ.

ಹಾಗೆಯೇ ಧನುರ್ಮಾಸದಲ್ಲಿ ಗೋದಾದೇವಿಯ ಕಲ್ಯಾಣ ಪ್ರಮುಖ ಆಚರಣೆಯಾಗಿದೆ.ಸಾಮಾನ್ಯವಾಗಿ ಧನುರ್ಮಾಸದ ಅಂತಿಮ ದಿನದಂದು ಶ್ರೀರಂಗನಾಥ ಮತ್ತು ಗೋದಾದೇವಿಯ ಕಲ್ಯಾಣವನ್ನು ನಡೆಸುತ್ತಾರೆ. ವೈಷ್ಣವ ದೇವಾಲಯಗಳಲ್ಲಿ ಏಕೈಕ ಸ್ತ್ರೀ ಆಳ್ವಾರ್ ಎಂದೇ ಹೆಸರು ವಾಸಿಯಾಗಿರುವ ಗೋದಾದೇವಿ ರಚಿಸಿರುವಂತಹಾ ಪಾಶುರಗಳಿಂದಲೇ ಭಗವಂತನನ್ನು ಸ್ತುತಿಸುತ್ತಾರೆ. ಪರಮ ವಿಷ್ಣು ಭಕ್ತೆಯಾದ ಗೋದಾದೇವಿ ಭಗವಂತನ ಹೃದಯದಲ್ಲಿ ಶಾಶ್ವತ ಸ್ಥಾನವನ್ನು ಸಂಪಾದಿಕೊಂಡಿದ್ದಾಳೆ.ತಿರುಮಲೆಯ ದೇವಾಲಯದಲ್ಲೂ ಧನುರ್ಮಾಸದಲ್ಲಿ ಸುಪ್ರಭಾತದ ಬದಲು ಗೋದಾದೇವಿ ರಚಿಸಿರುವಂತಹಾ ಪಾಶುರಗಳನ್ನು ಶ್ರೀನಿವಾಸನ ಎದಿರು ಸ್ತುತಿಸುತ್ತಾರೆ. ಗೋದಾದೇವಿ ದಕ್ಷಿಣಭಾರತದಲ್ಲಿನ ಮಹಿಳೆಯರಿಗೆ ಆದರ್ಶ ಭಕ್ತಾಗ್ರಣಿಯಾಗಿದ್ದಾಳೆ. ಮಾರ್ಗಶಿರ ಮಾಸದ ಶುಕ್ಲಪಕ್ಷ ಏಕಾದಶಿಯನ್ನು ಮೋಕ್ಷದ ಏಕಾದಶಿ ಎಂದೂ ಕರೆಯಲಾಗುತ್ತದೆ. ವೇದಗಳಿಂದ ವಿಶೇಷ ಪ್ರಾರ್ಥನೆಗಳು ಹಾಗೆಯೇ ಉತ್ತರ ದ್ವಾರದರ್ಶನ ಈ ದಿನದ ಪ್ರತ್ಯೇಕತೆ ! ವಿಷ್ಣು ಪುರಾಣದ ಪ್ರಕಾರ ವೈಕುಂಠ ಏಕಾದಶಿಯಂದು ಉಪವಾಸವನ್ನು ಆಚರಿಸುವುದು ಅತ್ಯಂತ ವಿಹಿತವಾದ ಧರ್ಮವೆಂದು ವೇದಗಳು ಸಾರುತ್ತಿವೆ.

ಈ ಏಕಾದಶಿಯನ್ನು ಮುಕ್ಕೋಟಿ ಏಕಾದಶಿ ಎಂದೂ ಕರೆಯಲಾಗುತ್ತದೆ.ಈ ವಿಶೇಷ ದಿನದಂದು ಮುರಾಸುರನ ಮೇಲೆ ವಿಷ್ಣುವು ವಿಜಯವನ್ನು ಸಾಧಿಸಿದ ದಿನವೆಂದು ಪದ್ಮಪುರಾಣದಲ್ಲಿ ತಿಳಿಸಲಾಗಿದೆ. ಇದನ್ನು ಶಯನೀ ಏಕಾದಶಿ ಎಂದೂ ಕರೆಯುತ್ತಾರೆ. ಅಂದು ಭೂವೈಕುಂಠವೆನಿಸಿದ ತಿರುಮಲೆಯಲ್ಲಿ ನೆಲೆಸಿರುವ ಶ್ರೀ ಶ್ರೀನಿವಾಸನ ದರ್ಶನ ಪಡೆದು ಕೃತಾರ್ಥರಾಗುವ ಸೌಭಾಗ್ಯ ಎಲ್ಲ ಭಕ್ತರಿಗೂ ಆ ಭಗವಂತನೂ ಕರುಣಿಸಲಿ.

ಗೋವಿಂದ!! ಗೋವಿಂದ!! ಗೋವಿಂದ!!



# ಮಕರ ಸಂಕ್ರಾಂತಿ

- ಡಾ|| ಎ. ಕುಮುದ
9731903752

ಆದಿತ್ಯದೇವ ತ್ವತ್ಪಾದಯುಗಳಕೆ ಅಭಿ
ವಾದನ ಮಾಳ್ಪೆ ಅನುದಿನ । ಅನುದಿನದಿ ಸಜ್ಜನರ
ವ್ಯಾಧಿಗಳ ಕಳೆದು ಸುಖವೀಯೋ ॥

ಮಾನವರು, ಪಶು ಪಕ್ಷಿ, ಪ್ರಾಣಿ ಮುಂತಾದವುಗಳಿಗೆ ಸೂರ್ಯನ ಶಾಖ, ಮತ್ತು ಬೆಳಕು ಅತ್ಯವಶ್ಯಕ. ಸೂರ್ಯನು ಮೂರು ಲೋಕಗಳನ್ನೂ ಪ್ರಕಾಶಗೊಳಿಸುವನು,ಅಲ್ಲದೆ ಒಂದೊಂದು ತಿಂಗಳೂ ಒಂದೊಂದು ರಾಶಿಯಲ್ಲಿ ಪ್ರವೇಶಿಸುವನು. ಸೂರ್ಯನು ಧನುರಾಶಿಯಲ್ಲಿ ಸಂಚರಿಸಿದಾಗ ಧನುರ್ಮಾಸ ಎನ್ನಲಾಗುವುದು. ಹಾಗೇ ಧನುರಾಶಿಯಿಂದ ಮಕರ ರಾಶಿಗೆ ಪ್ರವೇಶಿಸಿ ಸಂಚರಿಸಿದಾಗ 'ಮಕರ ಸಂಕ್ರಮಣ', 'ಮಕರ ಸಂಕ್ರಾಂತಿ" ಎನ್ನುತ್ತೇವೆ. ಸೂರ್ಯನು ದಕ್ಷಿಣದಿಂದ ಉತ್ತರದಿಕ್ಕಿಗೆ ಪಥ ಸಂಚಲನ ಮಾಡಿದಾಗ ಆ ದಿನವನ್ನು 'ಉತ್ತರಾಯಣ ಪುಣ್ಯಕಾಲ' ಎನ್ನುವರು. ಆ ಪರ್ವಕಾಲದಲ್ಲಿ ಪವಿತ್ರ ನದಿ ಹಾಗೂ ಸಮುದ್ರ ಸ್ನಾನಕ್ಕೆ ಹೆಚ್ಚು ಪ್ರಾಶಸ್ತ್ಯ ಅದರಿಂದ ಪುಣ್ಯ ಸಂಪಾದನೆ ಯಾಗುವುದೆಂಬ ನಂಬಿಕೆಯಿದೆ. ಈ ಮಕರ ಸಂಕ್ರಾಂತಿಯನ್ನು 'ಹುಗ್ಗಿಹಬ್ಬ' ಎಂತಲೂ ಕರೆಯುವರು.

ರೈತರು ವರ್ಷವಿಡೀ ಕಷ್ಟಪಟ್ಟು ಬೆಳೆದು ಕಾಪಾಡಿದ ಹೊಸಬೆಳೆಯನ್ನು ರಾಶಿ ಮಾಡುವರು, ಹಾಗೆ ಅದನ್ನು ಭಕ್ತಿಯಿಂದ ಪೂಜಿಸಿ ಸಂಭ್ರಮಿಸುವರು. ಅದನ್ನು 'ಸುಗ್ಗಿ ಹಬ್ಬ" ಎಂದೂ ಕರೆಯುವರು. ಈ ಸಂಭ್ರಮವನ್ನು ಕುವೆಂಪು ಅವರು ತಮ್ಮ ಒಂದು ಕವನದಲ್ಲಿ "ಸುಗ್ಗಿ ಬರೆ ಹಿಗ್ಗುತಿರೆ, ಸಗ್ಗ ಸೊಗವ ತರುತಿದೆ" ಎಂದು ಸುಗ್ಗಿ ಹಬ್ಬವನ್ನು ಬಣ್ಣಿಸಿರುವರು.

'ಬಂದಿತು ಬಂದಿತು ಸಂಕ್ರಾಂತಿ
ತಂದಿತು ಮನಕೆ ಸುಖ ಶಾಂತಿ । ಎಂಬಂತೆ

ಮಕರ ಸಂಕ್ರಾಂತಿಯ ದಿನ ಮುಂಜಾನೆ ಮನೆಯ ಹಿರಿಯರು ಮಕ್ಕಳು ಎಲ್ಲರೂ ಎಳ್ಳೆಣ್ಣೆ ಹಚ್ಚಿಕೊಂಡು ಅಭ್ಯಂಜನ ಮಾಡಿ ಹೊಸ ವಸ್ತ್ರಗಳನ್ನು ಧರಿಸುವರು. ನಂತರ ಇಷ್ಟದೈವವನ್ನು ಹಾಗೂ ಸೂರ್ಯನನ್ನೂ ಪೂಜಿಸುವರು. ಎಳ್ಳು ಬೆಲ್ಲ ಕಬ್ಬು ಕಡಲೆಕಾಯಿ ಎಲ್ಲವನ್ನೂ ನಿವೇದಿಸುವರು. ಹಾಗೇ ಆ ದಿನದ ಅಡಿಗೆಯಲ್ಲೂ ಎಳ್ಳನ್ನು ಉಪಯೋಗಿಸುವುದು ವಿಶೇಷ. ಗೋವಿನಲ್ಲಿ ಮುವತ್ತಮೂರು ಕೋಟಿ ದೇವತೆಗಳೂ ಇರುತ್ತಾರೆಂಬ ಅನುಸಂಧಾನದಿಂದ ಗೋವನ್ನೂ ಭಕ್ತಿಯಿಂದ ಪೂಜಿಸುವರು.

ರೈತರು ಎತ್ತುಗಳ ಮೈತೊಳೆದು ವಿಶೇಷವಾಗಿ ಸಿಂಗರಿಸುವರು. ಸಂಜೆ ದೀಪ ಹಚ್ಚುವ ಹೊತ್ತಿನಲ್ಲಿ ಕಿಚ್ಚನ್ನು ಏರ್ಪಡಿಸಿ ಹಾಯಿಸುವರು, ಅವುಗಳಿಗೆ ದೃಷ್ಟಿ ತಾಕಬಾರದೆಂಬ ಉದ್ದೇಶ.

ಸಂಕ್ರಮಣದ ನಿಮಿತ್ತ ಪಿತೃದೇವತೆಗಳಿಗೆ ತರ್ಪಣ ಕೊಡುವ ವಾಡಿಕೆಯೂ ಇದೆ. ಉತ್ತರಾಯಣದಲ್ಲಿ ಮರಣ ಹೊಂದಿದ ವ್ಯಕ್ತಿಯು ಮುಕ್ತಿ ಪಡೆಯುತ್ತಾರೆಂಬ ನಂಬಿಕೆ ಇದೆ. ಭೀಷ್ಮಾಚಾರ್ಯರು ಇಚ್ಛಾಮರಣಿ, ಆದುದರಿಂದ ಅವರು ಉತ್ತರಾಯಣ ಬರುವವರೆಗೂ ಶರಮಂಚದ ಮೇಲೇ ಮಲಗಿ ಉತ್ತರಾಯಣ ಬಂದ ನಂತರ ಶ್ರೀಕೃಷ್ಣ ಪರಮಾತ್ಮನ ದರ್ಶನ ಮಾಡಿದ ಮೇಲೆ ಹರಿಪಾದ ಸೇರಿದರೆಂದು ಮಹಾಭಾರತ ಪುರಾಣದಿಂದ ತಿಳಿದು ಬರುತ್ತದೆ.

ಬೆಂಗಳೂರಿನ ಬಸವನಗುಡಿಯಲ್ಲಿರುವ ಗವಿಗಂಗಾಧರೇಶ್ವರ ಗುಡಿಯಲ್ಲಿರುವ ಶಿವಲಿಂಗದ ಮೇಲೆ ಸರಿಯಾಗಿ ಸೂರ್ಯನ ಕಿರಣವು ಸಂಕ್ರಮಣ ಸಮಯದಲ್ಲಿ ಬೀಳುತ್ತದೆ. ಅದನ್ನು ವೀಕ್ಷಿಸಲು ಸಾವಿರಾರು ಜನರು ಕಾತರದಿಂದ ಕಾಯುತ್ತಿರುತ್ತಾರೆ. ಇನ್ನೊಂದು ವಿಶೇಷವೆಂದರೆ ಕೂಡಲ ಸಂಗಮದಲ್ಲಿ ಮಿಂದರೆ ಸಕಲ ಪಾಪಗಳೂ ಪರಿಹಾರವಾಗುವುದೆಂಬ ನಂಬಿಕೆಯೂ ಇದೆ.

ಮಕರ ಸಂಕ್ರಾಂತಿಯ ಹಿಂದಿನ ದಿನ ಭೋಗಿ ಹಬ್ಬ ಎಂದು ಕೆಲವರಲ್ಲಿ ಆಚರಣೆಯಿದೆ. ಆ ದಿನದಂದು ಸುಮಂಗಲಿಯರು ಅಡಿಗೆಯ ಪರಿಕರಗಳು, ಅರಿಶಿನ ಕುಂಕುಮ, ಎಣ್ಣೆ, ಬಾಚಣಿಗೆ, ಕನ್ನಡಿ ಮುಂತಾದ ಪದಾರ್ಥಗಳನ್ನು ಹಾಗೂ ಹೊಸದಾದ ಫಲಗಳಾದ ಗೆಣಸು, ಅವರೆಕಾಯಿ, ಸಿಹಿ ಕುಂಬಳ ಮತ್ತು



ದಕ್ಷಿಣೆ ಎಲ್ಲವನ್ನು ಒಂದು ಮೊರದಲ್ಲಿ ಇಟ್ಟು ಅಭ್ಯಂಜನಕ್ಕೆ ಮೊದಲು ಮುತ್ತೈದೆಯರನ್ನು ಕರೆದು ಕಾಲಿಗೆ ಜಾವಳ ಹಚ್ಚಿ ಮಂಗಲದ್ರವ್ಯದೊಂದಿಗೆ ಭೋಗಿ ದಾನ ವನ್ನು ಕೊಡುವ ಪದ್ಧತಿಯಿದೆ.

ಹೊಸದಾಗಿ ಮದುವೆಯಾದ ಹೆಣ್ಣು ಮಕ್ಕಳು ಮಕರ ಸಂಕ್ರಾಂತಿಯ ಬಾಗಿನವನ್ನು ಐದು ಜನ ಮುತ್ತೈದೆಯರಿಗೆ ಕೊಡಬೇಕು. ಮೊದಲ ವರ್ಷ ಯಾವುದಾದರೂ ಒಂದು ಹಣ್ಣನ್ನು ಐದು ಸಂಖ್ಯೆಯಲ್ಲಿ ಅರಿಶಿನ, ಕುಂಕುಮ, ಬಳೆ, ಕುಪ್ಪಸದಬಟ್ಟೆ, ಎಳ್ಳು ಬೆಲ್ಲ, ಕಬ್ಬು, ಎಲೆ, ಅಡಿಕೆ ದಕ್ಷಿಣೆ ಸಹಿತ ಕೊಡುವುದು ಪದ್ಧತಿಯಿದೆ. ಅದನ್ನು ಪ್ರತಿ ವರ್ಷ ಐದರಂತೆ ಹೆಚ್ಚಿಸಿಕೊಂಡು ಐದನೆಯವರ್ಷ ಇಪ್ಪತ್ತೈದು ಹಣ್ಣನ್ನು ಐದು ಜನರಿಗೆ ಕೊಡಬೇಕು. ಅಂದಿನ ದಿನ ಸಿಹಿ ಮತ್ತು ಕಾರಾ ಹುಗ್ಗಿ ಮಾಡಿ ಶ್ರೀಹರಿಗೆ ನಿವೇದಿಸಿ ಸಂತಸದಿಂದ ಭೋಜನ ಮಾಡಬೇಕು. ಎಳ್ಳು ಬೆಲ್ಲವನ್ನು ಬಂಧು ಬಳಗ ಹಿತೈಷಿಗಳಿಗೆ ವಿತರಿಸಿ ಎಳ್ಳು ಬೆಲ್ಲ ತಿಂದು ಒಳ್ಳೆ ಮಾತನಾಡಬೇಕು. ಎಳ್ಳಿನಲ್ಲಿರುವ ಕಹಿ ಅಂಶವನ್ನು ಬಿಟ್ಟು ಬೆಲ್ಲದ ಸಿಹಿಯನ್ನು ಜೀವನಪೂರ್ತಿ ಹಿಡಿದಿರಬೇಕು. ಪುಷ್ಯ ಮಾಸದ ಮಕರ ಸಂಕ್ರಾಂತಿ ವೇಳೆ ಚಳಿ ಇರುವುದರಿಂದ ದೇಹಕ್ಕೆ ಜಿಡ್ಡಿನ ಅಂಶ ಬೇಕಾಗಿರುವುದರಿಂದ ಎಳ್ಳು ಕೊಬ್ಬರಿ ಸೇವನೆ ಒಳ್ಳೆಯದು. ಸಂಕ್ರಾಂತಿಯ ದಿನ ಸಂಜೆ ಐದು ವರ್ಷದ ಒಳಗಿನ ಮಕ್ಕಳಿಗೆ ಫಲ ಎರೆದು ಆರತಿ ಮಾಡಿ ಆಶೀರ್ವದಿಸುತ್ತಾರೆ.





# ಭಗವದ್ಗೀತೆಯಲ್ಲಿ ಗಾಯಿತ್ರಿ ಮಂತ್ರಚಿಂತನೆ

ವಿ. ನಾಗೇಂದ್ರ ಪ್ರಸಾದ್

98454 00816

**ಹಿಂದಿನ ಸಂಚಿಕೆಯಿಂದ**

ಗಾಯಿತ್ರಿಮಂತ್ರದ ಅರ್ಥವನ್ನು ಶ್ರೀಮಧ್ವಾಚಾರ್ಯರು ಋಗ್ಭಾಷ್ಯದ ಪ್ರಾರಂಭದಲ್ಲಿ ಹೀಗೆ ವರ್ಣಿಸಿದ್ದಾರೆ.

"ಓಮಶೇಷಗುಣಾಧಾರ ಇತಿ ನಾರಾಯಣೋಽಪ್ಯ ಸೌ ।
ಪೂರ್ಣೋಭೂತಿವರೋಽನಂತಸುಖೋಯದ್ ವ್ಯಾಹೃತೀರಿತಃ ।
ಗುಣೈಸ್ತತಃ ಪ್ರಸವಿತಾ ವರಣೀಯೋ ಗುಣೋನ್ನತೇ।
ಭಾರತಿ ಜ್ಞಾನರೋಪತ್ವಾದ್ಭರ್ಗೋಧ್ಯೇಯೋಽ ಖಿಲೈರ್ಜನೈಃ ।
ಪ್ರೇರಕೋಽ ಶೇಷ ಬುದ್ಧೀನಾಂ ಗಾಯತ್ರ್ಯರ್ಥಃಸ ಈರಿತಃ ॥

**ಓಂ**

ಓಂ ಶಬ್ದಕ್ಕೆ ಸಕಲಗುಣಪರಿಪೂರ್ಣ, ಪ್ರಣವ, ತಾರ ಹೀಗೆ ನಾನಾ ಅರ್ಥಗಳಿವೆ. ಶ್ರೀಮಧ್ವಾಚಾರ್ಯರು ಜಿಜ್ಞಾಸಾಧಿಕರಣದ ಪ್ರಾರಂಭದಲ್ಲಿ ಓತತ್ವವಾಚೀ ಓಂಕಾರೋ ವಕ್ತ್ಯಸೌ ತತ್ಗುಣೋತತಮ್" ಓಂಕಾರಕ್ಕೆ ಗುಣ ಪರಿಪೂರ್ಣ ಎಂದು ಅರ್ಥ ಮಾಡಿದ್ದಾರೆ (ಅನು ವ್ಯಾಖ್ಯಾನ). ಓಂಕಾರಕ್ಕೆ ಪ್ರಣವ ಎಂಬ ಅರ್ಥವಿದೆ. ಸೃಷ್ಟಿಯ ಪ್ರಾರಂಭದಲ್ಲಿ ಭಗವಂತನ ಮುಖದಿಂದ ಬಂದ ಮೊದಲ ಅಕ್ಷರ ಓಂ ಆದ್ದರಿಂದ ಓಂಕಾರಕ್ಕೆ ಪ್ರಣವ ಎಂದು ಹೆಸರು (ಬ್ರಹ್ಮಸೂತ್ರ ಭಾಷ್ಯ). ಓಂಕಾರಕ್ಕೆ ತಾರ ಎಂಬ ಅರ್ಥವಿದೆ. ತಾರ ಎಂದರೆ ತರಣ ದಾಟುವುದು ಎಂದರ್ಥ (ತಾರಯತೀತಿ ತಾರಃ) ಓಂಕಾರವನ್ನು ಜಪಿಸುವವನು ಸಂಸಾರದ ಸಮುದ್ರವನ್ನು ದಾಟುವನು (ತಾರಯೇದ್ ಯದ್ ಭವಾಂಬೋಧೇಃ ಸ್ವಜ ಪಾಸಕ್ತ ಮಾನಸಾನ್ । ತತಸ್ತಾರ ಇತಿ ಇತಿ ಸ್ಕಾಂದೇ). ಗೀತೆಯಲ್ಲಿ ತಾನು ಗುಣಪರಿಪೂರ್ಣ ಎಂದು ಉದ್ಗಲಕ್ಕೂ ಕೃಷ್ಣ ಕಂಠತಃ ಹೇಳಿದ್ದಾನೆ. "ಓಮಿತ್ಯೇ ಕಾಕ್ಷರಂ ಬ್ರಹ್ಮ ವ್ಯಾಹರನ್ ಮಾಮನುಸ್ಮರನ್।ಯಃ ಪ್ರಯಾತಿ ತ್ಯಜನ್ ದೇಹಂ ಸ ಯಾತಿ ಪರಮಾಂ ಗತಿಂ॥ (8/13) ಯಾರು ಓಂಕಾರ (ಗುಣ ಪರಿಪೂರ್ಣ)ವನ್ನು ಉಚ್ಚರಿಸಿ ದೇಹತ್ಯಾಗ ಮಾಡುತ್ತಾರೋ ಅವರು ಈ ಸಂಸಾರ ಸಮುದ್ರದಿಂದ ದಾಟಿ ಉತ್ತಮ ಗತಿ ಹೊಂದುತ್ತಾನೆ. "ತೇಜೋಮಯಂ ವಿಶ್ವಮನಂತಮಾದ್ಯಂ".(11-47) ಇಲ್ಲಿ ವಿಶ್ವಶಬ್ದಕ್ಕೆ ಶ್ರೀಮಧ್ವಾಚಾರ್ಯರು ಗುಣಪರಿಪೂರ್ಣ ಎಂದು ಅರ್ಥೈಸಿದ್ದಾರೆ (ವಿಶ್ವ ನಾಮಾ ಸ ಭಗವಾನ್ಯತಃ ಪೂರ್ಣಗುಣಃ ಪ್ರಭುಃ - ಇತಿ ಪಾದ್ಮೇ)

**ಭೂಃ**

ಭೂಃ ಶಬ್ದಕ್ಕೆ ಪರಿಪೂರ್ಣ, ಒಂದೊಂದು ಗುಣಗಳಿಂದಲೂ ಪೂರ್ಣ ಎಂಬರ್ಥವಿದೆ. ಒಂದೊಂದು ಗುಣಗಳಿಂದಲೂ ಪೂರ್ಣ ಎಂದು ಅರ್ಥಮಾಡಿದಾಗ ಕಾಲದ ಆನಂತ್ಯವನ್ನು ಅರ್ಜುನನಿಗೆ ಹೀಗೆ ಹೇಳುತ್ತಾನೆ "ನ ತ್ವೇ ವಾಹಂ ಜಾತು ನಾಸಂ ನ ತ್ವಂ ನೇಮೇ ಜನಾಧಿಪಾಃ॥ ನ ಚೈವ ನ ಭವಿಷ್ಯಾಮಃ ಸರ್ವೇ ವಯಮತಃ ಪರಂ॥ (2-12) ನಾನು ಯಾವ ಕಾಲದಲ್ಲಿ ಇರಲಿಲ್ಲವೆಂದಲ್ಲ ಹಿಂದೆ ಈಗ ಹಾಗೂ ಮುಂದೆ ಎಂದೆಂದೂ ಇರುತ್ತೇನೆ ಎಂದು ಕಾಲದಿಂದ ಪರಮಾತ್ಮ ಪೂರ್ಣ ಎಂಬುದನ್ನು ಧೃಢಪಡಿಸಿದ್ದಾನೆ. ಪರಿಪೂರ್ಣ ಎಂಬ ಅರ್ಥ ಇಟ್ಟುಕೊಂಡರೆ ಅರ್ಜುನ ಕೃಷ್ಣನನ್ನು ಪರಿಪೂರ್ಣನೆಂದು ಹೀಗೆ ಕೊಂಡಾಡುತ್ತಾನೆ "ಪರಂಬ್ರಹ್ಮ ಪರಂಧಾಮ ಪವಿತ್ರಂ ಪರಮಂ ಭವಾನ್ । ಪುರುಷಂ ಶಾಶ್ವತಂ ದಿವ್ಯಮಾದಿ ದೇವಮಜಂ ವಿಭುಮ್॥ (10/12) ನೀನು ಪರಬ್ರಹ್ಮ, ಪರಮ ನೆಲೆ,ಪರಮಪವಿತ್ರ, ನೀನು ಗುಣಪೂರ್ಣ,ನಿರ್ವಿಕಾರ,



ಲೀಲಾಮಯ,ಆದಿದೇವ ಹುಟ್ಟಿಲ್ಲದವ,ಸರ್ವತ್ರ ವ್ಯಾಪ್ತನೆಂದು ಎಲ್ಲ ಋಷಿಗಳೂ ನಾರದರೂ ಕೊಂಡಾಡುವರು ಎಂದು ನೀನೇ ಸ್ವತಃ ನನಗೆ ಹೇಳುತ್ತಿರುವೆ.

**ಭುವಃ**

ಭುವಃ ಎಂಬ ಶಬ್ದಕ್ಕೆ ಷಡ್ಗುಣೈಶ್ವರ್ಯ ಸಂಪನ್ನ ಅಥವ ಭೂತಿ ಎನಿಸುವ ಮಹಾಲಕ್ಷ್ಮಿಗಿಂತಲೂ ಶ್ರೇಷ್ಠ ಎಂಬ ಅರ್ಥ. ಲಕ್ಷ್ಮಿಗಿಂತಲೂ ಶ್ರೇಷ್ಠ ಎಂಬ ಅರ್ಥವನ್ನು ವಿವಿಕ್ಷೆ ಮಾಡಿದಾಗ, (ಯೇ ತು ಸರ್ವಾಣಿ ಕರ್ಮಾಣಿ ಮಯಿ ಸನ್ಯಸ್ಯ ಮತ್ಪರಾಃ। ಅನನ್ಯೇನೈವ ಯೋಗೇನ ಮಾಂ ಧ್ಯಾಯಂತ ಉಪಾಸತೇ।। (12-6) “ಯಾರು ಎಲ್ಲ ಕರ್ಮಗಳನ್ನು ನನ್ನಲ್ಲಿ ಸಮರ್ಪಿಸಿ ನಾನೇ ಸರ್ವೋತ್ತಮನೆಂದು ತಿಳಿದವರಾಗಿ ಲಕ್ಷ್ಮೀದೇವಿಯನ್ನು ಉಪಾಸನೆ ಮಾಡದೆ ಅಥವಾ ಲಕ್ಷ್ಮಿಬ್ರಹ್ಮಾದಿಗಳು ನನ್ನ ಅಧೀನರೆಂದು ತಿಳಿದು ಧ್ಯಾನಿಸುತ್ತಾರೋ ಅಂತಹವರನ್ನು ಮೃತ್ಯುರೂಪವಾದ ಸಂಸಾರವೆಂಬುವ ಸಮುದ್ರದಿಂದ ಶೀಘ್ರವಾಗಿ ದಾಟಿಸುವೆನು”ಎಂದು ಕೃಷ್ಣ ಹೇಳುತ್ತಾನೆ. ಶ್ರೀಮಧ್ವಾಚಾರ್ಯರು ಗೀತಾ ತಾತ್ಪರ್ಯದಲ್ಲಿ ಲಕ್ಷ್ಮೀದೇವಿಯಿಂದಲೂ ವಿಷ್ಣುವು ಸರ್ವೋತ್ತಮ, ಪರಮಮಹದ್ಬ್ರಹ್ಮನು ಅಂದರೆ ಲಕ್ಷ್ಮೀದೇವಿಗಿಂತಲೂ ವಿಷ್ಣುವು ಸರ್ವೋತ್ತಮನಾದ್ದರಿಂದ ಲಕ್ಷ್ಮೀದೇವಿಯ ಪ್ರಸಾದವು ಸ್ವತಂತ್ರವಾಗಿ ಮೋಕ್ಷಕ್ಕೆ ಕಾರಣವಲ್ಲ (ತಸ್ಯಾಸ್ತು ಪರಮೋ ವಿಷ್ಣುರ್ಯೋ ಬ್ರಹ್ಮಪರಮಂ ಮಹದಿತಿ ಬ್ರಹ್ಮಾಂಡಪುರಾಣ). ಶ್ರೀಮದ್ಭಾಗವತದ 3/12/2 ನೆ ಶ್ಲೋಕದಲ್ಲಿ ಪರಮಮಹಾನ್ ಎಂದು ಉಲ್ಲೇಖವಿದೆ. ಶ್ರೀಮಧ್ವಾಚಾರ್ಯರು ಗೀತಾಭಾಷ್ಯದಲ್ಲಿ ಪರಮ ಮಹತ್ ಎಂದರೆ “ದೇಶತಃ ಕಾಲತಃ ಗುಣತಃ ಅನಂತನಾಗಿದ್ದಾನೆ”ಎಂದು ಬ್ರಹ್ಮತರ್ಕದ ವಾಕ್ಯವನ್ನು ಕೊಟ್ಟು ಸಮರ್ಥಿಸಿದ್ದಾರೆ “ಯಸ್ಮಾತ್ ಕ್ಷರಮತೀತೋಽಹಮಕ್ಷರಾದಪಿ ಚೋತ್ತಮ” (15/18) ಎಂಬಲ್ಲಿ ಕ್ಷರ ಎಂದರೆ ಜೀವರು, ಅಕ್ಷರ ಎಂದರೆ ಮಹಾಲಕ್ಷ್ಮಿ ಇವರಿಬ್ಬರಿಗಿಂತಲೂ ನಾನೇ ಶ್ರೇಷ್ಠ ಎಂದು ಹೇಳಿದ್ದಾನೆ. ಪುರುಷ ಶಬ್ದಕ್ಕೆ ನಾನಾ ಅರ್ಥಗಳಿವೆ ಅವುಗಳಲ್ಲಿ ಶ್ರೇಷ್ಠನಾದ ಷಡ್ಗುಣೈಶ್ವರ್ಯ ಸಂಪನ್ನ ಎಂಬ ಅರ್ಥವೂ ಇದೆ. ಪುರು+ಷ =ಶ್ರೇಷ್ಠ ನಾದ+ಷಡ್ಗುಣಶ್ವರ್ಯ ಸಂಪನ್ನನಾದ ಎಂದು ಅರ್ಥ ಮಾಡಿದರೆ ಭುವಃ ಶಬ್ದದ ಅರ್ಥವಾಗುತ್ತದೆ. ಸ್ವಾರಸ್ಯವೆಂದರೆ ಗೀತೆಯ ಸಾರವಾದ ಹದಿನೈದನೆಯ ಅಧ್ಯಾಯದ ಇಪ್ಪತ್ತು ಶ್ಲೋಕಗಳಲ್ಲಿ ಪುರುಷ ಶಬ್ಧ ಐದು ಬಾರಿ ಬಳಕೆಯಾಗಿದೆಯೆಂದರೆ ಕೃಷ್ಣನೇ ಸರ್ವೋತ್ತಮನೆಂದು ನಿಸಃಂಶಯವಾಗಿ ತಿಳಿಯುತ್ತದೆ.

**ಸ್ವಃ**

ಸ್ವಃ ಶಬ್ದಕ್ಕೆ ಸುಖ ಸ್ವರೂಪಿ ಎಂಬ ಅರ್ಥವನ್ನು ವಿವಕ್ಷೆ ಮಾಡಿದಾಗ, “ಸಿದ್ದಾನಾಂ ಕಪಿಲೋ ಮುನಿಃ (10-26) ” ಎಂಬ ಶ್ಲೋಕದಿಂದ ಭಗವಂತ ಸುಖಸ್ವರೂಪಿ ಎಂದು ಶ್ರೀಮಧ್ವಾಚಾರ್ಯರು ಯುಕ್ತಿಯ ಮೂಲಕ ಸಮನ್ವಯವನ್ನು ತೋರಿಸಿದ್ದಾರೆ ಎಂದರೆ ಖ ಎಂದರೆ ಸುಖ ಪ ಎಂದರೆ ಪಾಲನೆ ಸಂರಕ್ಷಯತಿ ಲ ಎಂದರೆ ಲೀಯತೇ ಸಂಹಾರಕರ್ತ ಪರಮಾತ್ಮ ಸುಖ ಸ್ವರೂಪಿ ಜಗತ್ಪಾಲಕ ಹಾಗೂ ಸಂಹಾರ ಕರ್ತ ಎಂದು ಅರ್ಥ (ಸುಖರೂಪಃ ಪಾಲ್ಯತೇ ಲೀಯತೇ ಚ ಜಗದನನೇನೇತಿ ಕಪಿಲಃ) ಕ ಎಂದರೆ ಪ್ರೀತಿ ಸುಖ ಆನಂದ ಎಂದು ಅಭಿದಾನದ (ಕೋಶ) ಅರ್ಥವನ್ನು ಹೇಳಿದ್ದಾರೆ. ತಾವು ಹೇಳಿದ ಅರ್ಥಕ್ಕೆ ಬಾಭ್ರವ್ಯಶಾಖೆಯೆಂಬ ಗ್ರಂಥದ ಪ್ರಮಾಣವನ್ನು ಕೊಡುತ್ತಾರೆ. “ಸುಖಾದನಂತಾ ತ್ಪಾಲನಾಲ್ಲಾಪನಾಚ್ಚ ಯಂ ವೈ ದೇವಂ ಕಪಿಲ ಮುದಾಹರಂತಿ”.

(ಮುಂದುವರೆಯುತ್ತದೆ.)



# ಪ್ರಕೃತಿಗೆ ಕೃತಜ್ಞತೆ ಸೂಚಿಸುವ ಸಂಕ್ರಾಂತಿ

- ಎ. ಆರ್. ರಘುರಾಮ್
99161 38436



ಸೂರ್ಯನು ವಿಶ್ವದ ಆತ್ಮ, ಜಗತ್ತಿನ ಕಣ್ಣು. ಮಳೆ ಬೀಳಲು,ಬೆಳೆ ಬೆಳೆಯಲು,ಇಳೆ ಬೆಳಗಲು ಸೂರ್ಯನೇ ಕಾರಣ. ಆದ್ದರಿಂದ ನಮ್ಮ ವೇದೋಪನಿಷತ್ತುಗಳು 'ಸೂರ್ಯಾತ್ಮಾ ಜಗತಃ ತಸ್ಥುಷಶ್ಚ' ಎಂದು ವಿಶ್ವಕ್ಕೆ ಸಾರಿದವು. ಸೂರ್ಯದೇವನ ದಿವ್ಯ ತೇಜಸ್ಸಿನಿಂದ ನಮಗೆ ಸಿದ್ಧಿ, ಬುದ್ಧಿ, ಸಮೃದ್ಧಿ ಅನುಗ್ರಹವಾಗಬೇಕೆಂಬುದು ಸಕಲ ಜೀವರಾಶಿಗಳ ಪ್ರಾರ್ಥನೆ. ಸೂರ್ಯನು ನಿತ್ಯ ನೂತನ. ಈತ ಒಂದು ರಾಶಿಯಿಂದ ಮತ್ತೊಂದು ರಾಶಿಗೆ ಪ್ರವೇಶಿಸುವ ಪರ್ವಕಾಲದಲ್ಲಿ ಸಮಸ್ತ ಜೀವಜಗತ್ತಿನ ಪರವಾಗಿ ನಾವೆಲ್ಲರೂ ಆತನಿಗೊಂದು ಧನ್ಯವಾದ ಹೇಳದಿದ್ದರೆ ಹೇಗೆ?

ಅದಕ್ಕಾಗಿಯೇ ನಮ್ಮ ಪೂರ್ವಜರು ಸುಗ್ಗಿಯ ಹಿಗ್ಗು, ದವಸ-ಧಾನ್ಯಗಳ ರಾಶಿಯ ನಡುವೆ ಸೂರ್ಯನ ಮೂಲಕ ಸಮಸ್ತ ನಿಸರ್ಗಕ್ಕೆ ಕೃತಜ್ಞತೆ ಸೂಚಿಸಲು ಒಂದು ದಿನವನ್ನು ಗುರುತು ಮಾಡಿಕೊಟ್ಟರು.ಅದಕ್ಕೆ ಹಬ್ಬವನ್ನು ನಿಗದಿಪಡಿಸಿದರು. ಅದುವೇ ಸಂಭ್ರಮದ ಸಂಕ್ರಾಂತಿ.

ಸಾಮಾನ್ಯವಾಗಿ ಪುಷ್ಯಮಾಸವೆಂದರೆ ಅದು ಸುಗ್ಗಿಯ ಕಾಲ. ಹಿಂಗಾರು ಬೆಳೆ ಬರುವ ಸಂದರ್ಭ. ಹೊಸ ಭತ್ತದ ಫಸಲು ಮನೆ ತುಂಬುವ ಕಾಲ. ಹೀಗಾಗಿ ಸಮೃದ್ಧವಾದ ಬೆಳೆದ ಭತ್ತವನ್ನು ಕುಟ್ಟಿ, ಹೊಸ ಅಕ್ಕಿಯಲ್ಲಿ ಸಿಹಿ ಮಾಡಿ ಅನ್ನ ನೀಡಿದ ನಿಸರ್ಗ ದೇವರಿಗೆ ಕೃತಜ್ಞತೆ ಅರ್ಪಿಸುವ ಸಂಪ್ರದಾಯ ಭಾರತೀಯ ಸಂಸ್ಕೃತಿಯಲ್ಲಿ ಹಾಸು ಹೊಕ್ಕಾಗಿದೆ.

ಹೌದು, ಈ ನಿಸರ್ಗದಿಂದ ಗಾಳಿ, ನೀರು, ಬೆಳಕು ಮಾತ್ರವಲ್ಲ, ಸಮಗ್ರ ಬದುಕಿನ ಪ್ರತಿಯೊಂದು ಸೌಲಭ್ಯವನ್ನೂ ಅನಾದಿ ಕಾಲದಿಂದಲೂ ಉಚಿತವಾಗಿ ಪಡೆಯುತ್ತಿರುವ ನಾವು ಇಷ್ಟೆಲ್ಲಾ ಕೊಟ್ಟ ದೇವರಿಗೆ (ನಿಸರ್ಗಕ್ಕೆ) ಒಂದು ಕೃತಜ್ಞತೆ ಹೇಳಬೇಕಲ್ಲವೆ? ಖಂಡಿತಾ ಹೌದು.ಒಂದು ಸಣ್ಣ ಉಪಕಾರ ಮಾಡಿದವರಿಗೂ ನಾವು ಧನ್ಯವಾದ ಹೇಳುತ್ತೇವೆ. ಕಷ್ಟಕಾಲದಲ್ಲಿ ಕೈ ಹಿಡಿದವರನ್ನು ಆಗಾಗ್ಗೆ ಸ್ಮರಿಸುತ್ತೇವೆ.

ಆದರೆ ಎಷ್ಟೆಲ್ಲಾ ಕೊಟ್ಟ ಪ್ರಕೃತಿಯನ್ನೂ, ಭಗವಂತನನ್ನೂ ಮರೆಯುತ್ತೇವೆ. ಹೀಗೆ ಮರೆಯುವುದನ್ನು ನೆನಪಿಸುತ್ತಾ ಪ್ರಕೃತಿಯ ವಿಕಾಸ-ವಿಲಾಸದ ನಡುವೆ, ಚಳಿರಾಯನ ಕಚಗುಳಿಯ ಮಧ್ಯೆ,ಶ್ರದ್ಧೆ, ಸಂಸ್ಕಾರ, ಸಂಸ್ಕೃತಿಗಳ ಮೂಸೆಯಿಂದ ಪಲ್ಲವಿಸಿಕೊಂಡು ಬರುವ ಸಂಭ್ರಮದ ಆಚರಣೆಯೇ ಸಂಕ್ರಾಂತಿ.

ಸಂಕ್ರಾಂತಿ ಕೇವಲ ಮನೆ ಹಬ್ಬವಲ್ಲ, ಇದು ಸಮಾಜದ ನಡುವೆ ನಮ್ಮ ಪ್ರೀತಿ, ವಿಶ್ವಾಸ, ಬಂಧತ್ವವನ್ನು ಬೆಸೆಯುವ ವಿಶೇಷ ಆಚರಣೆ.ಪ್ರಾದೇಶಿಕವಾಗಿ ಹಬ್ಬದಾಚರಣೆ ಹೆಸರು ಭಿನ್ನವಾಗಿದ್ದರೂ ದೇಶದ ತುಂಬೆಲ್ಲಾ ಆಚರಿಸುವ ಸುಗ್ಗಿ ಹಬ್ಬವಿದು.

**ಉತ್ತರಾಯಣ ಪುಣ್ಯಕಾಲ:**

ವಾಸ್ತವವಾಗಿ ಸೂರ್ಯದೇವನು ದಕ್ಷಿಣಾಯನದಿಂದ ಉತ್ತರಾಯಣವನ್ನು ಪ್ರವೇಶಿಸುವ ದಿನವೇ ಸಂಕ್ರಾಂತಿ. ಇದು ಸಂಕ್ರಮಣ ಕಾಲವಾದ್ದರಿಂದ ಇದಕ್ಕೆ ಮಕರ ಸಂಕ್ರಮಣ ಎಂಬ ಹೆಸರು ಬಂದಿದೆ. ಈ ದಿನವನ್ನು ಉತ್ತರಾಯಣ ಪುಣ್ಯಕಾಲವೆಂದೂ ಕರೆಯುತ್ತಾರೆ.

ಗ್ರಾಮೀಣ ಭಾಗದಲ್ಲಿ ಸುಗ್ಗಿಯ ಹಬ್ಬಕ್ಕಾಗಿ ಹೊಸ ಮಡಕೆ ಇಟ್ಟು, ಹೊಸ ಅಕ್ಕಿಯಲ್ಲಿ ಮಾಡುವ ಸಿಹಿ ಪೊಂಗಲ್

ಬಲು ರುಚಿ. ಅದಕ್ಕಾಗಿಯೇ ವಿಶೇಷವಾಗಿ ಎಲ್ಲರ ಮನೆಯಲ್ಲೂ ಅಂದು ಸಿಹಿ ಪೊಂಗಲ್ ಮಾಡುತ್ತಾರೆ. ಹೀಗಾಗೇ ಈ ಹಬ್ಬಕ್ಕೆ ಪೊಂಗಲ್ ಎಂದೂ ಹೆಸರು ಬಂದಿದೆ. ಮೈಸೂರು ಸೀಮೆಯಲ್ಲಿ ಪೊಂಗಲ್‌ಗೆ ಹುಗ್ಗಿ ಎನ್ನುತ್ತಾರೆ. ಅಂದು ಮುಂಜಾನೆ ತೈಲಾ ಭ್ಯಂಜನ ಮಾಡಿ, ಕುಲದೇವರ ಮುಂದೆ ಎಳ್ಳು - ಬೆಲ್ಲ, ಸಕ್ಕರೆ ಅಚ್ಚನ್ನಿಟ್ಟು ನೈವೇದ್ಯ ಮಾಡಿ, ಮನೆಗೆ ಬಂದವರಿಗೆಲ್ಲಾ ಅದನ್ನು ಹಂಚುತ್ತಾ 'ಎಳ್ಳು ಬೆಲ್ಲ ತಿಂದು ಒಳ್ಳೆಯ ಮಾತನಾಡೋಣ ಎಂದು ಹಾರೈಸುವುದು ವಾಡಿಕೆ.

**ಸ್ವರ್ಗದ ಬಾಗಿಲು ತೆರೆಯುವ ಕಾಲ :**

ಉತ್ತರಾಯಣ ಎಂದರೆ ಅದು ಸ್ವರ್ಗದ ಬಾಗಿಲು ತೆರೆದಿರುವ ಕಾಲ. ಭಗವದ್ಗೀತೆಯ 8 ನೇ ಅಧ್ಯಾಯದ 24 ನೇ ಶ್ಲೋಕ ಹೀಗಿದೆ.

ಅಗ್ನಿ ಜ್ಯೋತಿರ್ ಅಹಃ ಶುಕ್ಲ ಃ
ಷಣ್‌ಮಾಸ ಉತ್ತರಾಯಣಂ ।
ತತ್ರ ಪ್ರಯಾತಾ ಗಚ್ಛಂತಿ
ಬ್ರಹ್ಮ ಬ್ರಹ್ಮವಿದೋ ಜನಾಃ॥

ಉತ್ತರಾಯಣ ಕಾಲದಲ್ಲಿ ಎಲ್ಲಾ ಕಾರ್ಯಗಳು ಹೆಚ್ಚು ಶ್ರೇಯಸ್ಕರವಾಗಿ ನಡೆಯುತ್ತವೆ. ಸ್ವರ್ಗದ ಬಾಗಿಲು ತೆರೆದಿರುತ್ತದೆ. ಮುಕ್ತಿಯನ್ನು ಹೊಂದಲಿರುವ ಸೂತ್ರದ ಬಗ್ಗೆ ಈ ಶ್ಲೋಕದಲ್ಲಿ ವಿವರಿಸಲಾಗಿದೆ. ಅರ್ಥಾತ್, ಅಗ್ನಿ, ಜ್ಯೋತಿ, ಹಗಲು ಶುಕ್ಲ ಪಕ್ಷ ಉತ್ತರಾಯಣದ ಆರು ತಿಂಗಳುಗಳಲ್ಲಿ ಬ್ರಹ್ಮವಿದರಾದ ಯೋಗಿಗಳ ಪ್ರಾಣಗಳು ಬ್ರಹ್ಮದಲ್ಲಿ ವಿಲೀನವಾಗುವುದು. ಇದು ಮುಕ್ತಿಯ ಕಡೆಗಿರುವ ಯಾತ್ರೆಯಾಗಿದೆ.ಸಂಕ್ರಾಂತಿ ದಿನ ಪಿತಾಮಹ ಭೀಷ್ಮರು ಇಚ್ಛಾ ಮರಣ ಹೊಂದಿದ ದಿನ.ಈ ಕಾಲ ದೇವತೆಗಳಿಗೆ ಹಗಲು, ರಕ್ಕಸರಿಗೆ ರಾತ್ರಿ ಎಂಬ ನಂಬಿಕೆ ಇದೆ.

ಪ್ರಕೃತಿಯ ಸುಗ್ಗಿಯನ್ನು ಸಂಭ್ರಮದಿಂದಲೇ ಆಹ್ವಾನಿಸುವ, ಸಂತಸದಿಂದ ಆಹ್ವಾನಿಸುವ, ನಲಿವ ಪರ್ವಕಾಲವಿದು. ಭಾರತದೆಲ್ಲೆಡೆಯಲ್ಲೂ ಹೊಸ ಧಾನ್ಯಗಳಿಗೆ ಪೂಜಿಸಿ ಅಡುಗೆ ಮಾಡುವುದು ಸಾಮಾನ್ಯ. ಬೆಳೆಗಳನ್ನು ಕೊಯ್ದು, ಕಣದಲಿ ತುಂಬಿ, ಧಾನ್ಯಗಳ ರಾಶಿ ಹಾಕಿ ಸಮೃದ್ಧ ಬೆಳೆ ನೀಡಿದ ಭೂಮಿ ತಾಯಿಗೆ,ತನ್ನ ಅಗಾಧ ತೇಜಸ್ಸಿನ ಮೂಲಕ ಬೆಳೆಗಳು ಹುಲುಸಾಗಿ ಬೆಳೆಯಲು ಕಾರಣಿಕನಾದ ಆದಿತ್ಯನನ್ನು ಭಕುತಿಯಿಂದ ಆರಾಧಿಸುವುದಕ್ಕೆ ಇರುವ ಸುದಿನವೇ ಈ ಸಂಕ್ರಾಂತಿ.

**ಸಾಧಕರಿಗೆ ಇದು ಸತ್ಕಾಲ:**

ಗರುಡ ಪುರಾಣದಲ್ಲಿ ನಾಭಿಸ್ಥಾನವು ಶನಿ ಸ್ಥಾನವೆಂದು ಹೇಳಲ್ಪಟ್ಟಿದೆ. ನಾಭಿ ಕಮಲದಿಂದ ಸೃಷ್ಟಿಕರ್ತನಾದ ಬ್ರಹ್ಮ ಹುಟ್ಟಿದನೆಂದು ಪುರಾಣ ಸಾರಿದೆ. ಯಾವಾಗ ಶರೀರದ ಈ ಪ್ರದೇಶವನ್ನು ಶನಿ ಪ್ರದೇಶವೆಂದು ಹೇಳಿದರೋ ಆಗ ಈ ಪ್ರದೇಶಕ್ಕೆಲ್ಲ ಮಹತ್ವ ಶನಿಕಾರಕನೆಂದಾಯಿತು. ಈ ತಿಂಗಳಿನಲ್ಲಿ ಎಳ್ಳು ತಿಂದರೆ ಶನಿಯ ಉಪದ್ರವ ಶಮನವಾಗುತ್ತದೆಂಬುದು ತಾತ್ಪರ್ಯ.

ಮಕರಸಂಕ್ರಾಂತಿಯ ಕಾಲದಲ್ಲಿ ತೀರ್ಥಸ್ನಾನ ಮಾಡುವುದರಿಂದ ಮಹಾಪುಣ್ಯ ದೊರೆಯುತ್ತದೆ ಎನ್ನುವುದು ಭಾರತೀಯರ ನಂಬಿಕೆ. ಹಾಗಾಗಿ ಪವಿತ್ರ ನದಿಗಳಲ್ಲಿ ಸಂಗಮಗಳಲ್ಲಿ ಶ್ರದ್ಧಾಳುಗಳು ಸ್ನಾನ ಮಾಡುತ್ತಾರೆ. ಈ ದಿನ ಪಂಚಾಂಗದ ನಿರಯನ ಪದ್ಧತಿಗೆ ಅನುಸಾರ ಸೂರ್ಯನ ಉತ್ತರಾಯಣ ಚಲನೆ ಪ್ರಾರಂಭವಾಗುತ್ತದೆ. ಉತ್ತರಾಯಣದಲ್ಲಿ ಮೃತನಾದ ವ್ಯಕ್ತಿ ನೇರವಾಗಿ ಸ್ವರ್ಗಕ್ಕೆ ಹೋಗುತ್ತಾರೆ ಎಂದು ನಂಬಲಾಗಿದೆ. ಹಾಗಾಗಿಯೇ ಭೀಷ್ಮರು ಉತ್ತರಾಯಣದಲ್ಲಿ ದೇಹ ತ್ಯಾಗ ಮಾಡಿದರು. ಈ ದಿನ ಸೂರ್ಯೋದಯದಿಂದ ಸೂರ್ಯಾಸ್ತದವರೆಗಿನ ವಾತಾವರಣವು ಅಧಿಕ ಚೈತನ್ಯಮಯ ಹೀಗಾಗಿ ಇದು ಸಾಧಕರಿಗೆ ಸತ್ಕಾಲವಾಗಿದೆ.

**ದಾನದಿಂದ ಪುಣ್ಯ ಇಮ್ಮಡಿ :**

ನಮ್ಮ ಹಬ್ಬ ಹರಿದಿನಗಳ ಖದರು ಒಂದು ರೀತಿ ವಿಶೇಷವಾದಂಥವು.ಕೇವಲ ನಾವು ತಿಂದು, ಉಂಡು, ಸಂಭ್ರಮ ಪಟ್ಟರೆ ಸಾಲದು.ತನ್ನಂತೆ ಪರರ ಬಗೆದೊಡೆ.ಜೀವಿಸು ಮತ್ತು ಜೀವಿಸಲು ಬಿಡು - ಎಂಬ ತತ್ವದಂತೆ ನಮ್ಮ ಶಕ್ತಿಗೆ ಅನುಸಾರವಾಗಿ ಆತ್ಮ ಪೂರಕವಾಗಿ ದಾನ ಮಾಡಬೇಕೆಂದು ಶಾಸ್ತ್ರಗಳು ಹೇಳಿವೆ. ಇದಕ್ಕೆ ಹಬ್ಬ-ಹರಿದಿನಗಳು-ಪರ್ವಕಾಲಗಳು ಪ್ರಶಸ್ತ, ಮಕರ ಸಂಕ್ರಾಂತಿಯಿಂದ ರಥಸಪ್ತಮಿವರೆಗಿನ ಕಾಲವು ಪರ್ವ ಕಾಲ.ಈ ಅವಧಿಯಲ್ಲಿ ಮಾಡಿದ ದಾನ ಮತ್ತು ಪುಣ್ಯ ಕರ್ಮಗಳು ಇಮ್ಮಡಿಸಿ ವಿಶೇಷ ಫಲವನ್ನು ಕೊಡುತ್ತವೆ.

**ಬಾಲೆಯರಿಗೆ ಸಂಭ್ರಮ :**

ಸಂಕ್ರಾಂತಿ ಹಬ್ಬದ ದಿನ ಸಂಜೆಯ ಹಿಗ್ಗೇ ಒಂದು ರೀತಿ ಭಿನ್ನ. ಎಳ್ಳು ಬೀರುವ ಸೊಬಗು, ಸೊಗಸು ಬಲುಚಂದ. ಒಲವು - ನಲಿವುಗಳಿಂದ ಅಲಂಕಾರ ಮಾಡಿಕೊಂಡು, ಗೆಳತಿಯರೊಡಗೂಡಿ ಸಂಭ್ರಮದಿಂದ ಮನೆ ಮನೆಗೆ ಎಳ್ಳು ಬೀರಲು ತೆರಳುವ ಬಾಲೆಯರ ಸಂಭ್ರಮ ಅನನ್ಯ. ಆ ದಿನ ಹೊಸದಾಗಿ ಮದುವೆಯಾದ ಹೆಣ್ಣು ಮಕ್ಕಳು ಮೊಗ್ಗಿನ ಜಡೆ ಹಾಕಿಕೊಂಡು, ಹೊಸ ಸೀರೆಯುಟ್ಟು ನೆಂಟರು ಮತ್ತು ಗೆಳೆಯರ ಮನೆಗೆ ತೆರಳಿ ಕಬ್ಬಿನ ತುಂಡಿನ ಜೊತೆ ಎಳ್ಳು-ಬೆಲ್ಲ ಬೀರುವ ವಾಡಿಕೆ ಇದೆ. ಸಂಕ್ರಾಂತಿಯ ಮುನ್ನಾ ದಿನವನ್ನು ಭೋಗಿಹಬ್ಬ ಎಂದೂ, ಎರಡನೆಯ ದಿನ ಸಂಕ್ರಾಂತಿಯೆಂದೂ ಮೂರನೆಯ ದಿನ

ಕನೂ ಹಬ್ಬ ಎಂದೂ ಹಲವೆಡೆ ಆಚರಿಸ ಲಾಗುತ್ತದೆ. ಕರುನಾಡಿನಲ್ಲಿ ಈ ಹಬ್ಬವನ್ನು ಉಪಕಾರದ ಸಂಕೇತವಾಗಿ ಆಚರಿಸ ಲಾಗುತ್ತದೆ.

**ಸಂಕ್ರಾಂತಿ ಕುರಿತು ಒಂದು ಕವಿವಾಣಿ ಹೀಗಿದೆ.**

ಮುಕ್ತವಾಯಿತು ಮಾಘ ಮಾಸದ
ಕೊರೆವ ಶೀಥಲ ಶಾಪವು
ತೀವ್ರ ತಪದಲಿ ಕೊಚ್ಚಿ ಹೋಯಿತು
ಹಳೆಯ ಜಡತೆಯ ಶಾಪವು...

ಎಳ್ಳು ಬೆಲ್ಲವನ್ನು ತಿಂದು ನಾವೆಲ್ಲರೂ ಒಳ್ಳೆಯ ಮಾತನಾಡೋಣ, ಎಂದು ಹಾರೈಸುವುದು ಈ ಕಾರಣ ಕ್ಕಾಗಿಯೇ. ಹಳೆಯ ಜಾಡ್ಯ, ವೈಮನಸ್ಸು ಕಳಚಿ, ಹೊಸ ಬದುಕನ್ನು ಆರಂಭಿಸುವ ಸಂದೇಶ ಇಲ್ಲಿ ಧ್ವಾಳಾಯಿಸಿದೆ. ಸಂಕ್ರಾಂತಿ ಎಂಬುದು ಅಪ್ಪಟ ಹಳ್ಳಿಗರ ಹಬ್ಬ. ಗ್ರಾಮೀ ಣರ ಮಾಸಲೋಲ್ಲಾಸ, ನಿಸರ್ಗ ಮತ್ತು ಜಾನುವಾರುಗಳನ್ನು ದೇವರೆಂದು ಪೂಜಿ ಸುವ ಪರ್ವಕಾಲ. ಬೆಳೆಯೊಂದಿಗೆ ಕಳೆ ಗಳನ್ನೂ ಗೌರವಿಸುವ ಅಭೂತ ಪೂರ್ವ ಸಂದರ್ಭ. ನೆಲದ ಫಲವತ್ತತೆ ಪ್ರತಿನಿಧಿ ಸುವ ಅಣ್ಣೇ ಹೂವು, ಅಗನಿ ಹೂವುಗ ಆಗೂ ವಿಶೇಷ ಪ್ರಾಶಸ್ತ್ಯ ಕೊಡುವ ಮಹತ್ತು ಇಲ್ಲಿ ಅಡಗಿದೆ. ಇದನ್ನೆಲ್ಲಾ ನಾವು ಅರ್ಥ ಮಾಡಿಕೊಳ್ಳಬೇಕಿದೆ. ಕಿರಿಯರಿಗೆ ತಿಳಿಸ ಬೇಕಿದೆ. ಆಗ ಮಾತ್ರ ಹಬ್ಬದ ರಂಗು ಎಲ್ಲೆಡೆ ಪಸರಿಸುತ್ತದೆ. ಸಂಸ್ಕೃತಿ- ಸಂಸ್ಕಾರ ಮುಂದಿನ ಪೀಳಿಗೆಗೂ ಹಸಿರಾಗಿ ಉಳಿ ಯುತ್ತದೆ.

**ದೇಶದ ವಿವಿಧೆಡೆ ಆಚರಣೆ:**

ಸಂಕ್ರಾಂತಿ ಕೇವಲ ಒಂದು ರಾಜ್ಯದ ಹಬ್ಬವಲ್ಲ. ಭರತಖಂಡದ ಹಬ್ಬ. ನಮ್ಮ ದೇಶದ ಉದ್ದಗಲಕ್ಕೂ ವಿವಿಧ ಹೆಸರಿ ನಲ್ಲಿ ಆಚರಿಸುವ ಬಹು ದೊಡ್ಡ ಸಂಭ್ರಮಾ ಚರಣೆ. ಕರ್ನಾಟಕ, ತಮಿಳುನಾಡು,ಆಂಧ್ರ, ತೆಲಂಗಾಣಗಳಲ್ಲಿ ಸರಿ ಸುಮಾರು ಒಂದೇ ಸಮಯಕ್ಕೆ ಆಚರಿಸಲ್ಪಡುವ ಸಂಕ್ರಾಂತಿ ಹಬ್ಬದ ಮೂಲ ಹಿನ್ನೆಲೆ ಒಂದೇ ಆದರೂ ಮಾಡುವ ನಡೆ ನುಡಿಯಲ್ಲಿ ತುಸು ಬಿನ್ನಾಣ ಗಳಿವೆ. ಈ ಹಬ್ಬಕ್ಕೆ ಹಲವು ಹೆಸರುಗಳಿವೆ. ಕೆಲವರು ಹಿಗ್ಗಿನಿಂದ ಸುಗ್ಗಿ ಎಂದರೆ, ಮತ್ತೆ ಕೆಲವರು ಪೊಂಗಲ್ ಎನ್ನುತ್ತಾರೆ. ಪಂಜಾಬ್ ಮತ್ತು ಹರಿಯಾಣಗಳಲ್ಲಿ ಸಂಕ್ರಾಂತಿಗೆ ಲೋಹರಿ ಎಂಬ ಹೆಸರಿದೆ. ಗುಜರಾತ್ ಮತ್ತು ಮಹಾರಾಷ್ಟ್ರಗಳಲ್ಲಿ ಸಂಕ್ರಾಂತಿಯ ದಿನ ಗಾಳಿಪಟ ಹಾರಿ ಬಿಡುವ ಸಂಪ್ರದಾಯವುಂಟು.

ಕೊರೆಯುವ ಚಳಿಗೆ ಮರಗಿಡದ ಎಲೆಗಳು ಉದುರಿ ವಸಂತಕ್ಕೆ ಹೊಸ ಚಿಗುರು ಪಡೆಯುವಂತೆ ಈ ದೇಹದಿಂದ ಆತ್ಮ ಬೇರೆಯಾಗಿ ಮತ್ತೊಂದು ಜನುಮ ಪಡೆಯುತ್ತದೆ. ನಿಸರ್ಗದ ಪ್ರಕ್ರಿಯೆಗಳಿಗೂ-ನಿತ್ಯ ಜೀವನಕ್ಕೂ ಅವಿನಾಭಾವ ಸಂಬಂಧವಿದೆ. ಇದನ್ನು ಸಾಂಕೇತಿಕವಾಗಿ ಸೂಚಿಸುವುದು ಕೂಡ ಸಂಕ್ರಾಂತಿಯ ವೈಶಿಷ್ಟ್ಯಗಳಲ್ಲಿ ಒಂದು.

ಎಳ್ಳುಬೆಲ್ಲ ಮೆಲ್ಲುತ ಒಳ್ಳೆಯವರಾಗೋಣ
ಕಹಿಯನ್ನು ಮರೆತು ಸೌಹಾರ್ದ ಸಾರೋಣ
ವಿಶ್ವಗಾನಕೆ ಮಧುರ ಧ್ವನಿಗೂಡಿಸೋಣ
ಜೀವನ ಪ್ರೀತಿಗೆ ನವಭಾಷ್ಯ ಬರೆಯೋಣ....



## ರಸಪ್ರಶ್ನೆಗಳು

## ನವೆಂಬರ್ 2022 ತಿಂಗಳ 4 ರಸಪ್ರಶ್ನೆಯ ಉತ್ತರಗಳು

1. ಕಾರ್ತಿಕ ಶುಕ್ಲ ಪಂಚಮಿ
2. ಲಕ್ಷ್ಮೀದೇವಿ
3. ಹಸುವಿನ ತುಪ್ಪ
4. ಭೃಗುಮಹರ್ಷಿ
5. ಆಶ್ವೀಜ ಹುಣ್ಣಿಮೆ - ಕಾರ್ತಿಕ ಹುಣ್ಣಿಮೆ
6. ಶ್ರೀವೇಣುಗೋಪಾಲ, ಶ್ರೀನಾಗೇಶ್ವರ, ಶ್ರೀಮಾರುತಿ
7. ಸುಪ್ರಭಾತ ಸೇವೆ
8. ದೇವಶರ್ಮ
9. ಪದ್ಮನಾಭತೀರ್ಥರು
10. ಇಬ್ರಾಹಿಂಪುರದಲ್ಲಿ
11. ತಿರುಮಲೆ
12. ಕುಕ್ಕೆ ಸುಬ್ರಹ್ಮಣ್ಯ ದೇವಾಲಯ
13. ಅಲಮೇಲು ಮಂಗಮ್ಮ, ಪದ್ಮಾ ವತಿ ಅಮ್ಮನವರು.
14. ಆಮೆ
15 ಅಲಮೇಲು ಮಂಗಮ್ಮ



# ದೈತ್ಯ ತಾರತಮ್ಯ - ಒಂದು ವಿಶ್ಲೇಷಣೆ

- ಡಾ॥ ರಾಮಚಂದ್ರದಾಸ್ ಸಿ.ಜೆ.
9483384584

**ಹಿಂದಿನ ಸಂಚಿಕೆಯಿಂದ**

ಗರ್ಭದಲ್ಲಿರುವಾಗ ತ್ರಿವಿಧ ಜೀವಿಗಳಿಗೆ ಸಪ್ತಮ ಮಾಸದಲ್ಲಿ, ನೂರು ಜನ್ಮಗಳ ಸ್ಮರಣೆ ಬರುತ್ತದೆ. ಸಜ್ಜೀವಿ ಹರಿನಾಮಸ್ಮರಣೆ ಮಾಡಿ ಪಾಪ ಪರಿಹಾರ ಮಾಡಿಕೊಂಡರೆ, ನಿತ್ಯ ಸಂಸಾರಿ ಉದಾಸೀನರಾಗಿರುತ್ತಾರೆ. ದೈತ್ಯರಿಗಾದರೋ ತಾವು ಶ್ರೀಹರಿಗೆ ಮಾಡಿದ ನೂರು ಜನ್ಮಗಳ ದ್ರೋಹ ಸ್ಮರಿಸಿ ದ್ವೇಷಿಸುತ್ತಾರೆ. ಇದರಿಂದ ಗರ್ಭವಾಸ ದುಃಖ ಮತ್ತುಷ್ಟು ಅಧಿಕವಾಗಿ, ಜನನದ ನಂತರವೂ ಇದು ಮುಂದುವರೆಯುತ್ತದೆ. ದೈತ್ಯರು ಸರ್ವದಾ ಸರ್ವತ್ರ ಭಗವಂತನ ದ್ವೇಷ ಮಾಡುತ್ತಲೇ ಇರುತ್ತಾರೆ. ತತ್ವಾಭಿಮಾನಿ ದೇವತೆಗಳನ್ನು ನಾವು ನಿತ್ಯದಲ್ಲಿ ನಮಸ್ಕರಿಸುವಾಗ,

ನಮೋಸ್ತು ತಾತ್ವಿಕಾ ದೇವಾಃ
ವಿಷ್ಣು ಭಕ್ತಿ ಪರಾಯಣಾ ॥
ಧರ್ಮ ಮಾರ್ಗೇ ಪ್ರೇರಯಂತು ।
ಭವಂತ ಸರ್ವ ಏವಹಿ ॥

ಎಂದು ಸ್ತೋತ್ರ ಮಾಡಿ ಪುಣ್ಯ ಸಾಧನೆ ಮಾಡಿಕೊಳ್ಳುತ್ತೇವೆಯೋ,ಹಾಗೆಯೇ ತತ್ವಾಭಿಮಾನಿ ದೈತ್ಯರನ್ನು ಇದಕ್ಕೆ ವಿರುದ್ಧವಾಗಿ ಅಂದರೆ, ನಿಂದಿಸಬೇಕು ಎಂದರ್ಥ.ಹಾಗೆ ನಿಂದಿಸದೆ ಸ್ತೋತ್ರ ಮಾಡಿದರೆ ಅವನೂ ಸಹ ಭಗವದ್ವೇಷಿ, ದೈತ್ಯನಂತೆ ಎಂಬುದು ನಿಸ್ಸಂಶಯ ಎಂಬುದಾಗಿ ಗರುಡ ಪುರಾಣದಲ್ಲಿ,

"ದೈತ್ಯ ನಿಂದಾಂ ನಕುರ್ವಂತಿ, ತೇಪಿ ತತ್ಫಲ ಭಾಗಿನಃ" ಎಂದಿದೆ.

ಇದನ್ನೇ ದಾಸರಾಯರು ಹರಿಕಥಾಮೃತಸಾರದಲ್ಲಿ,

ದ್ವೇಶಿ ದೈತ್ಯರ ತಾರತಮ್ಯದ
ದೂಶಣೆಯ ಭೂಷಣಗಳೆನ್ನದೆ ।
ದೋಶವೆಂಬುವ ದ್ವೇಶಿ ನಿಶ್ಚಯ ವಿವರ ನೋಡಲ್ಕೆ ।
ಕ್ಲೇಶಗಳನೈದುವನು ಬಹುವಿಧ
ಸಂಶಯವು ಬಡಸಲ್ಲ ವೇದ - ।
ವ್ಯಾಸ ಗರುಡಪುರಾಣದಲಿ ಪೇಳಿದರು ಋಷಿಗಳಿಗೆ ॥

ಎಂದು ಹೇಳಿದ್ದಾರೆ. ಆದ್ದರಿಂದ

ನೀಚಾಧಿಷ್ಠಾನದಲಿ ಹರಿಯ ಪೂಜಿಸದಿರು ।
ಯೋಚಿಸು ವಿಜಯವಿಠಲನಧಿಕಾರಿಯಲ್ಲಿ ॥

ಎಂದಿದ್ದಾರೆ. ಯಾವ ಅಧಿಷ್ಠಾನದಲ್ಲಿ ಅಂತರ್ಗತ ಭಗವದ್ರೂಪಗಳನ್ನು ಉಪಾಸನೆ ಮಾಡುತ್ತೇವೆಯೋ, ಆ ಅಧಿಷ್ಠಾನದ ಮೂಲಕವೇ ಭಗವಂತನು ಫಲಗಳನ್ನು ನೀಡುತ್ತಾನೆ. ಹೇಗೆಂದರೆ, ಸಾರವತ್ತಾದ ಕೆಂಪು ಮಣ್ಣು ಮತ್ತು ಸಿಹಿ ನೀರಿನ ಅಧಿಷ್ಠಾನದಲ್ಲಿ ಬೆಳೆದ ಮಾವಿನ ಮರದಲ್ಲಿನ ಹಣ್ಣು ಸಾರಯುಕ್ತವಾಗಿ ಮಧುರವಾಗಿರುತ್ತದೆ. ಕಪ್ಪು ಮಣ್ಣು ಮತ್ತು ಉಪ್ಪು ನೀರಿನ ಅಧಿಷ್ಠಾನದಲ್ಲಿ ಬೆಳೆದ ಮಾವಿನ ಮರದಲ್ಲಿ ಹುಳಿ ಅಥವಾ ತತ್ಸಮಾನ ರುಚಿ ಪ್ರಾಪ್ತವಾಗಿರುತ್ತದೆ. ಚೌಗು ಭೂಮಿಯಲ್ಲಿ ಬೆಳೆದ ಮಾವಿನ ಮರದಲ್ಲಿ ಹಣ್ಣು ಕಹಿಯಾಗಿಯೋ ಅಥವಾ ವಿಚಿತ್ರವಾದ ರುಚಿ ಹೊಂದಿರಲು ಸಾಧ್ಯ. ಹಾಗೆಯೇ ನೀಚ ಅಧಿಷ್ಠಾನದಲ್ಲಿ ಉಪಾಸಿಸಿದರೆ, ಆ ಅಧಿಷ್ಠಾನದಲ್ಲಿನ ಜೀವನ ಪಾಪ ಕರ್ಮಗಳ ಮುಖಾಂತರವೇ ಫಲಗಳನ್ನು, ಅಂದರೆ ಅಲ್ಲಿನ ಅಂತರ್ಗತ ದೈತ್ಯರ ಪಾಪದ ಫಲಗಳ ಮುಖಾಂತರ ಫಲವನ್ನು, ಅಂತರ್ಗತ ಭಗವದ್ರೂಪದ ಪ್ರೇರಣೆಯಿಂದ ಪಡೆಯಲಾಗುತ್ತದೆ. ಅಸಾತ್ವಿಕ ಅಂಗಡಿಯಲ್ಲಿ ಸಾತ್ವಿಕ ಪಾನೀಯ ಹೇಗೆ ದೊರೆಯುವುದಿಲ್ಲವೋ ಹಾಗೆ . ಆದ್ದರಿಂದ ನೀಚ ಅಧಿಷ್ಠಾನದಲ್ಲಿ ಉಪಾಸಿಸಿದರೆ ಅದರಲ್ಲಿದ್ದುದನ್ನು

ಪಡೆಯಬಹುದೇ ಹೊರತು ಬೇರೆ ದೊರೆಯಲು ಸಾಧ್ಯವಿಲ್ಲ ಎಂಬ ಭಾವ.

ಶ್ರೀ ಜಗನ್ನಾಥದಾಸರು ಹರಿಕಥಾಮೃತಸಾರದಲ್ಲಿ ದೈತ್ಯ ತಾರತಮ್ಯ ಸಂಧಿಯಲ್ಲಿ,

ಮಾರುತನ ಗದೆಯಿಂದ ಅಂಗಶ
ರೀರ ಪೋದಾನಂತರ ತಮೋ - ।
ದ್ವಾರವೈದಿ ಸ್ವರೂಪದುಃಖಗಳನ್ನು ಭ್ರಮಿಸುತಿಹರು ॥
ವೈರ ಹರಿಭಕ್ತರಲಿ ಹರಿಯಲಿ
ತಾರತಮ್ಯದಲಿರುತಿಹರು ಸಂ -
ಸಾರದಲ್ಲಿ ತಮಸಿನಲಿಯತ್ಯಧಿಕ ಕಲಿಯಲ್ಲಿ ॥

ವಾಯುದೇವರ ಗದಾ ಪ್ರಹಾರದಿಂದ ಅಂಗಭಂಗವನ್ನು ಹೊಂದಿದ ದೈತ್ಯರು, ಹರಿಯಲ್ಲೂ ಹರಿಭಕ್ತರಲ್ಲೂ ಮಾಡುವ ದ್ವೇಷದ ಪರಿಯನ್ನನುಸರಿಸಿ ತಾರತಮ್ಯ ಪ್ರಕಾರ ಅಂದರೆ ದ್ವೇಷವನ್ನು ಹೆಚ್ಚು ಮಾಡುವವರಿಗೆ ಸ್ವರೂಪ ದುಃಖಗಳು ಹೆಚ್ಚಾಗಿಯೂ, ದ್ವೇಷ ಕಮ್ಮಿ ಮಾಡುವವರಿಗೆ ಕಮ್ಮಿಯಾಗಿಯೂ, ತಾರತಮ್ಯವನ್ನನುಸರಿಸಿ, ಮನುಷ್ಯಾಧಮರಿಗೆ ತಮಸ್ಸಿನಲ್ಲಿ ನಿತ್ಯ ಸಂಸಾರದಲ್ಲಿಯೇ ದುಃಖವು, ಮಿಕ್ಕವರಿಗೆ ಸ್ವರೂಪ ದುಃಖದಲ್ಲೇ ತಾರತಮ್ಯಾನುಸಾರ ದುಃಖಾನುಭವವು ಆಗುತ್ತದೆ. ಕಲಿಗೆ ಮಾತ್ರ ಎಲ್ಲರಕ್ಕಿಂತಲೂ ಅಧಿಕವಾದ ದುಃಖಾನುಭವ ವಾಗುವುದು.

ತತೋಂಧಂಪ್ರವಿಶಂತ್ಯೇತೆ ತಾರತಮ್ಯೇನ ಸರ್ವಶಃ।
ತಮಸಂಧ್ಯೇಪಿ ಸಂಸಾರೇ ನಾತ್ರ ಕಾರ್ಯ ವಿಚಾರಣಾ ॥

ಎಂಬ ಗರುಡಪುರಾಣದ ವಾಕ್ಯ ಇದಕ್ಕೆ ಆಧಾರ. ತತ್ವಾಭಿಮಾನಿ ದೈತ್ಯರು ಯಾರು ಯಾರು ಎಂಬುದನ್ನು ಈ ಪದ್ಯದಲ್ಲಿ ವಿಷದಪಡಿಸಿದ್ದಾರೆ

ಮದಿರಪಾನೀ ದೈತ್ಯಗಣದೊ । -
ಳಧಮರೆನಿಪರು ಕಾಲಿಕೇಯರು ।
ಅಧಿಕರಿಗೆ ಸಮರಹರು ದೇವಾವೇಶ ಬಲದಿಂದ ॥
ವದನ ಪಾಣೀ ಪಾದ ಶ್ರೋತ್ರಿಯ ।
ಗುದ ಉಪಸ್ಥ ಘ್ರಾಣ ತ್ವಗ್ರಸನ ।
ಕಧಿಪದೈತ್ಯರು ನೀಚರೆನಿಪರು ಕಾಲಿಕೇಯರಿಗೆ ॥

ಈ ಪದ್ಯದಲ್ಲಿ ತತ್ವಾಭಿಮಾನಿ ದೈತ್ಯರ ತಾರತಮ್ಯವು ಗರುಡಪುರಾಣದಲ್ಲಿ 'ತಸ್ಮಾಚ್ಛತಗುಣೈರ್ಹೀನೋ ಚಿತ್ತಮಾನ್ಯ ಸುರೋ ಮಹಾನ್ ... ॥' ಎಂದು ಶೃತಪಡಿಸಿರುವ ತಾರ ತಮ್ಯಕ್ಕೆ ವಿರೋಧದಂತೆ ಭಾಸವಾದರೂ,ಅಧಮರಾದ ದೈತ್ಯ ರನ್ನು ಕೆಲವು ಸ್ಥಳಗಳಲ್ಲಿ ಉತ್ತಮ ಗಣದಲ್ಲಿ ಸೇರಿಸುವು ದುಂಟು. ಅಲ್ಲಿ ತಾತ್ಕಾಲಿಕವಾದ ದೇವಾವೇಶ ಬಲದಿಂದ ಹಾಗೆ ಹೇಳಿರುವರೆಂದು, ಗರುಡಪುರಾಣ ವಾಕ್ಯದಿಂದ ವಿರೋಧ ಪರಿಹಾರ ಮಾಡಿಕೊಂಡು ಸಮನ್ವಯ ಮಾಡಿಕೊಳ್ಳಬೇಕು.

ಇಲ್ಲಿ ಇಂದ್ರಿಯಾಭಿಮಾನಿ ದೈತ್ಯರು ಕಾಲಿಕೇಯರಿ ಗಿಂತಲೂ ನೀಚರೆಂದು ಹೇಳುತ್ತಿದ್ದಾರೆ.

ಕಾಲಿಕೇಯರಿಗಿಂತಲೂ ಚಿತ್ತಮಾನಿ ದೈತ್ಯರು 100 ಗುಣಾಧಮರು

ಚಿತ್ತಮಾನಿ ದೈತ್ಯರಿಗಿಂತಲೂ ದೇಹಮಾನಿ ದೈತ್ಯರು 100 ಗುಣಾಧಮರು

ದೇಹಮಾನಿ ದೈತ್ಯರಿಗಿಂತಲೂ ಹಸ್ತಮಾನಿ ದೈತ್ಯರು 100 ಗುಣಾಧಮರು

ಹಸ್ತಮಾನಿ ದೈತ್ಯರಿಗಿಂತಲೂ ಪಾದಮಾನಿ ದೈತ್ಯರು 100 ಗುಣಾಧಮರು

ಪಾದಮಾನಿ ದೈತ್ಯರಿಗಿಂತಲೂ ಶ್ರೋತ್ರೇಂದ್ರಿಯಭಿಮಾನಿ ದೈತ್ಯರು 100 ಗುಣಾಧಮರು

ಶ್ರೋತ್ರೇಂದ್ರಿಯಭಿಮಾನಿ ದೈತ್ಯರಿಗಿಂತಲೂ ಚಕ್ಷುರಭಿ ಮಾನಿ ದೈತ್ಯರು 100 ಗುಣಾಧಮರು

ಚಕ್ಷುರಭಿಮಾನಿ ದೈತ್ಯರಿಗಿಂತಲೂ ದೈತ್ಯರು 100 ಗುಣಾಧಮರು

ದೈತ್ಯರಿಗಿಂತಲೂ ಘ್ರಾಣಮಾನಿ ದೈತ್ಯರು 100 ಗುಣಾಧಮರು

ಘ್ರಾಣಮಾನಿ ದೈತ್ಯರಿಗಿಂತಲೂ ವಾಕ್ಯಾಭಿಮಾನಿ ದೈತ್ಯರು 100 ಗುಣಾಧಮರು

ವಾಕ್ಯಾಭಿಮಾನಿ ದೈತ್ಯರಿಗಿಂತಲೂ ಚಕ್ಷುರಭಿಮಾನಿ ದೈತ್ಯರು 100 ಗುಣಾಧಮರು.

ಶಿಶ್ನಾಭಿಮಾನಿ ದೈತ್ಯರಿಗಿಂತಲೂ ಕರ್ಮಾಭಿಮಾನಿ ದೈತ್ಯರು 100 ಗುಣಾಧರ್ಮರು .

ಈ ರೀತಿಯಾಗಿ ಅವರುಗಳ ಗುಣಗಳ ಅಧಮತೆಯ ಆಧಾರದ ಮೇಲೆ ತಾರತಮ್ಯವನ್ನು ಅರಿಯಬಹುದೆಂದು ತಿಳಿಸಿ ದ್ದಾರೆ.



(ಮುಂದುವರೆಯುತ್ತದೆ.)

# ಸಂಪ್ರದಾಯದೊಂದಿಗೆ ಸ್ವಾಸ್ಥ್ಯಪಾಲನೆ ಮಾಡುವ ಸಂಕ್ರಾಂತಿ

## ಆರೋಗ್ಯ - ಸಂಭ್ರಮ- ಸಂಸ್ಕೃತಿ - ಸಂತಸಗಳ ಸಂಕೇತ

-ಶ್ರೀಮತಿ ವಾರುಣಿ ರಾಂ
99160 22982



ಸಂಕ್ರಾಂತಿ ಎಂಬುದು ಸುಗ್ಗಿಯ ಸಂಭ್ರಮದ ಬಹು ದೊಡ್ಡ ಸಂಕೇತ. ಹಳ್ಳಿ ಹಳ್ಳಿಗಳಲ್ಲಿ ಪ್ರಕೃತಿಯ ಮನ್ವಂತರ ಬದಲಾವಣೆಯನ್ನು ಹಿಗ್ಗಿನೊಂದಿಗೆ ಆಚರಿಸುವ ಪರ್ವಕಾಲ. ಚಳಿಗಾಲಕ್ಕೆ ಇದು ಬೀಳ್ಕೊಡುಗೆ. ಶಿಶಿರನ ಆಗ ಮನಕ್ಕೆ ಭವ್ಯ ಸ್ವಾಗತ ನೀಡುವ ಕಾಲ ಘಟ್ಟ.

ನಮ್ಮ ಭಾರತೀಯ ಹಬ್ಬಗಳ ಮಹತ್ವ ಒಂದು ರೀತಿ ಭಿನ್ನವಾಗಿಯೇ ಇರುತ್ತವೆ. ಅವು ಕೇವಲ ಸಂಭ್ರಮ ಮಾತ್ರ ತರುವುದಿಲ್ಲ. ಊಟ-ತಿಂಡಿ, ತಿನಿಸು, ವಸ್ತ್ರ, ಆಚರಣೆ ಜತೆಗೆ ಒಂದು ಆರೋಗ್ಯ ಕಾಳಜಿಯೂ ಸದ್ದಿಲ್ಲದೇ ಇಣುಕಿರುತ್ತದೆ.

ಸಂಕ್ರಾಂತಿ ಎಂದರೆ ಎಲ್ಲರ ಕಣ್ಣೆದುರಿಗೆ ಎಳ್ಳು - ಬೆಲ್ಲವೇ ಮೊದಲು ಬರುತ್ತದೆ. ಇದು ಹಬ್ಬದ ಪ್ರತಿನಿಧಿಯೂ ಆಗಿದೆ. ಆಯುರ್ವೇದದ ಪ್ರಕಾರ ಎಳ್ಳು ಉಷ್ಣ ಗುಣವುಳ್ಳ ವಸ್ತು. ವಾತ, ವ್ರಣ ಮತ್ತು ಚರ್ಮ ರೋಗ ನಿವಾರಣೆ ಮಾಡುವ ಗುಣ ಎಳ್ಳಿಗೆ ಇದೆ. ಎಳ್ಳಿನೊಂದಿಗೆ ಹುರಿದ ಕಡಲೆ ಬೀಜ, ಕೊಬ್ಬರಿ ಅಂಶವೂ ಕಡಿಮೆಯಾಗಿರುತ್ತದೆ. ಹಾಗಾಗಿ ಮಕರ ಮಾಸ ಶುರುವಾಗುವಾಗಲೇ ಈ ಕೊಬ್ಬಿನ ಕೊರತೆ ಸರಿದೂಗಿಸಬೇಕು. ಇದರಿಂದ ಸೂರ್ಯನ ಪ್ರಭಾವವನ್ನು ಮುಂದೆ ಎದುರಿಸಲು ಶರೀರ ಸಮರ್ಥವಾಗಬೇಕು. ಹಾಗಾಗಿ ಎಳ್ಳು - ಬೆಲ್ಲವನ್ನು



ಸೇವನೆ ಮಾಡಬೇಕು ಎಂದು ನಮ್ಮ ಹಿರಿಯರು ಇದನ್ನು ಹಬ್ಬದ ರೂಪದಲ್ಲಿ ಆಚರಣೆಗೆ ತಂದರು.

ಈ ಕಾಲದಲ್ಲಿ ನಿಧಾನವಾಗಿ ಉಷ್ಣತೆ ಹೆಚ್ಚುತ್ತಾ ಹೋಗುವುದರಿಂದ ಚಿಕ್ಕ ಮಕ್ಕಳ ಆರೋಗ್ಯದಲ್ಲಿ ಏರುಪೇರಾಗುತ್ತದೆ. ಹೃದಯದ ಬಡಿತ ಹಾಗೂ ರಕ್ತಚಲನೆ ಹೆಚ್ಚುತ್ತದೆ. ಇದನ್ನು ಹತೋಟಿಯಲ್ಲಿಡಲು ವಿಟಮಿನ್ ಸಿ ಹೇರಳವಾಗಿರುವ ಬೋರೆಹಣ್ಣೇ ಔಷಧ. ಇದು ಜಡ್ಡು ಮತ್ತು ಆಲಸ್ಯಗಳನ್ನು ದೂರಮಾಡುತ್ತದೆ. ಹಾಗಾಗಿ ಎಳ್ಳು ಬೆಲ್ಲದೊಂದಿಗೆ ಬೋರೆಹಣ್ಣನ್ನೂ ಹಂಚುವ ಪದ್ಧತಿ ಹಲವೆಡೆ ಚಾಲ್ತಿಯಲ್ಲಿದೆ. ಮುಖದ ಕಾಂತಿ ಹೆಚ್ಚಿಸುವಲ್ಲಿ ಈ ಹಣ್ಣು ಸಹಕಾರಿ.ಇದು ರಕ್ತವನ್ನು ಕೂಡ ಶುದ್ಧೀಕರಿಸುತ್ತದೆ. ನಮ್ಮ ಹಿರಿಯರು ತುಂಬಾ ಬುದ್ಧಿವಂತರು. ಯಾವ ಋತುವಿನಲ್ಲಿ ಯಾವ ಯಾವ ಆಹಾರ ದೇಹಕ್ಕೆ ಅವಶ್ಯಕ ಎಂದು ಅರಿತು ಹಬ್ಬಹರಿ ದಿನಗಳ ಆಚರಣೆಯಲ್ಲಿ ಸ್ವಾಸ್ಥ್ಯ ಪ್ರಜ್ಞೆಯನ್ನೂ ಬೆಸೆದಿದ್ದಾರೆ. ಯಾಂತ್ರಿಕ ಬದುಕಿನಲ್ಲಿ ಹಲವಾರು ಕಟ್ಟಳೆ, ನಂಬುಗೆ, ಆಚರಣೆಗಳು ಮಾಯವಾಗಿದ್ದರೂ ಅವುಗಳಲ್ಲಿ ಕೊಂಚವಾದರೂ ಇಂದು ಉಳಿದಿದೆ ಎಂಬುದೇ ಸಂತಸದ ಸಂಗತಿ.

### ಯಾವ ಪದಾರ್ಥಗಳಲ್ಲಿ ಏನೇನಿದೆ?

ಪೊಂಗಲ್ ಅನ್ನು ಸಂಕ್ರಾಂತಿ ಹಬ್ಬದಂದು ಹೊರಗಡೆ ಒಲೆ ಹಚ್ಚಿ ಮಣ್ಣಿನ ಮಡಿಕೆಯಲ್ಲಿ ಮಾಡುತ್ತಾರೆ. ಈ ಸಂದರ್ಭದಲ್ಲಿ ನಮ್ಮ ದೇಹಕ್ಕೆ ವಿಟಮಿನ್ ಡಿ ದೊರಕುತ್ತದೆ. ಪೊಂಗಲ್‌ನಲ್ಲಿ ಬಳಸುವ ಅಕ್ಕಿ ಮತ್ತು ಹೆಸರು ಬೇಳೆಗಳು ಕಾರ್ಬೋಹೈಡ್ರೇಟ್ಸ್ ಮತ್ತು ಪ್ರೋಟಿನ್ ಸಮತೋಲನ ಕಾಪಾಡುತ್ತದೆ. ಪೊಂಗಲ್‌ಗೆ ಹಾಕುವ ಅರಿಶಿಣ ದೇಹದೊಳಗೆ ವೈರಾಣುಗಳ ವಿರುದ್ಧ ಹೋರಾಡುವ ಸಾಮರ್ಥ್ಯ ನೀಡುತ್ತದೆ ರುಚಿಗಾಗಿ ಬಳಸುವ ಶುದ್ಧವಾದ ತುಪ್ಪದಲ್ಲಿ ಅನೇಕ







ಪೋಷಕಾಂಶಗಳಿವೆ. ಇದು ತ್ವಚೆಯ ಮಾಯಿಶ್ಚರೈಸರ್ ಕಾಪಾಡಿ ತ್ವಚೆ ಹಾಗೂ ಕೂದಲನ್ನು ರಕ್ಷಣೆ ಮಾಡುತ್ತದೆ.

ಬೆಲ್ಲವು ಲಿವರ್ ಅನ್ನು ಶುದ್ಧೀಕರಿಸುತ್ತದೆ. ಬೆಲ್ಲದಲ್ಲಿರುವ ಖನಿಜಾಂಶಗಳಾದ ಕ್ಯಾಲ್ಸಿಯಂ ಕಬ್ಬಿಣದಂಶ ಸತು, ರಂಜಕ, ಪೋಟಾಷಿಯಂ ಸೆಲೆನಿಯಂಗಳು ದೇಹದಲ್ಲಿರುವ ಕಲ್ಮಶವನ್ನು ಹೊರ ಹಾಕಲು ನೆರವಾಗುತ್ತವೆ. ಚಳಿಗಾಲದಲ್ಲಿ ಕಾಡುವ ಉಸಿರಾಟದ ತೊಂದರೆ ತಡೆಗಟ್ಟಲು ಕೂಡ ಬೆಲ್ಲ ಸಹಕಾರಿ.

ಇನ್ನು ಎಳ್ಳು. ಇದರಲ್ಲಿ ತಾಮ್ರ, ಕ್ಯಾಲ್ಸಿಯಂ ಸತು, ಕಬ್ಬಿಣದಂಶ ಹಾಗೂ ವಿಟಮಿನ್ ಇ ಇದೆ. ಇದರಲ್ಲಿರುವ ಆ್ಯಂಟಿ ಆಕ್ಸಿಡೆಂಟ್ ರೋಗ ನಿರೋಧಕ ಶಕ್ತಿ ಹೆಚ್ಚಿಸುತ್ತದೆ. ಎಳ್ಳಿನೊಳಗಿರುವ ಎಣ್ಣೆಯಂಶ ತ್ವಚೆ ಹಾಗೂ ಕೂದಲು ಆರೋಗ್ಯಕ್ಕೆ ಸಹಕಾರಿ.ಕೊಬ್ಬರಿಯಲ್ಲಿ ನಾರಿನ ಅಂಶ ಅಧಿಕ ವಿರುತ್ತದೆ. ಇದು ತ್ವಚೆ ಸಂಬಂಧಿ ಸೋಂಕು ಬಾರದಂತೆ ತಡೆಗಟ್ಟುತ್ತದೆ.

ನೆಲಗಡಲೆ (ಶೇಂಗಾ)ದಲ್ಲಿ ಒಮೆಗಾ 6 ಕೊಬ್ಬಿನಂಶ ಇದ್ದು ತ್ವಚೆ ರಕ್ಷಣೆಗೆ ಸಹಕಾರಿ, ಕಬ್ಬಿನಲ್ಲಿ ಎಲೆಕ್ಟ್ರೋಲೈಟ್ಸ್ ಕ್ಯಾಲ್ಸಿಯಂ, ಕಬ್ಬಿಣದಂಶ ಇದೆ. ಇದು ಲಿವರ್ ಶುದ್ಧೀಕರಿಸಲು ಸಹಕಾರಿ. ಕಬ್ಬಿನ ರಸ ರೋಗ ನಿರೋಧಕ ಶಕ್ತಿ ವೃದ್ಧಿಸುತ್ತದೆ. ಸೋಂಕಿನ ವಿರುದ್ಧ ಹೋರಾಡುತ್ತದೆ. ಚಳಿಗಾಲದಲ್ಲಿ ಇವೆಲ್ಲದರ ಸೇವನೆ ನಮ್ಮ ದೇಹ ಮತ್ತು ಮನಸ್ಸುಗಳ ಆರೋಗ್ಯ ಪಾಲನೆಯಲ್ಲಿ ಮಹತ್ವದ ಪಾತ್ರವಹಿಸುತ್ತದೆ.

**ಖಗೋಳಶಾಸ್ತ್ರದ ವ್ಯಾಖ್ಯಾನ :**

ಸಂಕ್ರಾಂತಿ ಆಚರಣೆ ಹಿನ್ನೆಲೆಯಲ್ಲಿ ಖಗೋಳಶಾಸ್ತ್ರದ ವಿಶೇಷತೆಯೂ ಅಡಗಿದೆ. ಸಾಮಾನ್ಯವಾಗಿ ಸೂರ್ಯೋದಯ ಪೂರ್ವದಲ್ಲಿ, ಸೂರ್ಯಾಸ್ತಮಾನ ಪಶ್ಚಿಮದಲ್ಲಿ ಎಂದು ಹೇಳುವುದು ವಾಡಿಕೆ.ಆದರೆ ಖಚಿತವಾಗಿ ಪೂರ್ವದಲ್ಲೇ ಸೂರ್ಯೋದಯ,ಪಶ್ಚಿಮದಲ್ಲೇ ಸೂರ್ಯಾಸ್ತವಾಗುವುದು ವರ್ಷದಲ್ಲಿ ಎರಡೇ ದಿನ. ಆ ದಿನಗಳನ್ನು ಈ ಕ್ವಿನಾಕ್ಸ್ ಎಂದು ಕರೆಯುತ್ತಾರೆ. ಅಂದು ಹಗಲು-ಇರುಳು ಸಮವಾಗಿರುತ್ತದೆ. ವರ್ಷದ ಉಳಿದ ದಿನಗಳಲ್ಲಿ ಹಗಲಿರುಳುಗಳ ಪಾಲು ಸಮವಾಗಿರುವುದಿಲ್ಲ. ಈ ಕ್ವಿನಾಕ್ಸ್ ದಿವಸಗಳ ಹೊರತಾಗಿ ಸೂರ್ಯನ ಉದಯ ಪೂರ್ವದ ಬಲಕ್ಕೆ (ಉತ್ತರಕ್ಕೆ) ಅಥವಾ ಎಡಕ್ಕೆ (ದಕ್ಷಿಣಕ್ಕೆ) ಆಗುತ್ತದೆ. ಸೂರ್ಯ 6 ತಿಂಗಳು ಉತ್ತರದ ದಿಕ್ಕಿನಲ್ಲಿ ಚಲಿಸುವ ಕಾರಣ ಅದನ್ನು ಉತ್ತರಾಯಣ ಕಾಲ ಎನ್ನುವರು. ಇದರಿಂದ ವಾತಾವರಣದಲ್ಲಿ ಬದಲಾವಣೆಗಳಾಗುತ್ತವೆ. ಸಂಕ್ರಾಂತಿ ನಂತರ ಚಳಿಯೂ ಕಡಿಮೆಯಾಗುತ್ತಾ ಹೋಗಿ ವಾತಾವರಣ ಉಲ್ಲಾಸ ದಾಯಕ ವಾಗಿರುತ್ತದೆ.

**ಮೇಳಗಳ ಕಾಲವಿದು :**

ಪವಿತ್ರ ಸ್ಥಳಗಳಾದ ಪ್ರಯಾಗ ಹರಿದ್ವಾರ್, ಉಜ್ಜಯಿನಿ, ನಾಸಿಕ್ ಮೊದಲಾದ ಪುಣ್ಯ ಕ್ಷೇತ್ರಗಳಲ್ಲಿ ಸಂಕ್ರಾಂತಿ ಸಂದರ್ಭ ವಿಶೇಷ ಮೇಳಗಳು ನಡೆಯುತ್ತವೆ. 12 ವರುಷಕ್ಕೊಮ್ಮೆ ಬರುವ ಕುಂಭಮೇಳವನ್ನು ಈ ಮೇಲೆ ತಿಳಿಸಿದ ಯಾವುದಾದರೂ ಒಂದು ಸ್ಥಳದಲ್ಲಿ ಆಚರಿಸುವುದು ಉತ್ತರ ಭಾರತೀಯರ ಸಂಪ್ರದಾಯ. ಈ ಮೇಳಗಳಲ್ಲಿ ಲಕ್ಷಾಂತರ ಜನರು ಸಂಗಮಿಸುತ್ತಾರೆ. ನದಿ - ಸಮುದ್ರದಲ್ಲಿ ಪುಣ್ಯ ಸ್ನಾನ ಮಾಡಿ ಧನ್ಯತೆ ಮೆರೆಯುತ್ತಾರೆ. ಇದು ಸಾಮಾಜಿಕ ಸಾಮರಸ್ಯತೆಯ ಪ್ರತೀಕವಾಗಿದೆ.









**ಸೂರ್ಯನೇ ಇಲ್ಲಿ ನಾಯಕ:**

ಸೂರ್ಯದೇವ ತನ್ನ ಏಳು ಕುದುರೆಗಳಿಂದ ಎಳೆಯಲ್ಪಡುವ ಭವ್ಯರಥದಲ್ಲಿ ಮಕರರಾಶಿಗೆ ಪ್ರವೇಶಿಸುವ ಕಾಲವೇ ಮಕರ ಸಂಕ್ರಾಂತಿ ಹಬ್ಬ. ಸಂಕ್ರಾಂತಿಯ ನಾಯಕ ಬೆಳಕು ನೀಡುವ ಸೂರ್ಯನಾದರೆ, ನಾಯಕಿ ಸಸ್ಯ ಬೆಳೆಯಲು ಅನುವು ಮಾಡುವ ಭೂಮಿ ತಾಯಿ. ವ್ಯವಸಾಯಕ್ಕೆ ಸಹಾಯ ಮಾಡುವ ದನಕರು, ಯಂತ್ರಗಳು ಪೋಷಕ ನಟರು ಎಂದು ಅರ್ಥೈಸಿದರೆ ಎಲ್ಲರಿಗೂ ಹಬ್ಬದ ಹಿಂದಿನ ಸಂಪ್ರದಾಯ ಮತ್ತು ಆಚರಣೆಗಳ ಮಹತ್ವ ಸರಳವಾಗಿ ಅರ್ಥವಾದೀತು. ಅಲ್ಲವೇ.,

ಸಂಕ್ರಾಂತಿ ಹಬ್ಬದ ಹಿಂದಿನ ದಿನವೇ ಭೋಗಿ ಹಬ್ಬ.



ಅಂದು ಹಳೆಯದನ್ನು ತೊರೆದು ಹೊಸದನ್ನು ಪಡೆದು ಸಂತೋಷ ಪಡುವ ದಿನ. ಈ ದಿನ ಸಡಗರದಿಂದ ಮನೆಯನ್ನು ಶುದ್ಧಿಗೊಳಿಸುವುದು ವಾಡಿಕೆ. ಮನೆ ಮಂದಿಯೆಲ್ಲಾ ಎಳ್ಳೆಣ್ಣೆ ಸ್ನಾನ ಮಾಡಿ ನೂತನ ವಸ್ತ್ರ ಧರಿಸುತ್ತಾರೆ. ಅಕ್ಕಿ ರೊಟ್ಟಿ, ಸಜ್ಜೆ ರೊಟ್ಟಿ, ಸಿಹಿ ಕುಂಬಳಕಾಯಿ ಪಲ್ಯ, ಮನೆ ಅವರೆಕಾಯಿ ಪಲ್ಯಗಳನ್ನು ಮಾಡಿ ದೇವರಿಗೆ ನೈವೇದ್ಯ ಮಾಡಿ ಸೇವಿಸುವುದು ವಿಶೇಷ. ಅಂದು ಕೆಲವೆಡೆ ಹುಗ್ಗಿಯನ್ನು ಮಾಡಿ ಎಲ್ಲರೂ ಒಟ್ಟಾಗಿ ಕುಳಿತು ಸವಿಯುತ್ತಾರೆ.

### ವಾರದಿಂದಲೇ ತಯಾರಿ :

ಸಂಕ್ರಾಂತಿ ಹಬ್ಬಕ್ಕೆ ಪ್ರತ್ಯೇಕವಾದ ಯಾವುದೇ ಪೂಜಾ ವಿಧಾನ ವತ್ರವಿಲ್ಲ. ಮೂರ್ತಿಗಳ ಪೂಜೆಯನ್ನೂ ಹೇಳಿಲ್ಲ. ಇದು ನೇರವಾಗಿ ನಿಸರ್ಗದೊಂದಿಗೆ ಬೆರೆತುಕೊಂಡ ಆಚರಣೆ. ಸೂರ್ಯನನ್ನು ಎಲ್ಲರೂ ಸಮಾನವಾಗಿ ಆರಾಧಿಸುವ ಏಕತ್ರ ಪದ್ಧತಿ. ಇದು ಒಂದು ಸಮುದಾಯದ ಹಬ್ಬವಲ್ಲ . ಒಟ್ಟಾರೆ ಮಾನವ ಜನಾಂಗವೇ ಸಂಭ್ರಮಿಸುವ ದೊಡ್ಡ ಹಬ್ಬ. ಸಮಾಜವನ್ನು ಒಟ್ಟಿಗೆ ಬೆಸೆಯುವ, ಸೌಹಾರ್ದ ಸಂದೇಶ ಸಾರುವ ವಿಶೇಷ ದಿನ. ಹಾಗಾಗಿ ಒಂದು ವಾರದಿಂದಲೇ ಮಹಿಳೆಯರು ಸಡಗರದಿಂದ ತಯಾರಿಸಿದ ಸಕ್ಕರೆ ಅಚ್ಚು, ಹುರಿದ ಬಿಳಿ ಎಳ್ಳು, ಸಿಪ್ಪೆತೆಗೆದ ಕಡಲೇಕಾಯಿ ಬೀಜ, ಬೆಲ್ಲ ಕೊಬ್ಬರಿ, ಹುರಿಗಡಲೆ - ಈ ಐದು ಸಾಮಾಗ್ರಿಗಳನ್ನು ಸರಿಯಾದ ಪ್ರಮಾಣದಲ್ಲಿ ಮಿಶ್ರಮಾಡಿ ದೇವರಿಗೆ ಅರ್ಪಿಸಲಾಗುತ್ತದೆ. ಇದರ ಜತೆಗೆ ಕಬ್ಬು, ಬಾಳೆಹಣ್ಣುಗಳು ನೈವೇದ್ಯಕ್ಕೆ ಸಲ್ಲುತ್ತವೆ. ಹೊಸ ಧಾನ್ಯ, ಎಳ್ಳು, ಕುಂಬಳಕಾಯಿ, ಹತ್ತಿ, ಸಜ್ಜೆ, ವಸ್ತ್ರವನ್ನು ಹಿರಿಯರಿಗೆ, ಪುರೋಹಿತರಿಗೆ ಕೊಟ್ಟು ಆಶೀರ್ವಾದ ಪಡೆಯುತ್ತಾರೆ. ದಾನದ ಮಹತ್ವವೂ ಇಲ್ಲಿ ಢಾಳಾಗಿದೆ.

### ಮಕ್ಕಳಿಗೆ ಕರಿ ಎರೆಯುವ ದಿನ :

ಸಂಕ್ರಾಂತಿ ದಿನ ಸಂಜೆ ಮಕ್ಕಳಿಗೆ ಕರಿ ಎರೆಯುವ ಆಚರಣೆ ಇದೆ. ಪುಟ್ಟ ಮಕ್ಕಳನ್ನೆಲ್ಲಾ ಕೂರಿಸಿ ಕಡಲೇಕಾಯಿ, ಮಾಸದಲ್ಲಿ ದೊರೆಯುವ ಹಣ್ಣುಗಳು, ನಾಣ್ಯಗಳನ್ನು ತಲೆಯ ಮೇಲಿಂದ ಹಾಕುತ್ತಾರೆ. ಹಿರಿಯರು ಚಿಣ್ಣರಿಗೆ ಆಶೀರ್ವಾದ ಮಾಡುತ್ತಾರೆ. ಪುಟ್ಟ ಮಕ್ಕಳೆಲ್ಲಾ ತಮ್ಮ ಅಕ್ಕ ಪಕ್ಕ ಬಿದ್ದ ಹಣ್ಣು ತಿಂದು ಖುಷಿ ಪಡುತ್ತಾರೆ. ಈ ಸಂದರ್ಭದಲ್ಲಿ ಸಂಪ್ರದಾಯದ ಹಾಡುಗಳನ್ನೂ ಮಾತೆಯರು ಹಾಡುತ್ತಾರೆ.

### ಕಪ್ಪು ಬಣ್ಣದ ಉಡುಪು :

ಸಂಕ್ರಾಂತಿ ಯಾವಾಗಲೂ ಶೀತ ಮಾಸವಾದ ಜನವರಿ ತಿಂಗಳಲ್ಲಿ ಬರುತ್ತದೆ. ಕಪ್ಪು ಬಣ್ಣವು ಇತರ ಬಣ್ಣಗಳಿಗಿಂತ ಹೆಚ್ಚು ಶಾಖವನ್ನು ಹೀರಿಕೊಳ್ಳುತ್ತದೆ. ದೇಹವನ್ನು ಇದು ಬೆಚ್ಚಗಾಗಿಸುತ್ತದೆ. ಹಾಗಾಗಿಯೇ ಮಹಾರಾಷ್ಟ್ರದಲ್ಲಿ ಮರಾಠಿಗರು ಈ ಮಾಸದಲ್ಲಿ ಕಪ್ಪು ಬಣ್ಣದ ಬಟ್ಟೆಗಳನ್ನು ಹೆಚ್ಚಾಗಿ ಧರಿಸುತ್ತಾರೆ. ಅವರು ಅದನ್ನು ಮಂಗಳಕರವೆಂದು ಪರಿಗಣಿಸುತ್ತಾರೆ. ಸಂಕ್ರಾಂತಿ ಎಂದರೆ ಅದು ಕೇವಲ ತಿನ್ನುವ ಆಹಾರದಲ್ಲಿ ಮಾತ್ರವಲ್ಲ. ಉಡುಗೆ-ತೊಡುಗೆಗಳಲ್ಲೂ ವೈಜ್ಞಾನಿಕ ಮಹತ್ವ ಸಾರಿದೆ.

### ದನ - ಕರುಗಳಿಗೂ ಸಂಭ್ರಮ

ಸಂಕ್ರಾಂತಿ ಸಂದರ್ಭದಲ್ಲಿ ದನಕರುಗಳನ್ನು ವಿಶೇಷವಾಗಿ ಸಿಂಗರಿಸಿ ಮನೆಯಲ್ಲಿ ಮಾಡಿದ ವಿಶೇಷ ತಿನಿಸುಗಳನ್ನು ಅವುಗಳಿಗೆ ತಿನ್ನಿಸುತ್ತಾರೆ. ವೈಭವದ ಮೆರವಣಿಗೆಯಲ್ಲಿ ಅವುಗಳನ್ನು ಊರೆಲ್ಲಾ ತಿರುಗಾಡಿಸುತ್ತಾರೆ. ಹೀಗೆ ಜಾನುವಾರುಗಳಿಗೂ ಗೌರವ ಸೂಚಿಸುವ ಹಬ್ಬವಿದು. ಕೆಲವೆಡೆ ದನಗಳಿಗೆ ಸಂಜೆ ವೇಳೆ ಕಿಚ್ಚು ಹಾಯಿಸುವ ಆಚರಣೆಯೂ ಇದೆ. ಪಿತೃಗಳಿಗೆ ಪರ್ವಕಾಲದಲ್ಲಿ ತರ್ಪಣ ನೀಡುವುದು ಅಂದಿನ ವಿಶೇಷ. 'ಸರ್ವೇ ಜನಾಃ ಸುಖಿನೋ ಭವಂತು..' ಜಗತ್ತಿನ ಎಲ್ಲರೂ ಸುಖವಾಗಿರಲಿ ಎಂದು ಉದಾತ್ತಧ್ಯೇಯದಿಂದ ಹಾರೈಸುವ ಸಂಕ್ರಾಂತಿ ನಮ್ಮ ಬಾಳಿಗೆ ಹೊಸ ಕ್ರಾಂತಿ ತರುವ ಪರ್ವಕಾಲ ಎಂದರೆ ಅತಿಶಯೋಕ್ತಿಯೇನಲ್ಲ. ಭಾರತೀಯರ ಪರಿಕಲ್ಪನೆಯಲ್ಲಿ ಹಬ್ಬ ಎಂದರೆ ಅದು ಕೇವಲ ಒಂದು ದಿನದ ಆಚರಣೆ ಮಾತ್ರವಲ್ಲ. ಹತ್ತಾರು ಭಾವನೆ, ನೂರೆಂಟು ಕಲ್ಪನೆ, ವೈಜ್ಞಾನಿಕ ಅಂಶ, ನಿಸರ್ಗದೊಡನೆ ಒಡನಾಟ, ಸ್ವಾಸ್ಥ್ಯಪಾಲನೆ ಜತೆಗೆ ಮನೋಲ್ಲಾಸ ನೀಡುವ ಆಚರಣೆಗಳ ದಿವ್ಯ ಮಿಲನ. ಈ ದಿಸೆಯಲ್ಲಿ ಸಂಕ್ರಾಂತಿ ಕೂಡಾ ಬಹಳ ಮಹತ್ವದ್ದು. ಮಕರ ಸಂಕ್ರಾಂತಿ ಹಬ್ಬದಂದು ಮಕ್ಕಳಿಗೆ ಫಲವನೆರೆಯುವಾಗ ಹಾಡುವ ಸಂಪ್ರದಾಯದ ಹಾಡು.

ಫಲವನೆರೆದರು ವೆಂಕಟೇಶಪತಿಗೆ
ಫಲವನೆರೆದರು ಎಲಚಿ

ಫಲವನೆರೆದರು ಬದರಿ ಫಲವನೆರೆದರು
ಉತ್ತರಾಯಣ ಹಬ್ಬವೆಂದು ಮುದ್ದು
ಮಗನ ಎತ್ತಿಕೊಂಡು

ಮುತ್ತುಹವಳ ಎಲ್ಲ ಬೆರೆಸಿ
ಮಿತ್ರೆಯರು ಹರುಷದಿಂದ
ಬಿಳಿ ಎಳ್ಳು ಸಕ್ಕರೆ ಬೆರೆಸಿ
ಕಬ್ಬು ಕುಡಿಕೆ ನಡುವೆ ಇರಿಸಿ

ಕಮಲನಾಭನೆತ್ತಿಕೊಂಡು
ಬೀದಿ ಬೀದಿಯಲ್ಲಿ ಮೆರೆಸಿ
ಪಂಕಜಾಕ್ಷಿಯರೆಲ್ಲ ಸೇರಿ
ವೆಂಕಟೇಶಪತಿಗೆ ಈಗ

ಕುಂಕುಮವ ಫಣಿಯೊಳಿಟ್ಟು
ಬಿಂಕದಿಂದ ಹರಸುತಿರಲು
ಫಲವನೆರೆದರು ಫಲವನೆರೆದರು
ಫಲವನೆರೆದರು ಬಾಲರಿಗೆ





### ಶ್ರೀ ಪ್ರಸನ್ನವೆಂಕಟ ದಾಸಾರ್ಯವಿರಚಿತ

# "ಜಯ ಜಯ ಜಯ ಜಯ ದಯಾನಿಧೆ"

### ಆತ್ಮನಿವೇದನೆ ಕೀರ್ತನೆಯ ಒಳನೋಟ

ಧಾರಾವಾಹಿ

- ಡಾ|| ಸುಭಾಸ ಕಾಖಂಡಕಿ
79754 42458

"ಜಯಜಯ ಜಯ ದಯಾನಿಧೆ
ಭಯನಿವಾರಕ ಭಕ್ತನಿಚಯ ನಿತ್ಯ ಸೇವ್ಯನೆ"

ಇಲ್ಲಿ ದಾಸರು ವಿಶ್ವವ್ಯಾಪಿಯಾದ ಭಗವಂತನನ್ನು ನಾನಾ ರೀತಿಯ ವಿಶೇಷಣಗಳಿಂದ ಸಂಬೋಧನೆ ಮಾಡಿ ಜಯ-ಜಯ-ಜಯ-ಜಯ ಎನ್ನುತ ಶ್ರೀನಿವಾಸನನ್ನು ಕೊಂಡಾ ಡಿದ್ದಾರೆ.

ಅವರು ಶ್ರೀನಿವಾಸನ ಗುಣಗಾನವನ್ನು ಮಾಡಿದ್ದಾ ದರು ಹೇಗೆ? ಜಯ-ಜಯ-ಜಯ-ಜಯ ಎಂದು ನಾಲ್ಕು ಬಾರಿ ಹೇಳುತ್ತ, ತಮ್ಮ ಭಕ್ತಿಯ ಧಾರ್ಡ್ಯವನ್ನು ವ್ಯಕ್ತ ಪಡಿಸುತ್ತ, ನಿನಗೆ ಪರಿಪೂರ್ಣ ಸಮರ್ಪಣ ಭಾವದ ಭಕ್ತಿಯನ್ನು ಸಮರ್ಪಿಸಿ ನಿನ್ನನ್ನು ಅನುಗಾಲವು ಕೊಂಡಾಡುವರಿಗೆ ನೀನು ದಯಾನಿಧೆ, ನೀನು ಭಯವನ್ನು ನಿವಾರಿಸಿ-ನಿನ್ನ ಭಕ್ತರನ್ನೂ ಕಾಪಾಡುವೆ... ಅವರಿಂದ ನಿತ್ಯ ಸೇವನೆಕೊಳ್ಳುವೆ ಎಂದು ಸ್ತುತಿಸಿದ್ದಾರೆ.

**ಇನ್ನು ನುಡಿ - 1 ರಲ್ಲಿ**

"ದ್ರುಹಿಣ ಸಮೀರ ಗರುಡಹಿನಾಥ ಮೃಡೇಂದ್ರ
ಸಹನುತ ಪದಸರೋರುಹ ನಿತ್ಯಜಯ ||1||

ಇಂದ್ರಾದಿ ದೇವತೆಗಳು. ವಾಯು, ಗರುಡ, ರುಧ್ರಾದಿ ಎಲ್ಲ ದೇವತೆಗಳು ನಿನ್ನ ಚರಣ ಕಮಲಗಳಿಗೆ ನಿತ್ಯವೂ ಜಯ-ಜಯ ಎಂದು ಸ್ತೊತ್ರಮಾಡಿ ಸಾರ್ಥಕ ಭಾವವನ್ನು ಹೊಂದುತ್ತಾರೆ. ಅಂಥಹ ದೇವಾನು ದೇವತೆಗಳಿಗೆ ಇಂದ್ರಮಣಿಯಂತೆ ಶೋಭಿ ಸುವ ನಿನ್ನ ಪಾದಕಮಲಗಳಿಗೆ ಜಯ- ಜಯ ಎಂದು ದಾಸರು ಸಮರ್ಪಣ ಭಾವದಿಂದ ಸ್ತುತಿಸಿದ್ದಾರೆ.

ಇನ್ನು ನುಡಿ - 2 ರಲ್ಲಿ

"ಮದನಜನಕ ಸಿಂಧುಸದನ ದಾನವ ಜಿತ
ಕದನ ಮಾನವ ಮೃಗವದನ ಹರೆ ಜಯ ||2||

ಸ್ವಾಮಿ ನೀನು ಅಂತಿಂಥವನಲ್ಲ, ನಿನ್ನ ಮಹಿಮೆ ಅಪಾರ,ಕಾಮನಪಿತನಾದಂಥವನು ನೀನು,ಅಗಾಧವಾದ ಸಾಗರವನ್ನೇ ಮನೆ ಮಾಡಿಕೊಂಡಂಥವನು ನೀನು, ದೈತ್ಯಾದಿ ಗಳನ್ನು, ದಾನವರನ್ನು ಸಂಹರಿಸಿ ಅವರನ್ನು ಗೆದ್ದವನು ನೀನು, ನರಸಿಂಹ ಅವತಾರದಲ್ಲಿ ಮೃಗದ ಮುಖವನ್ನು ಹೊಂದಿ ಜಗತ್ತಿಗೆ ಅದ್ಭುತವಾದ ನಿನ್ನ ಲೀಲೆಯನ್ನು ತೋರಿದವನು. ನಿನ್ನಂಥ ಮಹಾಮಹಿಮಗೆ ಜಯ - ಜಯ ಎಂದು ಸ್ತುತಿಸಿದ್ದಾರೆ.

**ಇನ್ನು ಕೊನೆಯ ನುಡಿಯಲ್ಲಿ**

"ದಶಾನನ ಹರ ಸುರ ಪೋಷಣ ನೀಲ ಸತತ
ಪ್ರಸನ್ವೆಂಕಟಗಿರಿವಾಸ ನಮೋ ತೇ ಜಯ ||3||

"ರಾಮಾವತಾರದಲ್ಲಿ ಹತ್ತು ತಲೆ ರಾವಣನನ್ನು ಕೊಂದು ದೇವಾದಿ ದೇವತೆಗಳನ್ನು ರಕ್ಷಿಸಿ ಜಯಘೋಷ ಪಡೆದ ನೀಲ-ಮೇಘ-ಶ್ಯಾಮನಾದ ನಿನ್ನ ಅವತಾರಗಳು ಅಗಮ್ಯವಾಗಿ ಜಗತ್ತನ್ನು ಉದ್ಧರಿಸಿದವು. ತಿರುಪತಿ ಗಿರಿವಾಸನಾಗಿ ಭೂ ಲೋಕದ ಜನರನ್ನು ಉದ್ಧರಿಸುತ್ತ ನಿಂತ ನಿನಗೆ ನಮೋ-ನಮೋ ! " ಎಂದು ದಾಸರು ಭಗವಂತನ ನಾನಾ ರೂಪಗಳ, ಅವತಾರಗಳ,ಮತ್ತು ಅವನ ಲೀಲೆಗಳ ವರ್ಣನೆ ಮಾಡಿದ್ದಾರೆ. ಹೇ ಭಗವಂತನೇ! ಸರ್ವವ್ಯಾಪ್ತಿತ್ವವನ್ನು ಹೊಂದಿದ ನಿನ್ನನ್ನು ನಿನ್ನ ಮಹಿಮೆಯನ್ನು ಜಯ-ಜಯ ಎಂದು ಘೋಷಿಸದೆ ಇನ್ಯಾರನ್ನು ಹೊಗಳಲಿ ಎಂಬ ಅರ್ಥದಲ್ಲಿ ಇಂಥಹ ಸುಂದರ ವಾದ ಕೀರ್ತನೆ ರಚಿಸಿ ಸಂಕೀರ್ತನೆ ಮಾಡಲು ಭಕ್ತರಿಗೆ ಅನುಗ್ರಹಿಸಿದ್ದಾರೆ ದಾಸರು.

ಕರ್ನಾಟಕದ ವೈಷ್ಣವ ದೇವಾಲಯಗಳು

26

# ನಾಗಮಂಗಲದ ಸೌಮ್ಯ ಕೇಶವ ದೇವಾಲಯ

-ಕೆಂಗೇರಿ ಚಕ್ರಪಾಣಿ
9448386886

ಮಂಡ್ಯ ಜಿಲ್ಲೆಯ ಉತ್ತರಭಾಗದಲ್ಲಿರುವ ನಾಗಮಂಗಲವು ಮಂಡ್ಯದಿಂದ ಸುಮಾರು 40 ಕಿ.ಮೀ. ದೂರದಲ್ಲಿದೆ. ನಾಗಮಂಗಲವು ಸಹಾ ಹಿಂದೆ ಹೊಯ್ಸಳರ ಕಾಲದಲ್ಲಿ ಆಗ್ರಹಾರವಾಗಿತ್ತು. ನಾಗಮಂಗದಲ್ಲಿ ಸೌಮ್ಯ ಕೇಶವ ದೇವಾಲಯ ಯೋಗಾನರಸಿಂಹ ದೇವಾಲಯ, ಭುವನೇಶ್ವರ ದೇವಾಲಯ ಹಾಗೂ ವೀರಭದ್ರ ದೇವಾಲಯಗಳಿವೆ.

ನಾಗಮಂಗಲವು ಹಿಂದೆ ದಂಡಕಾರಣ್ಯವಾಗಿತ್ತು ಲೋಹಿತವಂಶದವರು ಇಲ್ಲಿಗೆ ಮೊದಲು ವಲಸೆ ಬಂದರು. ಆ ವಂಶದ ಪಾಳೆಯಗಾರನಿಗೆ ಕನಸಿನಲ್ಲಿ ಹುತ್ತವೊಂದು ಕಾಣಿಸಿತಂತೆ ಆತ ಹುತ್ತವನ್ನು ಹುಡುಕುತ್ತಾ ನಾಗಮಂಗಲವಿರುವ ಪ್ರದೇಶಕ್ಕೆ ಬಂದಾಗ ಸರ್ಪವು ಸುತ್ತುವರೆದಿರುವ ನರಸಿಂಹ ದೇವರ ಮೂರ್ತಿ ದೊರೆತಂತೆ ಆತ ಅಲ್ಲಿಯೇ ಅದಕ್ಕೆ ದೇವಾಲಯವನ್ನು ನಿರ್ಮಿಸಿದ ಆದ್ದರಿಂದಲೇ ಈ ಪ್ರದೇಶಕ್ಕೆ ನಾಗಮಂಡಲ ಎಂದು ಹೆಸರಾಯಿತು, ನಂತರ ನಾಗಮಂಗಲವಾಯಿತು, ಎಂದು ಸ್ಥಳ ಪುರಾಣ. ನಾಗಮಂಗಲವು ಮಹಾಭಾರತದ ಕಾಲದ ಮಣಿಪುರವೆಂದು ಹೇಳಿಕೆ. ಇಲ್ಲಿ 16-17 ನೆಯ ಶತಮಾನದಲ್ಲಿ ನಾಗಮಂಗಲದ ಪ್ರಭುಗಳು ಎಂಬ ಪಾಳೆಯಗಾರರು ಆಳ್ವಿಕೆ ನಡೆಸಿರುತ್ತಾರೆ ಈಗಲೂ ನಾಗಮಂಗಲದಲ್ಲಿ ಅವರು ನಿರ್ಮಿಸಿರುವ ಕೋಟೆಯ ಅವಶೇಷಗಳು ದೊರೆಯುತ್ತದೆ.

ನಾಗಮಂಗಲದ ಅತ್ಯಂತ ಪ್ರಸಿದ್ಧ ದೇವಾಲಯ ಸೌಮ್ಯ ಕೇಶವ ದೇವಾಲಯವಾಗಿರುತ್ತದೆ. ದೇವಾಲಯವು ಊರ ಪ್ರಮುಖ ಸ್ಥಳದಲ್ಲಿದ್ದು ಭವ್ಯವಾದ ಏಳು ಅಂತಸ್ತಿನ ಗೋಪುರವನ್ನು ಹೊಂದಿದೆ. ಈ ದೇವಾಲಯದ ವಾಸ್ತುವಿನ ಲಕ್ಷಣವನ್ನು ಗಮನಿಸಿದರೆ ಸುಮಾರು 12 ನೆಯ ಶತಮಾನದಲ್ಲಿ ಹೊಯ್ಸಳರ ಕಾಲದಲ್ಲಿ ನಿರ್ಮಿತವಾದುದು ಎಂದು ಹೇಳಬಹುದು. ದೇವಾಲಯವು ಸುಮಾರು ಐದು ಅಡಿಗಳು ಎತ್ತರದ ನಕ್ಷತ್ರಾಕಾರದ ಜಗಲಿಯ ಮೇಲೆ ನಿಂತಿದೆ. ಈ ದೇವಾಲಯವು ತ್ರಿಕೂಟಾ ಚಲವಾಗಿದ್ದು ಮೂಲಗರ್ಭ ಗುಡಿಯಲ್ಲಿ ಸೌಮ್ಯಕೇಶವ ಉತ್ತರ ಗರ್ಭಗುಡಿಯಲ್ಲಿ ಲಕ್ಷ್ಮೀನರಸಿಂಹ ಹಾಗೂ ದಕ್ಷಿಣ ಗರ್ಭಗುಡಿಯಲ್ಲಿ ವೇಣುಗೋಪಾಲರ ಸುಂದರ ಮೂರ್ತಿಗಳಿವೆ. ಸೌಮ್ಯ ಕೇಶವನ ಗರ್ಭಗುಡಿಯು ಅಂತರಾಳವನ್ನು ಹೊಂದಿದ್ದರೆ ಮತ್ತೆರಡು ಗುಡಿಗಳು ನವ ರಂಗಕ್ಕೆ ನೇರವಾಗಿ ತೆರೆದುಕೊಳ್ಳುತ್ತದೆ ನವರಂಗದಲ್ಲಿ ತಿರುಗಣೆಯಿಂದ ಮಾಡಿದ ಸುಂದರವಾದ ನಾಲ್ಕು ಕಂಬಗಳಿವೆ. ಇಲ್ಲಿ ಹನ್ನೆರಡು



ಭುವನೇಶ್ವರಿಗಳಿವೆ. ಇದರಲ್ಲಿ ಅತ್ಯಂತ ಸುಂದರವಾದ ಭುವನೇಶ್ವರಿಯು ಮಧ್ಯದ ಭುವೇಶ್ವರಿಯಾಗಿರುತ್ತದೆ. ಈ ಭುವನೇಶ್ವರಿಯಲ್ಲಿ 108 ಶಂಖಗಳನ್ನು ರಚಿಸಿ ಲಾಗಿದ್ದು ಮಧ್ಯಲ್ಲಿರುವ ಶಂಖವನ್ನು ಮಂಡಲಾಕಾರದಲ್ಲಿ ಬಳಸಿರುವ ನಾಗಸರ್ಪ ವಿದೆ. ಈಗಲೂ ಸೌಮ್ಯಕೇಶವ ದೇವಾಲಯದಲ್ಲಿ ಸರ್ಪದೋಷ ನಿವಾರಣೆಗಾಗಿ ಸಕಲ ಗ್ರಹ ದೋಷ ನಿವೃತ್ತಿ, ವಿವಾಹ ಸಂಬಂಧ, ಕಷ್ಟ ಕಾರ್ಪಣ್ಯಗಳ ನಿವಾರಣೆಗೆ ಸಂತಾನ ಭಾಗ್ಯ, ರಾಹು ಕೇತು ದೋಷ ಪರಿಹಾರಕ್ಕೆ ಭಕ್ತರು ಆಗಮಿಸುತ್ತಾರೆ.

ಈ ದೇವಾಲಯದ ಪ್ರಧಾನ ದೇವತೆ ಸೌಮ್ಯಕೇಶವನು, ಸುಮಾರು ಏಳು ಅಡಿ ಎತ್ತರವಿದ್ದು ಹೆಸರಿಗೆ ಅನ್ವರ್ಥದಂತೆ ಸೌಮ್ಯವದನನಾಗಿ ಶಂಖ,ಚಕ್ರ, ಗದಾ ಪದ್ಮಧಾರಿಯಾಗಿರುತ್ತಾನೆ ಸ್ವಾಮಿಯ ಎಡಬಲಗಳಲ್ಲಿ ಆತನ ಪತ್ನಿಯರಾದ ಶ್ರೀದೇವಿ ಭೂದೇವಿಯರಿರುತ್ತಾರೆ.

ಈ ದೇವಾಲಯದ ವಿಶೇಷವೇನೆಂದರೆ ಒಂದೇ ಕಡೆ ಐದು ಲಕ್ಷ್ಮೀಯರ ದರ್ಶನ ಮೊದಲನೆಯದಾಗಿ ಕೇಶವನ ಪತ್ನಿಯರಾದ ಶ್ರೀದೇವಿ ಭೂದೇವಿಯರು, ನಂತರ ವೇಣುಗೋಪಾಲನೊಡನೆ ರುಕ್ಮಿಣಿ ಸತ್ಯಭಾಮೆಯರು ಹಾಗೂ ನರಸಿಂಹ ದೇವನ ಜೊತೆ ಲಕ್ಷ್ಮೀದೇವಿ ಹೀಗೆ ಐವರು ಶ್ರೀದೇವಿಯರ ದರ್ಶನ ಪ್ರಾಪ್ತಿ ನಾಗ ಮಂಗಲದ ಕೇಶವ ದೇವಾಲಯದಲ್ಲಿ ದೊರೆಯುತ್ತದೆಂದು ಆಸ್ತಿಕರ ಅಭಿಪ್ರಾಯ. ಕೇಶವ ದೇವಾಲಯದ ಮುಖಮಂಟಪ ಪಾತಾಳಾಂಕಣ ಸುತ್ತಲೂ ಪ್ರಾಕಾರ ಗಳನ್ನು ವಿಜಯನಗರ ಅರಸರ ಕಾಲದಲ್ಲಿ ನಾಗಮಂಗಲದ ಪಾಳೆಯಗಾರರಿಂದ ವಿಸ್ತರಿಸಲಾಗಿದೆ.

"ಕೇಶವಂ ಕ್ಲೇಶ ನಾಶನಂ" ಎಂಬುದು ನಾಗಮಂಗಲದ ಸೌಮ್ಯ ಕೇಶವ ನಿಗೆ ಅನ್ವಯಿಸುತ್ತದೆ. ಇಲ್ಲಿ ಪ್ರತಿದಿನ ನೂರಾರು ಭಕ್ತವೃಂದವು ಬಂದು ತಮ್ಮ ಮನೋಭಿಲಾಷೆಯನ್ನು ನೆರವೇರಿಸಿಕೊಳ್ಳಲು ದೇವನನ್ನು ಪ್ರಾರ್ಥಿಸುವುದು ಕಂಡು ಬರುತ್ತದೆ. ಸೌಮ್ಯ ಕೇಶವನನ್ನು ದಾಸ ಶ್ರೇಷ್ಠರಾದ ಪುರಂದರದಾಸರು ತಮ್ಮ ಕೃತಿಯಲ್ಲಿ "ಗರ್ವಗಂಭೀರ ನಾಯಕ" ಎಂದು ಸುತ್ತಿಸಿದ್ದಾರೆ.

ನಾಗಮಂಗಲದ ಸೌಮ್ಯ ಕೇಶವನ ಬ್ರಹ್ಮ ರಥೋತ್ಸವವು ಫಾಲ್ಗುಣ ಶುದ್ಧ ಪೌರ್ಣಮಿ ದಿನ (ಅಂದರೆ ಮಾರ್ಚ್ ತಿಂಗಳಲ್ಲಿ) ಬಹಳ ಅದ್ದೂರಿಯಾಗಿ ನೆರವೇರು ತ್ತದೆ ಹಾಗೂ ಪ್ರತಿವರ್ಷ ಏಪ್ರಿಲ್ ಏಳನೆಯ ತಾರೀಖು ಬೆಳಗ್ಗೆ 6 ಗಂಟೆ 15 ನಿಮಿ ಷಕ್ಕೆ ಸೂರ್ಯದೇವನ ಕಿರಣವು ಕೇಶವ ಸ್ವಾಮಿಯ ಪಾದವನ್ನು ಸ್ಪರ್ಶಿಸುತ್ತದೆ. ಈ ಸುದಿನದಲ್ಲಿ ಸಾವಿರಾರು ಭಕ್ತ ವೃಂದವು ನೆರೆದಿದ್ದು ಕೇಶವನ ಕೃಪೆಗೆ ಪಾತ್ರ ರಾಗುವರು.



**ಹೀಗೆ ಬನ್ನಿ :-**

ಮಂಡ್ಯ ಜಿಲ್ಲೆಯ ನಾಗಮಂಗಲವು ಮಂಡ್ಯದಿಂದ ಸುಮಾರು 40 ಕಿ.ಮೀ. ದೂರದಲ್ಲಿದೆ. ಮಂಡ್ಯದಿಂದ ಬರುವವರು ಬಸರಾಳಿನ ಹೊಯ್ಸಳರ ಸುಂದರ ಮಲ್ಲಿ ಕಾರ್ಜುನ ದೇವಾಲಯವನ್ನು ನೋಡಿ ಕೊಂಡು ಬರಬಹುದು. ನಾಗಮಂಗಲಕ್ಕೆ ಬೆಂಗಳೂರು ಹಾಸನ ರಸ್ತೆಯಿಂದಲೂ ಬರಬಹುದು. ಬೆಳ್ಳೂರು ತಿರುವಿನಲ್ಲಿ ಎಡಕ್ಕೆ ಮೈಸೂರು ರಸ್ತೆಯ ಕಡೆ ತಿರುಗಿ ಸುಮಾರು ಹದಿನೈದು ಕಿ.ಮೀ. ಕ್ರಮಿಸಿದರೆ ನಾಗ ಮಂಗಲವು ದೊರೆಯುತ್ತದೆ. ನಾಗ ಮಂಗಲಕ್ಕೆ ಬೆಂಗಳೂರು ತುಮಕೂರು ಕೆ.ಆರ್.ಪೇಟೆ ಮಂಡ್ಯ ಮುಂತಾದ ಸ್ಥಳ ಗಳಿಂದ ಸಾಕಷ್ಟು ನೇರ ಬಸ್ ಸೌಲಭ್ಯ ವಿದೆ.



# ಮಕರ ಸಂಕ್ರಮಣ - ಸುಗ್ಗಿಯ ಅನಾವರಣ

- ಡಾ।। ಗುರುರಾಜ ಪ್ರೋಶೆಟ್ಟಿಹಳ್ಳಿ
97393 69621



ಪ್ರತಿವರ್ಷ ಜನವರಿ 14 ಅಥವಾ 15 ರಂದು ಆಚರಿಸಲ್ಪಡುವ ಮಕರ ಸಂಕ್ರಮಣ ಅಥವಾ ಉತ್ತರಾಯಣ ಪುಣ್ಯಕಾಲ ಸುಗ್ಗಿಯ ಹಬ್ಬ . ಈ ದಿನ ಧನುರ್ಮಾಸ ಪೂಜಾ ಸಮಾಪ್ತಯ ದಿನವೂ ಹೌದು. ಈ ದಿನ ಸ್ವರ್ಗದ ಬಾಗಿಲು ತೆರೆಯುತ್ತದೆ ಎನ್ನುವುದು ಆಸ್ತಿಕರ ನಂಬಿಕೆ.

ಇದೇ ದಿನಕ್ಕಾಗಿ ಕಾದು ಭೀಷ್ಮಾಚಾರ್ಯರು ದೇಹ ತ್ಯಾಗ ಮಾಡುವ ಮೂಲಕ ಇಚ್ಛಾಮರಣಿ ಎಂಬ ಕೀರ್ತಿ ಸಂಪಾದಿಸಿಕೊಂಡರೆಂದು ಮಹಾಭಾರತದಲ್ಲಿ ಉಲ್ಲೇಖವಿದೆ. ಗ್ರಾಮೀಣ ಭಾಗಗಳಲ್ಲಿ ಜಾನುವಾರು ಮತ್ತು ಮನುಷ್ಯನ ನಡುವಿನ ಅವಿನಾಭಾವ ಸಂಭ್ರಮಕ್ಕೆ ಸಂಕ್ರಾಂತಿ ಸಾಕ್ಷಿ ಯಾಗುತ್ತದೆ.

ಕರ್ನಾಟಕದಲ್ಲಿ ಎಳ್ಳು ಬೀರುವ ಹಬ್ಬವೆಂದೇ ಪ್ರತೀತಿ. 'ಎಳ್ಳು-ಬೆಲ್ಲವ' ತಿಂದು ಒಳ್ಳೆಯ ಮಾತನಾಡು, ಎಂಬುದು ಸಂಕ್ರಾಂತಿಯ ದಿವ್ಯವಾಣಿ ಎಳ್ಳು ದೇಹಕ್ಕೆ ಆರೋಗ್ಯ ಹಿತಕಾರಿ. ಎಳ್ಳನ್ನು ತಿನ್ನುವುದರಿಂದ ಚರ್ಮ ಒಣಗುವುದಿಲ್ಲ. ಸುಕ್ಕುಗಟ್ಟುವುದಿಲ್ಲ. ಬದಲಿಗೆ ನಯವಾಗಿ ಕಾಂತಿಯುಕ್ತವಾಗುತ್ತದೆ. ಹಾಗಾಗಿ ಚಳಿಗಾಲದ ಕೊನೆಯ ದಿನಗಳಲ್ಲಿ ಬರುವ ಈ ಹಬ್ಬದ ಪ್ರಯುಕ್ತ ಎಳ್ಳುತಿನ್ನುವುದರಿಂದ ಚರ್ಮದ ಒಡಕನ್ನು ಸ್ವಲ್ಪಮಟ್ಟಿಗೆ ತಡೆಯಬಹುದು ಎಂಬುದು ಗಮನಿಸ ಬೇಕಾದ ಅಂಶ. ಸಿಹಿ ಪೊಂಗಲ್, ಸಂಕ್ರಾಂತಿಯ ವಿಶೇಷ ಭೋಜ್ಯ ಈ ಕಾರಣಕ್ಕಾಗಿಯೇ ಸಂಕ್ರಾಂತಿಗೆ ಪೊಂಗಲ್ ಎನ್ನುವ ಅನ್ವರ್ಥ ಹೆಸರಿದೆ.

ಗುಜರಾತಿನಲ್ಲಿ ಗೋಪೂಜೆ, ಮಹಾರಾಷ್ಟ್ರದಲ್ಲಿ ಗಾಳಿಪಟದ ಸ್ಪರ್ಧೆ, ಉತ್ತರದ ಬಹುತೇಕ ಕಡೆಗಳಲ್ಲಿ ಪುಣ್ಯಸ್ನಾನದ ಸಂಕ್ರಾಂತಿ ಸಂದರ್ಭದಲ್ಲಿ ನಡೆಯುತ್ತದೆ. ಕೇರಳದ ಶಬರಿಮಲೆಯಲ್ಲಿ ಕಾಣುವ ಮಕರಜ್ಯೋತಿಗೆ ಹೆಚ್ಚಿನ ಪ್ರಾಧಾನ್ಯತೆ. ಸಂಕ್ರಾಂತಿಯೂ ನಿರ್ದಿಷ್ಟವಾಗಿ ಯಾವುದೇ ಒಂದು ದೇವರಿಗೆ ಸೀಮಿತವಾದ ಹಬ್ಬವಲ್ಲ. ಒಂದು ಸಮಾಜದ ಹಾಗೂ ಅದರ ಜೀವಾಳವಾದ ಜನಾಂಗದ ಮುನ್ನಡೆಗೆ ಕೇವಲ ವೈಚಾರಿಕ ನಿಲುವುಗಳು ಆಧುನಿಕ ಉಪಕರಣಗಳು ಮಾತ್ರ ಇದ್ದರೆ ಸಾಲದು. ಸಮಾಜದ ಕೆಲವೊಂದು ವಿಶಿಷ್ಟ ನಂಬಿಕೆಗಳು ದೃಢವಾದ ಶ್ರದ್ಧೆ, ಕರ್ತವ್ಯನಿಷ್ಟೆ ಆಚರಣೆ, ಪದ್ಧತಿಗಳು ಇರುತ್ತದೆ. ಇಂತಹ ಆಚರಣೆಗಳು, ಬಾಂಧವ್ಯ, ಸಂಪರ್ಕ, ಸ್ನೇಹ ಅನುಕಂಪ, ಆನಂದ ಮನರಂಜನೆ, ಕಲಾರಾಧನೆ ಮೊದಲಾದ ಮಾನವತೆಯ ಬೇರುಗಳನ್ನು ಭದ್ರಪಡಿಸುತ್ತದೆ. ಇದೇ ಎಲ್ಲಾ ಹಬ್ಬಗಳ ಸಂದೇಶವೂ ಆಗಿರುತ್ತದೆ.

ಎಳ್ಳು - ಬೆಲ್ಲ ಶೀತ - ವಾತದಿಂದ ಉಂಟಾಗುವ ಜಡ್ಡು, ಆಲಸ್ಯಗಳನ್ನು ದೂರ ಮಾಡುವ ಸ್ನೇಹ ದ್ರವ್ಯಗಳ ಹಂಚಿಕೆ, ಸೇವನೆ, ದಾನ ಈ ಸಂಕ್ರಾಂತಿಯ ವೈಶಿಷ್ಟ್ಯ ಮನಸ್ಸಿನ ಕಹಿ ಭಾವನೆ ಮರೆತು ಸಿಹಿ ಭಾವ ತುಂಬಿ ಅಮೃತ ಪಾತ್ರರಾಗೋಣ ಎಂಬುದರ ದ್ಯೋತಕವಾಗಿದೆ. ಗಣೇಶ ಚತುರ್ಥಿ, ದೀಪಾವಳಿಗಳಂದು ಕಂಡು ಬರುವ ಬಾಹ್ಯಾಡಂಬರ, ಬಾಣ ಬಿರುಸುಗಳೇ ಮುಂತಾದ ವ್ಯರ್ಥವಾದ ಖರ್ಚು-ವೆಚ್ಚಗಳು ಇಲ್ಲದಿರುವುದು ಈ ಹಬ್ಬದ ಆಗ್ಗಳಿಕೆಯೆನ್ನಬಹುದು.

ಸೌಭಾಗ್ಯವತಿ ಸ್ತ್ರೀಯ ಮಕರ ಸಂಕ್ರಾಂತಿಯಂದು ಇನ್ನೋರ್ವ ಸೌಭಾಗ್ಯವತಿ ಸ್ತ್ರೀಗೆ ಬಾಗಿನವನ್ನು ನೀಡಿ ಉಡಿ ತುಂಬುವುದೆಂದರೆ ಇನ್ನೋರ್ವ ಸ್ತ್ರೀಯಲ್ಲಿನ ದೇವಿ ತತ್ತ್ವದ ಪೂಜೆಯನ್ನು ಮಾಡಿ ಅವಳಿಗೆ ತನು, ಮನ ಮತ್ತು ಧನದಿಂದ ಸಂಪೂರ್ಣ ಶರಣಾಗುವುದು. ಬಾಗಿನ ನೀಡುವ ವಸ್ತುಗಳು ಸತ್ತ್ವ ಪ್ರಧಾನ (ಉದಾ : ಆಧ್ಯಾತ್ಮಿಕ ಗ್ರಂಥಗಳು, ಸೌಭಾಗ್ಯ ದ್ರವ್ಯಗಳು, ಇತ್ಯಾದಿ) ವಾಗಿರಬೇಕು.

ಭಗವದ್ಗೀತೆಯ ವಿಭೂತಿ ಯೋಗದಲ್ಲಿ ಶ್ರೀಕೃಷ್ಣನು ತಾನು ಅಯನಗಳಲ್ಲಿ ನಾನು ಉತ್ತರಾಯಣ ಎಂದೇ ಹೇಳಿಕೊಂಡಿದ್ದಾನೆ. ಸಂಕ್ರಾಂತಿಯೊಂದಿಗೆ ದೇವತೆಗಳ ಪಾಲಿನ ಹಗಲೂ ರಾಕ್ಷಸರ ಪಾಲಿನ ರಾತ್ರಿಯೂ ಆರಂಭವಾಗುತ್ತದೆ ಎನ್ನುವುದು ಪೌರಾಣಿಕ ಐತಿಹ್ಯ ಈ ಅವಧಿಯಲ್ಲಿ ದಿನದ ಅವಧಿ ಹೆಚ್ಚಾಗಿ ರಾತ್ರಿಯ ಅವಧಿ ಕಡಿಮೆಯಾಗುತ್ತ ಹೋಗುತ್ತದೆ. ಸೂರ್ಯನು ಮೇಲೇರಿ ಪ್ರಕಾಶ ಬೀರುವಂತೆ ನಮ್ಮ ಬಾಳಲ್ಲೂ ಕತ್ತಲು ಹೋಗಿ ಹೊಸ ಬೆಳಕು ಬರುವುದು ಎಂಬ ನಂಬಿಕೆಯಿಂದ ಈ ಹಬ್ಬವನ್ನು ಆಚರಿಸುತ್ತೇವೆ.

ಸಾಮಾನ್ಯವಾಗಿ ಸೂರ್ಯೋದಯ ಪೂರ್ವದಲ್ಲಿ ಸೂರ್ಯಾಸ್ತ ಪಶ್ಚಿಮದಲ್ಲಿ ಎಂದು ಹೇಳುವುದು ವಾಡಿಕೆ. ಆದರೆ ಕರಾರುವಕ್ಕಾಗಿ ಪೂರ್ವದಲ್ಲೇ ಸೂರ್ಯೋದಯ, ಪಶ್ಚಿಮದಲೇ ಸೂರ್ಯಾಸ್ತವಾಗುವುದು ವರ್ಷದಲ್ಲಿ ಎರಡೇ ದಿನಗಳಂದು ಆ ದಿನಗಳನ್ನು ಈ ಕ್ವಿನಾಕ್ಸ್ ಎಂದು ಕರೆಯುತ್ತಾರೆ. ಅಂದು ಹಗಲು, ಇರಳು ಸಮವಾಗಿರುವುದು ವರ್ಷದ ಉಳಿದ ದಿನಗಳಲ್ಲಿ ಹಗಲಿರುಳುಗಳ ಪಾಲು ಸಮವಾಗಿರುವುದಿಲ್ಲ. ಈಕ್ವಿನಾಕ್ಸ್ ದಿವಸಗಳ ಹೊರತಾಗಿ ಸೂರ್ಯನ ಉದಯ ಪೂರ್ವದ ಬಲಕ್ಕೆ (ಉತ್ತರ) ಅಥವಾ ಎಡಕ್ಕೆ (ದಕ್ಷಿಣಕ್ಕೆ) ಆಗುತ್ತದೆ. ಸೂರ್ಯ ಆರು ತಿಂಗಳು ಉತ್ತರ ದಿಕ್ಕಿನಲ್ಲಿ ಚಲಿಸುವ ಕಾರಣ ಅದನ್ನು ಉತ್ತರಾಯಣ ಕಾಲ ಎನ್ನುವರು.

ಸಂಕ್ರಾಂತಿಯ ನಾಯಕ ಬೆಳಕು ನೀಡುವ ಸೂರ್ಯನಾದರೆ, ನಾಯಕಿ ಸಸ್ಯ ಬೆಳೆಯಲು ಅನುವು ಮಾಡುವ ಭೂಮಿ



ತಾಯಿ ಹಾಗೂ ವ್ಯವಸಾಯಕ್ಕೆ ಸಹಾಯ ಮಾಡುವ ದನ ಕರು ಪೋಷಕನವರು.

ನಮ್ಮ ಹಿರಿಯರು ತುಂಬ ಬುದ್ಧಿವಂತರು. ಯಾವ ಋತುವಿನಲ್ಲಿ ಯಾವ ಆಹಾರ ಸೇವನೆ ಅವಶ್ಯಕ ಎಂದು ಅರಿತು ಹಬ್ಬಹರಿದಿನಗಳ ಆಚರಣೆಯಲ್ಲಿ ಸ್ವಾಸ್ಥ್ಯ ಪ್ರಜ್ಞೆಯನ್ನು ಬೆಸೆದಿದ್ದಾರೆ. ಹೀಗೆ ಹಲವು ನಿಟ್ಟಿನಲ್ಲಿ ಸಂಕ್ರಾಂತಿ ಬದುಕಿನ ಹೊಸ ಪರ್ವಕಾಲಕ್ಕೆ ನಾಂದಿ. ಯಾಂತ್ರಿಕ ಬದುಕಿನಲ್ಲಿ ಹಲವಾರು ಕಟ್ಟಳೆ, ನಂಬುಗೆ, ಆಚರಣೆಗಳು ಮರೆಯಾಗಿದ್ದರೂ, ಅವುಗಳಲ್ಲಿ ಕೊಂಚವಾದರೂ ಉಳಿದಿದೆ ಎಂಬದೇ ಸಂತಸದ ಸಂಗತಿ.



"ಓಂ ನಮೋ ವೇಂಕಟೇಶಾಯ"

**ಈ ತಿಂಗಳು ಸಂಕ್ರಾಂತಿ ವಿಶೇಷ ಸಂಚಿಕೆ ಆದ ಕಾರಣ ಪ್ರತಿ ತಿಂಗಳು ಇಡುವ ಧಾರಾವಾಹಿಯನ್ನು ಮುಂದಿನ ತಿಂಗಳು ಇಡಲಾಗುವುದು. ಭಕ್ತರು ಮುಂದಿನ ತಿಂಗಳು ಧಾರಾವಾಹಿಯನ್ನು ನೋಡಬಹುದು.**



# ಆರೋಗ್ಯಾಮೃತ ಬಾಳೆ

**ತೆಲುಗು ಮೂಲ : ಡಾ|| ಸಿ. ಮಧುಸೂದನಶರ್ಮ**

**ಅನುವಾದ :- ಶ್ರೀಮತಿ.**

ಭಗವಂತನಿಗೆ ನಿವೇದಿಸಲ್ಪಡುವ ಫಲ ಗಳಲ್ಲಿ ಅತ್ಯಂತ ಪ್ರಾಮುಖ್ಯತೆಯನ್ನು ಪಡೆದುಕೊಂಡಿರುವ ಪರಮ ಪವಿತ್ರ ಫಲ ಬಾಳೆ. ಸಂಸ್ಕೃತದಲ್ಲಿ ಇದನ್ನು ಕದಳಿಫಲ ಎಂದು ಕರೆಯುತ್ತಾರೆ.

ಮ್ಯೂನೇಸಿಯೆಂಬ ವೃಕ್ಷ ಕುಟುಂಬಕ್ಕೆ ಸೇರಿದ ಈ ಬಾಳೆಯ ಶಾಸ್ತ್ರೀಯ ನಾಮಧೇಯ 'ಮ್ಯೂಸಾ ಪ್ಯಾರಡೈಸಿಕ', ಹಬ್ಬ ಹರಿದಿನ, ನೇಮ, ವ್ರತ ವಿವಾಹದಂಥ ಶುಭಕಾರ್ಯ ಗಳಲ್ಲಿ ಬಾಳೆಯ ಎಲೆ, ಹಣ್ಣು, ಮೊಗ್ಗು, ಕಾಡ, (ದಿಂಡು) ಗಳನ್ನು ಆಯಾ ಸಂದರ್ಭಾನುಸಾರ ಸದ್ವಿನಿಯೋಗ ಮಾಡಿಕೊಳ್ಳುತ್ತಾ ವಿಶೇಷ ಪ್ರಧಾನ್ಯತೆಯಿಂದ ನಮ್ಮ ಸಂಸ್ಕೃತಿ ಸಂಪ್ರದಾಯ ಗಳಲ್ಲಿ ಒಂದಾಗಿ ಬೆರೆತು ಹೋಗಿದೆ. ಆದ್ದರಿಂದಲೇ ಬಾಳೆಗಿಡ ವನ್ನು ಕಲ್ಪವೃಕ್ಷವೆಂದು ಭಾವಿಸುತ್ತಾರೆ.

ಬಾಳೆ ಎಲೆಯಲ್ಲಿ ಬಿಸಿ ಬಿಸಿಯಾದ ಆಹಾರವನ್ನು ಬಡಿಸಿ ದಾಗ ಆ ಆಹಾರದೊಂದಿಗೆ ಆ ಎಲೆಯಲ್ಲಿಯ ರಸಾಯನಿಕ ಗಳು ಬೆರೆತು ಆಹಾರಕ್ಕೆ ಒಳ್ಳೆಯ ರುಚಿ ಬರುವುದಲ್ಲದೇ ತಿಂದ ಆಹಾರ ಚೆನ್ನಾಗಿ ಜೀರ್ಣವಾಗಲು ಸಹಾ ಸಹಕರಿ ಸುತ್ತದೆ.

ಹಿಂದಿನ ಕಾಲದಲ್ಲಿ ನಮ್ಮ ಹಿರಿಯರು ಪ್ರತಿನಿತ್ಯ ಬಾಳೆ ಯೆಲೆಯಲ್ಲಿ ಬಡಿಸಿದ ಆಹಾರವನ್ನು ಮಾತ್ರ ಸ್ವೀಕರಿಸುತ್ತಿ ದ್ದರು.ಚಿಕ್ಕ ವಯಸ್ಸಿನಲ್ಲಿ ಬಾಲನೆರೆಯು ಅಂದರೆ ಕೂದಲು ಬಿಳಿಯಾಗುವಂಥ ಸಮಸ್ಯೆಗಳು ಬಾರದಿರಲು ಇದು ಕೂಡ ಒಂದು ಕಾರಣವೆಂದು ಹಲವರ ಅಭಿಪ್ರಾಯ.

ಬಾಳೆಯು ಒಂದು ಮಂಗಳಕರ ದ್ರವ್ಯವೊಂದೇ ಅಲ್ಲದೇ ಆರೋಗ್ಯ ಭಾಗ್ಯವನ್ನು ಪ್ರಸಾದಿಸುವ ಒಂದು ಅಮೃತ ತುಲ್ಯ ಔಷಧವೂ ಹೌದು. ಬಾಳೆಹಣ್ಣಿನಲ್ಲಿರುವ ವಿಶೇಷವಾದ ಗುಣ ಗಳು ದೈನಂದಿನ ಬದುಕಿನಲ್ಲಿ ನಾವು ಎದುರ್ಗೊಳ್ಳುವ ವಿವಿಧ ಅನಾರೋಗ್ಯ ಸಮಸ್ಯೆಗಳಿಗೆ ಹೇಗೆ ಸದ್ವಿನಿಯೋಗ ಮಾಡಿ ಕೊಳ್ಳಬಹುದೆಂಬುದನ್ನು ನೋಡೋಣ.

ಬಾಳೆಹಣ್ಣಿನಲ್ಲಿರುವ ಟ್ರಿಪ್ಟೋಫಾನ್ ಎಂಬ ಪ್ರೋಟೀನ್ ನಮ್ಮ ಶರೀರದಲ್ಲಿ ಸರಟೋನಿನ್‌ನ ಉತ್ಪತ್ತಿಮಾಡುವುದರಿಂದ ಮಾನಸಿಕ, ಆಹ್ಲಾದ, ಉಲ್ಲಾಸ ಉಂಟಾಗುತ್ತವೆ.

**ಮೊಡವೆಗಳು ಕಪ್ಪುಕಲೆಗಳು ತೊಲಗಿ ಮುಖ ಅಂದವಾಗಿ ಕಾಣಲು:**

ಚೆನ್ನಾಗಿ ಕಳಿತ ಒಂದು ಬಾಳೆಹಣ್ಣು ಹಿಸುಕಿ ಅದರಲ್ಲಿ ಒಂದು ಟೀ ಸ್ಪೂನ್ ರೋಸ್ ವಾಟರ್ ಇಲ್ಲವೇ ಪನ್ನೀರು ಕಲಿಸಿ ಮುಖದ ಮೇಲೆ ಲೇಪನ ಮಾಡಿ ಒಂದು ಗಂಟೆ ಬಿಟ್ಟು ಉಗುರು ಬೆಚ್ಚಗಿನ ನೀರಿನಲ್ಲಿ ತೊಳೆದರೆ ಉತ್ತಮ ಪ್ರಯೋಜನ ಉಂಟಾಗುತ್ತದೆ. ಒರಟು ಚರ್ಮ ಮಾಯವಾಗಿ ಮುಖವು ಮೃದು ವಾಗಿ ತಯಾರಾಗುತ್ತದೆ.

**ಚರ್ಮ ಸಮಸ್ಯೆಗೆ :**

ದಿನವೂ ಒಂದು ಬಾರಿ ಬಾಳೆಹಣ್ಣಿನ ಗೊಜ್ಜಿನಲ್ಲಿ ತಕ್ಕಷ್ಟು ಪನ್ನೀರು ಕಲಿಸಿ ಲೇಪನ ಮಾಡುತ್ತಿದ್ದರೆ ದದ್ದುಗಳು, ತುರಿತಗಳು, ಚರ್ಮದ ಉರಿ, ಬಿರುಕುಪಾದ, ಒಡೆದ ಕೈಯುರಿಗಳು ಶಮನ ವಾಗುತ್ತವೆ.

**ಕಾಲಿನ ಸೀಳುವಿಕೆಗೆ :**

ದಿನವೂ ಒಂದು ಬಾರಿ ಬಾಳೆ ಹಣ್ಣಿನ ಗೊಜ್ಜನ್ನು ಕಾಲಿಗೆ ಹಚ್ಚಿ 15 ನಿಮಿಷಗಳು ಬಿಟ್ಟು ತೊಳೆಯುತ್ತಿದ್ದರೆ ಈ ಸಮಸ್ಯೆ ಶೀಘ್ರಗತಿಯಲ್ಲಿ ಕಡಿಮೆಯಾಗುತ್ತದೆ.

**ಬಾಧಿಸುವ ತೀವ್ರ ಕೆಮ್ಮಿಗೆ:**

ದಿನವೂ ಬೆಳಗ್ಗೆ ಸಾಯಂಕಾಲ ಒಂದು ಬಾಳೆಹಣ್ಣಿನ ಚಿಕ್ಕ ತುಂಡಿನಲ್ಲಿ ಮಧ್ಯೆ ತೂತು ಮಾಡಿ ಅದರಲ್ಲಿ 2-3 ಚಿಟಿಕೆ ಕಾಳಮೆಣಸಿನ ಪುಡಿ ಹಾಕಿ, ಆ ಹಣ್ಣನ್ನು ನುಂಗುತ್ತಿದ್ದರೆ ಬಾಧಿ ಸುವ ಕೆಮ್ಮು ಬಹುಬೇಗ ಶಮನಗೊಳ್ಳುತ್ತದೆ.

**ಅತಿಮೂತ್ರ ವ್ಯಾಧಿಗೆ :**

50 ಗ್ರಾಂ ಬಾಳೆಕಾಯಿಯ ಪುಡಿಯಲ್ಲಿ 10 ಗ್ರಾಂ ಕಾಳಮೆಣಸಿನ ಪುಡಿ ಕಲಿಸಿಟ್ಟುಕೊಂಡು ಎರಡು ಬಾರಿ ದಿನಕ್ಕೆ ಬಾರಿಯೊಂದಕ್ಕೆ ಒಂದೆರಡು ಗ್ರಾಂ ಪುಡಿಯನ್ನು ತಕ್ಕಷ್ಟು ಜೇನಿ ನಲ್ಲಿ ಕಲಿಸಿ ಸೇವಿಸುತ್ತಿದ್ದರೆ ಮೂತ್ರಪಿಂಡದ ಸ್ನಾಯುಗಳು ದೃಢತೆಯನ್ನು ಪಡೆದುಕೊಂಡು ಅನಾಯಾಸವಾಗಿ ಮೂತ್ರ ವಿಸರ್ಜನೆಯಾಗುವುದು, ಮೂತ್ರ ಕಡಿಮೆ ಪ್ರಮಾಣದಲ್ಲಿ ಜಾಸ್ತಿ ಸಾರಿ ಬರುವುದು ಇಂತಹ ತೊಂದರೆಗಳು ತಗ್ಗುತ್ತವೆ.

**ಬಾಯಿ,ಮೂಗು,ಮಲ-ಮೂತ್ರದ್ವಾರಮೂಲಕಆಗುವರಕ್ತಸ್ರಾವಕ್ಕೆ:**

ಬಾಳೆಯ ಎಸಳುಗಳನ್ನು ಒಣಗಿಸಿ ಪುಡಿಮಾಡಿ, ಜರಡಿ ಹಿಡಿದು, ಸಮಸಮವಾಗಿ ಸ್ಫಟಿಕ ಬೆಲ್ಲ ಪುಡಿ ಕಲಿಸಿ ಸೇವಿಸು ತ್ತಿದ್ದರೆ ಶೀಘ್ರವಾಗಿ ಫಲಿತಾಂಶಗಳು ಕಂಡು ಬರುತ್ತದೆ.





# ದಾರಿ ಯಾವು ದಯ್ಯ ವೈಕುಂಠಕ್ಕೆ

- ಪ್ರಣವ
90356 18076

*ಪರಮಪದದೊಳಗೆ ವಿಷಧರನ ತಲ್ಪದಲಿ*
*ಸಿರಿ ಸಹಿತ ಕ್ಷೀರವಾರಧಿಯೊಳಿರಲು..*

- ಇದು ಕನಕದಾಸರ ವೈಕುಂಠದ ವರ್ಣನೆ. ಕ್ಷೀರಸಾಗರದಲ್ಲಿ ತಾನೇ ಸುಪ್ಪತಿಗೆಯಾಗಿ ಜಗದೋದ್ಧಾರನನ್ನು ಮಲಗಿಸಿಕೊಂಡು ಸಾಸಿರ ನಾಮವನನ್ನು ತನ್ನ ಸಾವಿರ ನಾಲಿಗೆಯಿಂದ ಸ್ತುತಿಸುತ್ತಿರುವ ಸಂಪತ್ತಿನ ಒಡತಿ ಲಕ್ಷ್ಮೀದೇವಿ. ನಾಭಿಯಿಂದ ಮೇಲೆದ್ದ ಕಮಲದಲ್ಲಿ ಸರಸ್ವತಿ ಸಹಿತನಾಗಿ ತನ್ನ ನಾಕುಮೊಗದಿಂದ ಅನಂತವಾಗಿ ವೇದ ಪಠಿಸುತ್ತಿರುವ ಬ್ರಹ್ಮ, ಏಳು ಬಾಗಿಲುಗಳ ಆ ವೈಕುಂಠವನ್ನು ಅನವರತ ಕಾಯುತ್ತಿರುವ ಜಯವಿಜಯರು, ಪರಂಧಾಮನ ಭೇಟಿಗಾಗಿ ಚಾತಕ ಪಕ್ಷಿಗಳಂತೆ ಬಾಗಿಲಿನಲ್ಲಿ ಕಾಯುತ್ತ ನಿಂತ ಸನಕಾದಿ ಋಷಿಗಳು. ಸಾಮಗಾಯನ ಮಾಡುತ್ತ ಭಗವಂತನನ್ನು ಹಾಡಿಹೊಗಳುತ್ತಿರುವ ನಾರದ ತುಂಬುರರು.

ಒಮ್ಮೆ ಮಾತ್ರ ಅದರ ಪ್ರವೇಶವಾದರೆ ಸಾಕು. ತಮ್ಮ ಅನಂತ ಜನ್ಮಗಳ ತಪದ ಪುಣ್ಯದಿಂದ ದ್ವಾರದಲ್ಲಿ ಬಂದು ಸೇರಿರುವ ಸಾಧಕರ ತುಡಿತವು ಮರಳಿ ಬಾರದ ಆ ವೈಕುಂಠ ಪುರದ ಪ್ರವೇಶದ ಚರಮೇಚ್ಛೆ! ಹೌದು, ವೈಕುಂಠವೆಂದರೇನೇ ನಾಶ ವಿಲ್ಲದ್ದು ಎಂದು. ನಮ್ಮ ಜನನ ಮರಣಾದಿ ಅವಸ್ಥೆಗಳೆಲ್ಲವೂ ನಾಶಕ್ಕೊಳಪಟ್ಟಿರು ವಂಥವುಗಳು, ಆಸ್ತಿಕರ ಅಂತಿಮ ಕಾಮವು ಮೋಕ್ಷವೇ ಆಗಿದೆ.ಸಾಧನೆಯಿಂದ ಮೋಕ್ಷಪ್ರಾಪ್ತಿ. ವ್ರತ ನಿಯಮಗಳು, ಉಪವಾಸಗಳು ಸಾಧನೆಯ ಸೋಪಾನ ಗಳು.ಜಗತ್ತಿನ ಬಹುತೇಕ ಎಲ್ಲ ಧರ್ಮಗಳೂ ಉಪವಾಸಕ್ಕೆ ಮಹತ್ವ ನೀಡಿವೆ. ಎಲ್ಲವೂ ಮನದ ಏಕಾಗ್ರತೆಗೆ, ತನ್ಮೂಲಕ ಆಧ್ಯಾತ್ಮ ಸಾಧನೆಗೆ ಅದ್ದರಿಂದ ಕೈವಲ್ಯ ಪ್ರಾಪ್ತಿಗೆ ಉಪವಾಸ ಸಹಾಯಕಾರಿ ಎಂಬುದನ್ನು ಮನಗಂಡಿದ್ದಾರೆ. ಕಟ್ಟಳೆಗಳು ಮನವನ್ನು ಹಿಡಿತದಲ್ಲಿರಿಸುತ್ತವೆ. ಧರ್ಮವು ಒಂದು ಉಪಕರಣ ಮಾತ್ರ ಹೇಗೆ ಉಚ್ಚ ಶಿಕ್ಷಣಕ್ಕೆ ಅವಿರತ ಸಾಧನೆಯು ಮುಖ್ಯವೋ ಹಾಗೆಯೇ ಮೋಕ್ಷ ಸಾಧನೆಗೆ, ಸ್ನಾನದ ಮೂಲಕ ದೇಹ ಶುದ್ಧಿ ಮಾಡಿಕೊಳ್ಳುವುದರಿಂದ ಮೊದಲ್ಗೊಂಡು ಯೋಗದ



ಮೂಲಕ ಸಮಾಧಿಯನ್ನು ಸಾಧಿಸುವುದರ ಹಂತದಲ್ಲಿ ನಾನಾ ವ್ರತನಿಯಾಮಾದಿಗಳು.ಅದರಲ್ಲಿ ಉಪವಾಸವೂ ಒಂದು.ಎಲ್ಲ ತಿಥಿಗಳಿಗೂ ಒಬ್ಬೊಬ್ಬ ದೇವತೆಗಳಿದ್ದಾರೆ. ಏಕಾದಶಿಗೆ ಹರಿಯೇ ಅಭಿಮಾನಿ. ಆದ್ದರಿಂದಲೇ ಅದಕ್ಕೆ ಹರಿದಿನವೆಂದು ಹೆಸರು. ಆದ್ದರಿಂದ ಏಕಾದಶಿಗೆ ಎಲ್ಲಿಲ್ಲದ ಮಹತ್ವ.

ಏಕಾದಶಿ ಎಂದರೆ ಹನ್ನೊಂದು. ಹಿಂದೂ ಪಂಚಾಂಗದಲ್ಲಿ ಪ್ರತಿ ಪಕ್ಷದ ಹನ್ನೊಂದು ದಿನಗಳಿಗೆ ಏಕಾದಶಿಯಂದು ಹರಿದಿನವಿದ್ದುದರಿಂದ ಅಂದು ಉಪವಾಸ, ಆಷಾಢ ಏಕಾದಶಿ, ವೈಕುಂಠ ಏಕಾದಶಿ ಹೀಗೆ ವರ್ಷಪೂರ್ತಿ ಬರುವ ಅವುಗಳಿಗೆ ಆದರದ್ದೇ ಆದ ಮಹತ್ವವಿದೆ.

ಚೈತ್ರದ ಕಾಮದಾ ಏಕಾದಶಿಯಿಂದ ಫಾಲ್ಗುಣದ ಪಾಪ ವಿಮೋಚನೀಯವರೆಗೂ ಏಕಾದಶಿಗೆ ಮಹತ್ವದ ಹೆಸರುಗಳಿವೆ. ಆಷಾಢ ಏಕಾದಶಿಯು ದಕ್ಷಿಣಾಯನದಲ್ಲಿ ಪ್ರಾರಂಭವಾಗುವ ಮಹತ್ವದ ವ್ರತ, ದಕ್ಷಿಣಾಯನವು ದೇವತೆಗಳಿಗೆ ರಾತ್ರಿ. ಆಷಾಢ ಏಕದಶಿಯಂದು ಯೋಗ ನಿದ್ರೆಗೆ ಜಾರುವ ಶ್ರೀ ಹರಿ ಉತ್ಥಾನ ದ್ವಾದಶಿಯಂದು ಏಳುತ್ತಾನೆ. ಅದಕ್ಕಾಗಿ ನಾಲ್ಕು ತಿಂಗಳು ಯಾವುದೇ ಶುಭಕಾರ್ಯಗಳಿಲ್ಲ. ಈ ಅವಧಿಯಲ್ಲಿ ಮಾಡುವ ವ್ರತಗಳಿಗೆ ಅಮಿತ ಪುಣ್ಯವೆಂದು ಶ್ರದ್ಧಾಳುಗಳ ಅಸೀಮ ನಂಬಿಕೆ. ವೈಕುಂಠ ಏಕಾದಶಿಯಂದು ಉಪವಾಸ ಮಾಡುವವರಿಗೆ ಇಡೀ ವರ್ಷ ಏಕಾದಶಿ ಮಾಡಿದ ಪುಣ್ಯ ಬರುತ್ತದೆಂದು ಶಾಸ್ತ್ರ ಪುರಾಣಗಳು ಸಾರುತ್ತವೆ.

### ಸುಪ್ರಭಾತದ ಮಹತ್ವ

ದಿಕ್ಕುಗಳು ನಾಲ್ಕು, ಅಂತೆಯೇ ಬೆಳಗಿನಲ್ಲಿ ಹಾಡುವ ಶ್ರೀವೆಂಕಟೇಶ್ವರ ಸುಪ್ರಭಾತದಲ್ಲೂ ನಾಲ್ಕು ಭಾಗಗಳು. ಅವೆಂದರೆ, ಸುಪ್ರಭಾತ, ಸ್ತೋತ್ರ, ಪ್ರಪತ್ತಿ ಮತ್ತು ಮಂಗಲಾಶಾಸನ, ಒಂದು ಅಧ್ಯಯನದ ಪ್ರಕಾರ ಗೋವಿಂದನನ್ನು ಕುರಿತಾದ "ಕೌಶಲ್ಯಾ ಸುಪ್ರಜಾರಾಮ...' ಸುಪ್ರಭಾತವೇ ಪ್ರಾಚೀನ.ಈ ಕೃತಿಯನ್ನು ಶ್ರೀವೈಷ್ಣವ ಸಂಪ್ರದಾಯದ ವಾದಿಭೀಕರ ಮಹಾಗುರುಗಳೂ ರಚಿಸಿದ್ದಾರೆ. ಎನ್ನುವ ಅಂಶವನ್ನು ತಿರುಮಲ ದೇಗುಲದಿಂದ ಪ್ರಕಟವಾದ 'ವೆಂಕಟೇಶ ಕಾವ್ಯ ಕಲಾಪ' ಎಂಬ ಪುಸ್ತಕದಲ್ಲಿ ನೋಡಬಹುದು. ಅಷ್ಟಕ್ಕೂ ಸುಪ್ರಭಾತವೆಂದರೇನು? ಜಗನ್ನಿಯಾಮಕ ನಾದ ಭಗವಂತನಿಗೂ ನಿದ್ರೆಯೇ? ಅವನನ್ನೂ ಎಚ್ಚರಿಸಬೇಕೆ? ಎನ್ನುವ ಪ್ರಶ್ನೆಗಳೂ ಸಹಜ. ಮನಸ್ಸಿನ ಯೋಚನೆಯಂತೆ ಸ್ವಭಾವವೂ, ಕಾರ್ಯ ಕಾರಣವೂ ಎನ್ನುವಂತೆ ದೇದೀಪ್ಯಮಾನ ಸ್ವರೂಪನಾದ ಭಗವಂತನನ್ನು ನಾವು ಸಾಮಾನ್ಯ ಮನುಷ್ಯನಂತೆಯೇ.." ಕಾಣ ಬಯಸುತ್ತೇವೆ. ಆ ನಂಬುಗೆಯು ಮನಸ್ಸನ್ನು ಎಚ್ಚರಗೊಳಿಸಲು ಯತ್ನಿಸುತ್ತೇವೆ. ಹೌದು, ನಿಜವಾದ ಆಧ್ಯಾತ್ಮ ಚೇತನ ದೃಢಗೊಳ್ಳುವುದು. ಈ ಭಾವದಲ್ಲೇ. ದೇಹ ಮಲಗಿದಂತೆ ಕಂಡರೂ ಮನಸ್ಸು, ಉಸಿರಾಟ ಪ್ರಕ್ರಿಯೆ ಮಾತ್ರ ನಿರಂತರವಾಗಿರುತ್ತದೆ. ಸುಷುಪ್ತಿ ಸ್ಥಿತಿಯಲ್ಲಿರುವ ಮನಸ್ಸನ್ನು ಜಾಗೃತಗೊಳಿಸುವ ಪ್ರಕ್ರಿಯೆಯೇ ಸುಪ್ರಭಾತ. ಅದರೊಂದಿಗೆ ದೈನಂದಿನ ಚಟುವಟಿಕೆಗಳು ಪ್ರಾರಂಭವಾಗುತ್ತವೆ. ಮೂಡಣದ ಸೂರ್ಯೋದಯಕ್ಕೆ ಸುಪ್ರಭಾತ ಸಾಕ್ಷಿಯಾಗುತ್ತದೆ.

ದೇಹವನ್ನು ಹಿಡಿಹಿಪ್ಪೆಯಾಗಿಸುವ ಧನುರ್ಮಾಸದ ಚಳಿಯಲ್ಲೂ ಭಕ್ತಿಯ ಸಿಂಚನ. ವೈಕುಂಠ ಏಕಾದಶಿ ಬಂತೆಂದರೆ ಸಾಕು.. ಎಂತಹವರು ಮೈಚಳಿ ಬಿಟ್ಟೇಳುತ್ತಾರೆ. ಧಡಗುಡಿಸುತ್ತಲೇ ದೇಗುಲಗಳತ್ತ ದಾಪುಗಾಲನ್ನಿಡುತ್ತಾರೆ. ಅವರದು ಮೌಢ್ಯ ಭಾವವೋ ಅಥವಾ ಯಾಂತ್ರಿಕ ನೆಲೆಯೋ ಅಥವಾ ಪ್ರಸಾದದ ಪ್ರಲೋಭನೆಯೋ ವಿಷಯವೇನೇ ಇದ್ದರೂ ಜನ, ಮನಗಳನ್ನು ಒಂದು ಮಾಡುವ ಆಚರಣೆಯೇ ವೈಕುಂಠ ಏಕಾದಶಿ ಎಂದರೆ ಅತಿಶಯೋಕ್ತಿಯಲ್ಲ! ವೈಕುಂಠ ಏಕಾದಶಿ ವ್ರತಾಚರಣೆ, ದರ್ಶನಕ್ಕಷ್ಟೇ ಸೀಮಿತವಲ್ಲ. ಅದರಲ್ಲಿ ಆಧ್ಯಾತ್ಮಿಕ, ವೈಜ್ಞಾನಿಕ ಭಾವವೂ ಸಮ್ಮಿಲನಗೊಂಡಿದೆ.

### ಉತ್ತರಾಯಣದ ದ್ವಾರ

ವೈಕುಂಠ ಏಕಾದಶಿಯಂದು ಉತ್ತರ ದ್ವಾರದ ಮೂಲಕವೇ ಭಗವಂತನನ್ನು ಏಕೆ ದರ್ಶಿಸಬೇಕು? ಅದರ ಹಿನ್ನೆಲೆಯಲ್ಲಿ ಇರುವ ಸಂದೇಶವಾದರೂ ಏನು? ಸ್ಥೂಲವಾಗಿ ಯೋಚಿಸಿ. ಉತ್ತರಾಯಣದ ಮುನ್ನ ಕಾಲವೇ ಸಂಕ್ರಮಣ. ದಕ್ಷಿಣ ದಿಕ್ಕಿಗೆ ಕರ್ಮ ಸ್ಥಾನ ಎನ್ನುವ ಮಾತಿದೆ. 'ತಮಸೋಮಾ ಜ್ಯೋತಿರ್ಗಮಯ' ಎನ್ನುವ ಉಪನಿಷತ್ ವಾಕ್ಯದಂತೆ ಅಜ್ಞಾನದಿಂದ ಸುಜ್ಞಾನದೆಡೆಗೆ, ಕತ್ತಲಿನಿಂದ ಬೆಳಕಿನೆಡೆಗೆ ಸಾಗುವ ಸಮಯವೇ ಉತ್ತರಾಯಣ.

ಮನೆಗೊಂದು ಬಾಗಿಲಿರುವಂತೆ ಉತ್ತರಾಯಣದ ದ್ವಾರವೇ ವೈಕುಂಠ ಏಕಾದಶಿ! ಏಕಾದಶಿ ಆಚರಣೆಯ ನೆವದಲ್ಲಿ ಜಿಹ್ವಾ ಚಾಪಲ್ಯಕ್ಕೆ, ಉತ್ತರದ್ವಾರದಲ್ಲಿ ತಲೆ ತಗ್ಗಿಸಿ ನಡೆದಾಗ ಮಾತ್ರವೇ ವೈಕುಂಠ ಏಕಾದಶಿ ಆಚರಣೆಯಲ್ಲಿ ಒಂದಷ್ಟು ಸಾರ್ಥಕತೆ ಕಂಡೀತು.



## ಜನವರಿ 2023

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| 1 | 2 | 3 | 4 | 5 | 6 | 7 |
| 8 | 9 | 10 | 11 | 12 | 13 | 14 |
| 15 | 16 | 17 | 18 | 19 | 20 | 21 |
| 22 | 23 | 24 | 25 | 26 | 27 | 28 |
| 29 | 30 | 31 | | | | |

## ಫೆಬ್ರವರಿ 2023

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | | | | |

## ಮಾರ್ಚ್ 2023

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | 30 | 31 | |

### ಜನವರಿ 2023

01 ಆಂಗ್ಲ ಹೊಸ ವರ್ಷಾರಂಭ
02 ವೈಕುಂಠ ಏಕಾದಶಿ
07 -13 ರ ವರೆಗೆ ಶ್ರೀ ಆಂಡಾಳ್ ನೀರಾಟೋತ್ಸವ
11 ಶ್ರೀ ತ್ಯಾಗರಾಜರ ಆರಾಧನೆ
14 ಭೋಗಿ, ಭೋಗಿತೇರು.
15 ಮಕರ ಸಂಕ್ರಾಂತಿ.
16 ಕನುಮ, ಶ್ರೀ ಗೋದಾದೇವಿ ಪರಿಣಯೋತ್ಸವ.
21 ಪುರಂದರದಾಸರ ಆರಾಧನೆ
22-30 ದೇವುನಿ ಕಡಪ ಶ್ರೀ ಲಕ್ಷ್ಮೀ ವೆಂಕಟೇಶ್ವರಸ್ವಾಮಿಯವರ ಬ್ರಹ್ಮೋತ್ಸವಗಳು
26 ಗಣತಂತ್ರದಿನೋತ್ಸವ , ವಸಂತ ಪಂಚಮಿ
28 ರಥಸಪ್ತಮಿ, ಭೀಷ್ಮಾಷ್ಟಮಿ

### ಫೆಬ್ರವರಿ 2023

01 ಭೀಷ್ಮ ಏಕಾದಶಿ
05 ಶ್ರೀರಾಮಕೃಷ್ಣ ತೀರ್ಥ ಮುಕ್ಕೋಟಿ
11-19 ಶ್ರೀನಿವಾಸಮಂಗಾಪುರಂ, ಶ್ರೀಕಲ್ಯಾಣ ವೆಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು
11-20 ತಿರುಪತಿ ಶ್ರೀ ಕಪಿಲೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು
18 ಮಹಾಶಿವರಾತ್ರಿ
28 ರಿಂದ ಮಾರ್ಚ್- 8 ರ ವರೆಗೆ ತರಿಗೊಂಡ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿಯವರ ಬ್ರಹ್ಮೋತ್ಸವಗಳು

### ಮಾರ್ಚ್ 2023

03 - 07 ರ ವರೆಗೆ ತಿರುಮಲೆ ಸ್ವಾಮಿಯವರ ತೆಪ್ಪೋತ್ಸವಗಳು
07 ಹೋಳಿಹಬ್ಬ, ಶ್ರೀ ಲಕ್ಷ್ಮೀ ಜಯಂತಿ, ಶ್ರೀ ಕುಮಾರಧಾರ ತೀರ್ಥ ಮುಕ್ಕೋಟಿ
18 ಅನ್ನಮಾಚಾರ್ಯ ವರ್ಧಂತಿ.
20-28 ರ ವರೆಗೆ ತಿರುಪತಿ ಶ್ರೀ ಕೋದಂಡರಾಮ ಸ್ವಾಮಿಯವರ ಬ್ರಹ್ಮೋತ್ಸವಗಳು
22 ಶ್ರೀ ಶೋಭಕೃತ್ ನಾಮ ಸಂವತ್ಸರ ಯುಗಾದಿ
24 ಮತ್ಸ್ಯಜಯಂತಿ
27 ರಿಂದ ಏಪ್ರಿಲ್ 04 ರ ವರೆಗೆ ವಾಯಲ್ಪಾಡು, ಶ್ರೀ ಪಟ್ಟಾಭಿರಾಮ ಸ್ವಾಮಿಯವರ ಬ್ರಹ್ಮೋತ್ಸವಗಳು
30 ಶ್ರೀರಾಮ ನವಮಿ
31 ರಿಂದ ಏಪ್ರಿಲ್ -08 ರ ವರೆಗೆ ಒಂಟಿಮಿಟ್ಟ, ಶ್ರೀ ಕೋದಂಡರಾಮ ಸ್ವಾಮಿಯವರ ಬ್ರಹ್ಮೋತ್ಸವಗಳು

## ತಿರುಮಲೆ ತಿರುಪತಿ ದೇವಸ್ಥಾನಗಳು



### ಏಪ್ರಿಲ್ 2023

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | 29 |
| 30 | | | | | | |

### ಮೇ 2023

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | 1 | 2 | 3 | 4 | 5 | 6 |
| 7 | 8 | 9 | 10 | 11 | 12 | 13 |
| 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 |
| 28 | 29 | 30 | 31 | | | |

### ಜೂನ್ 2023

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | | | | 1 | 2 | 3 |
| 4 | 5 | 6 | 7 | 8 | 9 | 10 |
| 11 | 12 | 13 | 14 | 15 | 16 | 17 |
| 18 | 19 | 20 | 21 | 22 | 23 | 24 |
| 25 | 26 | 27 | 28 | 29 | 30 | |

### ಏಪ್ರಿಲ್ 2023

03-05 ರ ವರಗೆ ತಿರುಮಲೆ ಸ್ವಾಮಿಯವರ ವಸಂತೋತ್ಸವಗಳು
06 ತುಂಬುರು ತೀರ್ಥ ಮುಕ್ಕೋಟಿ
14 ತಮಿಳು ಹೊಸವರ್ಷಾರಂಭ,
ಡಾ॥ ಬಿ.ಆರ್. ಅಂಬೇಡ್ಕರ್ ಜಯಂತಿ
22 ಪರಶುರಾಮ ಜಯಂತಿ,
ಶ್ರೀ ಗಂಗಾ ನದಿ ಪುಷ್ಕರ ಪ್ರಾರಂಭ
23 ಅಕ್ಷಯ ತೃತೀಯ
25 ಶ್ರೀ ಶಂಕರಾಚಾರ್ಯ ಜಯಂತಿ,
ಶ್ರೀರಾಮಾನುಜಚಾರ್ಯ ಜಯಂತಿ
26 ಶ್ರೀ ರಾಮ ಜಯಂತಿ
29 ರಿಂದ ಮೇ - 01 ರ ವರೆಗೆ ತಿರುಮಲೆ
ಶ್ರೀ ಪದ್ಮಾವತಿ ಶ್ರೀನಿವಾಸರ ಪರಿಣಯೋತ್ಸವ

### ಮೇ 2023

02-05 ರ ವರೆಗೆ ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ವಸಂತೋತ್ಸವಗಳು
04. ನೃಸಿಂಹಜಯಂತಿ, ಮಾತೃಶ್ರೀ ತರಿಗೊಂಡ ವೆಂಗಮಾಂಬ ಜಯಂತಿ
4 ರಿಂದ 12 ರ ವರೆಗೆ ನಾಗುಲಾಪುರಂ ಶ್ರೀವೇದನಾರಾಯಣ ಸ್ವಾಮಿಯವರ ಬ್ರಹ್ಮೋತ್ಸವಗಳು
05 ಶ್ರೀ ಕೂರ್ಮ ಜಯಂತಿ
06 ಶ್ರೀ ಅನ್ನಮಾಚಾರ್ಯ ಜಯಂತಿ
13 ರಿಂದ 21 ರ ವರೆಗೆ ಕಾರ್ವೇಟಿನಗರಂ, ಶ್ರೀ ವೇಣುಗೋಪಾಲ ಸ್ವಾಮಿಯವರ
ಬ್ರಹ್ಮೋತ್ಸವಗಳು
14 ಶ್ರೀ ಹನುಮಜಯಂತಿ
16 ತಿರುಪತಿ ಗಂಗಜಾತ್ರೆ
26 ರಿಂದ ಜೂನ್ 03 ರ ವರೆಗೆ ತಿರುಪತಿ, ಶ್ರೀ ಗೋವಿಂದರಾಜ ಸ್ವಾಮಿಯವರ ಬ್ರಹ್ಮೋತ್ಸವಗಳು
30 ರಿಂದ ಜೂನ್ 03 ರ ವರೆಗೆ ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ತೆಪ್ಪೋತ್ಸವಗಳು
31 ರಿಂದ ಜೂನ್ - 08 ರ ವರೆಗೆ ನಾರಾಯಣವನಂ/ಹೃಷೀಕೇಶ/ಅಪ್ಪಲಾಯಗುಂಟ
ಶ್ರೀ ವೆಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು

### ಜೂನ್ 2023

2-4 ತಿರುಮಲೆ ಸ್ವಾಮಿಯವರ ಜ್ಯೇಷ್ಠಾಭಿಷೇಕ
20 ಜಗನ್ನಾಥ ರಥೋತ್ಸವ
24-26 ಶ್ರೀನಿವಾಸ ಮಂಗಾಪುರಂ ಶ್ರೀ ಕಲ್ಯಾಣ ವೆಂಕಟೇಶ್ವರ
ಸ್ವಾಮಿಯವರ ಸಾಕ್ಷಾತ್ಕಾರ ವೈಭವೋತ್ಸವಗಳು
29 ರಿಂದ ಜುಲೈ 02 ರ ವರೆಗೆ ತಿರುಪತಿ ಶ್ರೀ ಕಪಿಲೇಶ್ವರ
ಸ್ವಾಮಿಯವರ ಪವಿತ್ರೋತ್ಸವಗಳು
30 ರಿಂದ ಜುಲೈ 02 ರ ವರೆಗೆ ತಿರುಪತಿ
ಶ್ರೀ ಗೋವಿಂದರಾಜ ಸ್ವಾಮಿಯವರ ಜ್ಯೇಷ್ಠಾಭಿಷೇಕ

## ತಿರುಮಲೆ ತಿರುಪತಿ ದೇವಸ್ಥಾನಗಳು

### ಜುಲೈ 2023

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | 29 |
| 30 | 31 | | | | | |

### ಆಗಸ್ಟ್ 2023

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | | 1 | 2 | 3 | 4 | 5 |
| 6 | 7 | 8 | 9 | 10 | 11 | 12 |
| 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25 | 26 |
| 27 | 28 | 29 | 30 | 31 | | |

### ಸೆಪ್ಟೆಂಬರ್ 2023

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | | | | | 1 | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 | 28 | 29 | 30 |



### ಜುಲೈ 2023

03 ಗುರುಪೂರ್ಣಿಮ, ವ್ಯಾಸ ಪೂರ್ಣಿಮ
05 ತಿರುಪತಿ ಶ್ರೀ ವಿಖನಸಾಚಾರ್ಯರ ಶಾತ್ತುಮೋರೆ
07-09 ತಿರುಚಾನೂರು ಶ್ರೀ ಸುಂದರರಾಜ ಸ್ವಾಮಿಯವರ ಅವತಾರೋತ್ಸವಗಳು
12-15 ತಿರುಪತಿ ಶ್ರೀ ಕಪಿಲೇಶ್ವರ ಸ್ವಾಮಿಯವರ ಪವಿತ್ರೋತ್ಸವ
15 ಶನಿ ತ್ರಯೋದಶಿ
17 ತಿರುಮಲೆ ಸ್ವಾಮಿಯವರ ಆಣಿವರ ಆಸ್ಥಾನಂ
30 ತಿರುಮಲೆ, ನಾರಾಯಣಗಿರಿಯಲ್ಲಿ ಛತ್ರಸ್ಥಾಪನೆ, ತುಲಸಿ ಮಹಾತ್ಮ್ಯೆ

### ಆಗಸ್ಟ್ 2023

09 ಆಡಿ ಕೃತ್ತಿಕ
15 ಸ್ವಾತಂತ್ರ್ಯ ದಿನಾಚರಣೆ
20 ನಾಗಚತುರ್ಥಿ
21 ಗರುಡ ಪಂಚಮಿ, ಮಂಗಳಗೌರಿ ವ್ರತ
25 ಶ್ರೀ ವರಲಕ್ಷ್ಮೀ ವ್ರತ, ಮಾತೃಶ್ರೀ ತರಿಗೊಂಡ ವೆಂಗಮಾಂಬ ವರ್ಧಂತಿ
26-29 ತಿರುಮಲೆ ಸ್ವಾಮಿಯವರ ಪವಿತ್ರೋತ್ಸವಗಳು
30 ಶ್ರಾವಣ ಪೌರ್ಣಮಿ, ಶ್ರೀ ವಿಖನಸ ಮಹಾಮುನಿ ಜಯಂತಿ
31 ಹಯಗ್ರೀವ ಜಯಂತಿ, ಗಾಯತ್ರಿ ಜಪಂ

### ಸೆಪ್ಟೆಂಬರ್ 2023

06 ಶ್ರೀಕೃಷ್ಣಾಷ್ಟಮಿ
07 ಗೋಕುಲಾಷ್ಟಮಿ
17 ಬಲರಾಮ ಜಯಂತಿ, ಶ್ರೀ ವರಾಹ ಜಯಂತಿ
18-26 ರ ವರಗೆ ತಿರುಮಲೆ ಶ್ರೀ ವೆಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು
18 ಗಣೇಶ ಚತುರ್ಥಿ
19 ಋಷಿಪಂಚಮಿ
22 ತಿರುಮಲೆ ಸ್ವಾಮಿಯವರ ಗರುಡಸೇವೆ
24-27 ರ ವರಗೆ ತಿರುಪತಿ ಶ್ರೀ ಗೋವಿಂದರಾಜ ಸ್ವಾಮಿಯವರ ಪವಿತ್ರೋತ್ಸವಗಳು
26-29 ರ ವರಗೆ ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ಪವಿತ್ರೋತ್ಸವಗಳು
26 ವಾಮನ ಜಯಂತಿ
28 ಅನಂತ ಪದ್ಮನಾಭವ್ರತ
30 ಮಹಾಲಯ ಅಮಾವಾಸ್ಯೆ ಪ್ರಾರಂಭ



ತಿರುಮಲೆ ತಿರುಪತಿ ದೇವಸ್ಥಾನಗಳು

## ಅಕ್ಟೋಬರ್ 2023

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| 1 | 2 | 3 | 4 | 5 | 6 | 7 |
| 8 | 9 | 10 | 11 | 12 | 13 | 14 |
| 15 | 16 | 17 | 18 | 19 | 20 | 21 |
| 22 | 23 | 24 | 25 | 26 | 27 | 28 |
| 29 | 30 | 31 | | | | |

## ನವೆಂಬರ್ 2023

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | 30 | | |

## ಡಿಸೆಂಬರ್ 2023

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | | | | | 1 | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 | 28 | 29 | 30 |
| 31 | | | | | | |

### ಅಕ್ಟೋಬರ್ 2023

02 ಗಾಂಧಿ ಜಯಂತಿ
14 ಮಹಾಲಯ ಅಮಾವಾಸ್ಯೆ
15-23 ರ ವರೆಗೆ ತಿರುಮಲೆ ಸ್ವಾಮಿಯವರ ನವರಾತ್ರಿ ಬ್ರಹ್ಮೋತ್ಸವಗಳು
15-23 ತಿರುಚಾನೂರು, ಶ್ರೀ ಪದ್ಮಾವತಿ ಅಮ್ಮನವರ ನವರಾತ್ರಿ ಉತ್ಸವ
19 ತಿರುಮಲೆ ಸ್ವಾಮಿಯವರ ಗರುಡಸೇವೆ
20 ಸರಸ್ವತಿ ಪೂಜೆ
22 ದುರ್ಗಾಷ್ಟಮಿ
23 ವಿಜಯದಶಮಿ

### ನವೆಂಬರ್ 2023

08-11 ಶ್ರೀನಿವಾಸಮಂಗಾಪುರಂ, ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರ ಪವಿತ್ರೋತ್ಸವಗಳು
10-18 ರ ವರೆಗೆ ತಿರುಚಾನೂರು, ಶ್ರೀ ಪದ್ಮಾವತಿ ಅಮ್ಮನವರ ಬ್ರಹ್ಮೋತ್ಸವಗಳು
12 ನರಕ ಚತುರ್ದಶಿ, ದೀಪಾವಳಿ
13 ಶ್ರೀ ಕೇದಾರ ಗೌರಿ ವ್ರತ
14 ತಿರುಚಾನೂರು, ಶ್ರೀ ಪದ್ಮಾವತಿ ಅಮ್ಮನವರ ಗಜವಾಹನ ಸೇವೆ
17 ನಾಗರ ಪಂಚಮಿ
18 ಪಂಚಮಿ ತೀರ್ಥ
19 ಸ್ಕಂದ ಷಷ್ಠಿ, ತಿರುಮಲೆ ಸ್ವಾಮಿಯವರ - ಪುಷ್ಪಯಾಗ, ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ಪುಷ್ಪಯಾಗ
24 ಕೈಶಿಕ ದ್ವಾದಶಿ, ಶ್ರೀ ಚಕ್ರತೀರ್ಥ ಮುಕ್ಕೋಟಿ
26 ಕಾರ್ತೀಕ ಪೌರ್ಣಮಿ

### ಡಿಸೆಂಬರ್ 2023

09 ನಾಗುಲಾಪುರಂ ಶ್ರೀ ವೇದನಾರಾಯಣ ಸ್ವಾಮಿಯವರ ಪವಿತ್ರೋತ್ಸವಗಳು
10 ಶ್ರೀಧನ್ವಂತರಿ ಜಯಂತಿ
12 ತಿರುಮಲೆ ಸ್ವಾಮಿಯವರ ಸನ್ನಿಧಿಯಲ್ಲಿ ಅಧ್ಯಯನೋತ್ಸವ ಪ್ರಾರಂಭ
17 ಧನುರ್ಮಾಸ ಪ್ರಾರಂಭ
22-26 ರ ವರೆಗೆ ತಿರುಪತಿ, ಶ್ರೀ ಕಪಿಲೇಶ್ವರ ಸ್ವಾಮಿಯವರ ತೆಪ್ಪೋತ್ಸವಗಳು
23 ವೈಕುಂಠ ಏಕಾದಶಿ, ಗೀತಾ ಜಯಂತಿ
24 ತಿರುಮಲೆ ಸ್ವಾಮಿಯವರ ಪುಷ್ಕರಿಣಿ ತೀರ್ಥ ಮುಕ್ಕೋಟಿ
26 ಶ್ರೀ ದತ್ತ ಜಯಂತಿ
28 ತಿರುಮಲೆ ಸ್ವಾಮಿಯವರ ಪ್ರಣಯ ಕಲಹ ಮಹೋತ್ಸವ



# ಮಾತಿಗೂ ಮತ್ತು ಸಂಗೀತಕ್ಕೂ ಸರಸ್ವತಿಯೇ ದೇವತೆ

## ಸರಸ್ವತಿಯನ್ನು ಆರಾಧಿಸುವ ದಿನ ವಸಂತಪಂಚಮಿ

- ಹನುಮಂತ. ಮ.ದೇಶಕುಲಕರ್ಣಿ
94803 64915

ವೇದಗಳ ತಾಯಿ ಶಾರದೆಗೆ ವಸಂತಪಂಚಮಿಯ ದಿನದಂದು ಜಯಂತಿಯನ್ನು ಆಚರಿಸಲಾಗುತ್ತದೆ.ಹಿಂದೂ ಪಂಚಾಂಗದ ಪ್ರಕಾರ ಮಾಘ ಮಾಸದಲ್ಲಿ ಬರುವ ಪಂಚಮಿಯನ್ನು ವಸಂತಪಂಚಮಿಯೆಂದು ಕರೆಯಲಾಗಿದೆ. ಹಳದಿ ಹೂವುಗಳಿಂದ ಪೂಜಿಸಬೇಕು. ಆ ದಿನ ಹಳದಿ ಬಟ್ಟೆಯನ್ನು ಧರಿಸಬೇಕು. ಶ್ರೀಗಂಧವನ್ನು ಉಪಯೋಗಿಸಬೇಕು. ದೇಶಾದ್ಯಂತ ಈ ದಿನವನ್ನು ಆಚರಿಸುತ್ತಾರೆ. ಈ ದಿನದಂದು ಜಾನಪದ ನೃತ್ಯ, ಗಾಳಿಪಟವನ್ನು ಹಾರಿಸುವ ದಿನವನ್ನಾಗಿ ಆಚರಿಸುತ್ತಾರೆ. ಕೆಲವು ಕಡೆ ಈ ದಿನವನ್ನು "ವಿದ್ಯಾಆರಂಭ" ದಿನವನ್ನಾಗಿ ಆಚರಿಸುತ್ತಾರೆ.

ಸರಸ್ವತಿಯೆಂದರೆ "ಸರಸ್" ಎಂಬುವುದು ಮಹಿಳೆ ಎಂದು "ವತಿ" ಎಂದರೆ ಹರಿವು ಎಂದು. ಜ್ಞಾನದ ಸಾಗರದ ಹರಿವನ್ನು ಹರಿಸುವ ಮಾತೆ ಆಗಿದ್ದಾಳೆ. ಸರಸ್ವತಿಯು ಸತ್ವ ಗುಣದ ದೇವತೆ. ಆಕೆಯನ್ನು ಯಾರು ತಾನೆ ಪೂಜಿಸುವುದಿಲ್ಲ? ಕುಬೇರ, ಇಂದ್ರ ವಿಷ್ಣು, ಶಂಕರರು ಅಲ್ಲದೇ ಬ್ರಹ್ಮನೂ ಸಹ ಜ್ಞಾನದೇವತೆಯಾದ ಶಾರದೆಯನ್ನು ಪೂಜಿಸಿದನು. ನಾರದ ಮೊದಲಾದವರು ವೀಣೆ ಹಿಡಿದು ಆ ಸಂಗೀತ ದೇವತೆಯನ್ನು ಹೊಗಳಿ ಹಾಡಿದರು.'ಸರಸ್ವತಿ' ಎಂದರೆ ನಮ್ಮ ಕಣ್ಣ ಮುಂದೆ ನಿಲ್ಲುವ ರೂಪವೆಂದರೆ, ಚತುರ್ಭುಜಗಳು, ಎರಡು ಕೈಗಳಲ್ಲಿ ವೀಣೆ, ಇನ್ನೊಂದರಲ್ಲಿ ಅಕ್ಷಮಾಲೆ, ನಾಲ್ಕನೆಯದರಲ್ಲಿ ಪುಸ್ತಕ, ಬಿಳಿ ತಾವರೆಯ ಮೇಲೆ ಅಥವಾ ಬಂಡೆಯ ಮೇಲೆ ಆಸೀನಳಾಗಿರುವ ಶ್ವೇತವಸ್ತ್ರಧಾರಿಣಿ, ವೈದಿಕ ಪರಂಪರೆಯಲ್ಲೂ ಬ್ರಹ್ಮನ ಸೃಷ್ಟಿಯಾದ 'ವೇದ'ಗಳ ಅಧಿದೇವತೆ ಸರಸ್ವತಿಯೇ ಆಗಿದ್ದಾಳೆ. ಮೂರೂ ಧರ್ಮಗಳಲ್ಲೂ ಸರಸ್ವತಿಯನ್ನು ಒಳ್ಳೆಯ ವಾಕ್ ಸಿದ್ಧಿಗೆ, ವಿದ್ಯೆಗೆ, ಜ್ಞಾನಕ್ಕೆ, ಪ್ರಾರ್ಥಿಸಲಾಗುತ್ತದೆ.

ಲಕ್ಷ್ಮೀಯು ಐಶ್ವರ್ಯದ ದೇವತೆ ಹೇಗೋ ಹಾಗೆ ಸರಸ್ವತಿಯು ವಿದ್ಯಾದೇವತೆ. ವಿದ್ಯೆಯಿಲ್ಲದವನ ಬಳಿ ಐಶ್ವರ್ಯವಿದ್ದರೂ ವ್ಯರ್ಥ,ಸರಸ್ವತಿಯಿದ್ದ ಕಡೆಗೆ ಲಕ್ಷ್ಮಿಯೂ ಒಲಿದು ಬರುತ್ತಾಳೆ. ಅಂದರೆ ವಿದ್ಯೆಯಿಂದ ಜ್ಞಾನ ಸದ್ಗುಣಗಳ ಜತೆಗೆ ಸಂಪತ್ತು ಲಭಿಸುತ್ತದೆ. ಭಾರತೀಯ ಸಂಸ್ಕೃತಿಯಲ್ಲಿ ಹಲವಾರು ಸ್ವರೂಪಗಳಲ್ಲಿ ಸರಸ್ವತಿಯು ಪೂಜಿತಳು. ಬ್ರಹ್ಮನ ಮಗಳೆಂದೂ, ಬ್ರಹ್ಮನ ಸೃಷ್ಟಿಯಾದ ವೇದಗಳಿಗೆ ಅಧಿದೇವತೆಯೆಂದೂ , ವೇದಮಾತೆಯೆಂದೂ ಸರಸ್ವತಿಯನ್ನು ಸ್ತುತಿಸಲಾಗಿದೆ.

### ವಸಂತ ಪಂಚಮಿ ಮಹತ್ವ

ವಸಂತ ಪಂಚಮಿಯ ದಿನ ಬ್ರಹ್ಮನ ಮನಸ್ಸಿನಿಂದ ಸರಸ್ವತಿ ಆವಿರ್ಭವಿಸಿದಳು ಎಂದು ಹೇಳಲಾಗುತ್ತದೆ. ವಸಂತ ಪಂಚಮಿಯನ್ನು 'ವಿದ್ಯಾ ಜಯಂತಿ' ಯೆಂದೂ ಕರೆಯುತ್ತಾರೆ ಮತ್ತು ಈ ದಿನದಂದು ಶ್ರೀ ಸರಸ್ವತೀ ದೇವಿಯ ಉಪಾಸನೆಯನ್ನು ಮಾಡುವ ಸಂಪ್ರದಾಯವಿದೆ. ಮಾಘ ಶುಕ್ಲ ಪಂಚಮಿಯನ್ನು ವಸಂತಪಂಚಮಿ ಎಂದು ಕರೆಯುತ್ತಾರೆ.

ವಸಂತ ಪಂಚಮಿಯನ್ನು ದ್ವಾಪರ ಯುಗದಲ್ಲಿಯೂ ಸಹ ಈ ಆಚರಣೆ ನಡೆದಿರುವುದು ತಿಳಿಯುತ್ತದೆ. ಭಾಗವತ ಪ್ರಕಾರ ಗೋವರ್ಧನಗಿರಿಯಲ್ಲಿ ಮಾಘ ಶುದ್ಧಪಂಚಮಿಯಂದು ವಸಂತ ಪಂಚಮಿ ಬಗ್ಗೆ ಉಲ್ಲೇಖಗಳಿವೆ. ಈ ದಿನದಂದು ಶ್ರೀಕೃಷ್ಣನ ನೃತ್ಯವನ್ನು ನೋಡಲು ಚಂದ್ರನೂ ಅಸ್ತಮನಾಗದೇ ಬ್ರಹ್ಮನ ಒಂದು ರಾತ್ರಿಯಷ್ಟು ಕಾಲದವರೆಗೆ ಹಾಗೆಯೇ ಇದ್ದ, ಆದ್ದರಿಂದ ಗೋವರ್ಧನ ಗಿರಿಯಲ್ಲಿ ಕೃಷ್ಣ ನೃತ್ಯ ಮಾಡಿದ ಪ್ರದೇಶ ಚಂದ್ರಸರೋವರ ಎಂದು ಕರೆಯಲಾಗುತ್ತದೆ. ರಾಮನು ಶಬರಿಯನ್ನು ಭೇಟಿಯಾದ ದಿನ ವಸಂತಪಂಚಮಿಯ ದಿನವಾಗಿತ್ತು ಎಂದು ಹೇಳಲಾಗುತ್ತದೆ. ಆದ್ದರಿಂದ ಇಂದಿಗೂ ಈ ಸ್ಥಳಗಳಲ್ಲಿ ವಸಂತ್ ಉತ್ಸವವನ್ನು ಶಬರಿ ಮಾತಾ ದೇವಸ್ಥಾನದಲ್ಲಿ ಆಚರಿಸಲಾಗುತ್ತದೆ.

ವಿವಿಧ ಪ್ರಾಂತೀಯ ನಂಬಿಕೆಗಳ ಪ್ರಕಾರ ಕಾಲೋಚಿತ ಹಬ್ಬವಾಗಿ ಆಚರಿಸಲಾಗುತ್ತದೆ. ವಸಂತ ಪಂಚಮಿ

ಯಲ್ಲಿ,ಗುಜರಾತ್ ಪ್ರಾಂತ್ಯದಲ್ಲಿ ಗರ್ಭಾ ನೃತ್ಯವನ್ನು ಪ್ರದರ್ಶಿಸುವ ಮೂಲಕ ಸರಸ್ವತಿ ದೇವಿಯನ್ನು ಪೂಜಿಸಲಾಗುತ್ತದೆ. ಪಶ್ಚಿಮ ಬಂಗಾಳದಲ್ಲಿ ಸಂಗೀತ ಕಲೆಗಳನ್ನು ಪೂಜಿಸಲಾಗುತ್ತದೆ. ಕಾಮದೇವ್ ಮತ್ತು ರತಿ ದೇವಿಯ ಪೌರಾಣಿಕ ಕಥೆಯು ವಸಂತ ಪಂಚಮಿಯೊಂದಿಗೆ ಸಂಬಂಧ ಹೊಂದಿದೆ. ಆದ್ದರಿಂದ ಈ ದಿನದಲ್ಲಿ ಅನೇಕ ರಾಸ್ ಲೀಲಾ ಹಬ್ಬಗಳನ್ನು ಸಹ ನಡೆಸಲಾಗುತ್ತದೆ. ಉತ್ತರ ಪ್ರದೇಶ, ಮಧ್ಯ ಭಾರತ,ಬಿಹಾರ ಮತ್ತು ಪಂಜಾಬ್ ಪ್ರಾಂತ್ಯಗಳಲ್ಲಿ ಆಚರಿಸಲಾಗುತ್ತದೆ. ಸರಸ್ವತಿಯನ್ನು ಪೂಜಿಸುವ ಮೂಲಕ ವಸಂತ ಪಂಚಮಿಯ ಹಬ್ಬವು ಸರಸ್ವತಿ ವಂದನೆಯೊಂದಿಗೆ ಪೂರ್ಣಗೊಳ್ಳುತ್ತದೆ.

ಭಗವಾನ್ ಶ್ರೀಕೃಷ್ಣನು 'ಋತುನಾಂ ಕುಸುಮಾಕರ' ಎಂದು ವಸಂತ ಋತುವಿಗೆ "ಋತುರಾಜ" ಎಂದು ಬಿರುದನ್ನಿತ್ತಿದ್ದಾನೆ. ಭಗವದ್ಗೀತೆಯ 10 ನೇ ಅಧ್ಯಾಯದ 35 ನೇ ಶ್ಲೋಕದಲ್ಲಿ,ಶ್ರೀಕೃಷ್ಣನು ವಸಂತ ಋತುವನ್ನು 'ತನ್ನ ವಿಭೂತಿ' ಎಂದು ಹೇಳುತ್ತಾನೆ. 'ವಸಂತ ಋತು ಎಂದರೆ ನಾನೇ' ಎಂದೂ ಹೇಳುತ್ತಾನೆ. ವಸಂತ ಋತುವಿನ ಪ್ರಾಮುಖ್ಯತೆ ಹೆಚ್ಚು, ಈ ಋತುವನ್ನು ನಿಯಮವೆಂದು ಪರಿಗಣಿಸಲಾಗುತ್ತದೆ. ವಸಂತ ಪಂಚಮಿಯನ್ನು ನಿಸರ್ಗದ ಉತ್ಸವ ಎಂದೂ ಕೂಡ ಹೇಳಲಾಗುತ್ತದೆ. ಈ ದಿನಗಳಲ್ಲಿ ನೈಸರ್ಗಿಕ ಬದಲಾವಣೆಗಳಿವೆ, ಅದು ತುಂಬಾ ಆಕರ್ಷಕ ಮತ್ತು ಆಹ್ಲಾದಕರವಾಗಿರುತ್ತದೆ. ಈ ಋತುವಿನಲ್ಲಿ ಅನೇಕ ಹಬ್ಬಗಳನ್ನು ಆಚರಿಸಲಾಗುತ್ತದೆ. ಇದರಲ್ಲಿ ವಸಂತ ಪಂಚಮಿಯ ದಿನದಂದು ಈ ಋತುವಿನ ಬದಲಾವಣೆಗಳನ್ನು ಅನುಭವಿಸಲಾಗುತ್ತದೆ. ಈ ದಿನದಂದು ರವಿ ಯೋಗ ಹಾಗೂ ಅಮೃತ ಸಿದ್ಧಿ ಯೋಗ ಎಂಬ ಎರಡು ಶುಭ ಯೋಗಗಳು ಸೃಷ್ಟಿಯಾಗುತ್ತಿವೆ.

### ಬ್ರಹ್ಮದೇವ - ಸರಸ್ವತಿ ದೇವಿ

ಉಚ್ಚದೇವತೆಗಳು ಯಾವಾಗಲೂ ನಿರ್ಗುಣದಲ್ಲಿರುತ್ತಾರೆ. ದೇಹಧಾರಣೆ ಮಾಡಿ ಮಾನವರಂತೆ ಕಾರ್ಯ ಮಾಡದಿರುವುದರಿಂದ ಅವರೆಲ್ಲರೂ ಏಕರೂಪವಾಗಿಯೇ ಇರುತ್ತಾರೆ. ಸಗುಣದಲ್ಲಿ ಭಕ್ತನಿಗೆ ದರ್ಶನ ನೀಡಲು ಅಥವಾ ವೈಶಿಷ್ಟ್ಯಪೂರ್ಣ ಕಾರ್ಯಕ್ಕಾಗಿ ಅವರು ಒಂದು ಕಾಲಮಿತಿಯವರೆಗೆ ದೇಹವನ್ನು ಧರಿಸುತ್ತಾರೆ. ಆದರೂ ಅವರಲ್ಲಿ ಸಂಬಂಧಗಳಿರುವುದಿಲ್ಲ. ಎಲ್ಲ ಸಂಬಂಧಗಳು ಜೀವ ಮತ್ತು ಜೀವಾತ್ಮ ದಶೆಯಲ್ಲಿರುತ್ತವೆ. ಬ್ರಹ್ಮ ಮತ್ತು ಸರಸ್ವತಿ ಪರಬ್ರಹ್ಮ ಮತ್ತು ಬ್ರಹ್ಮ ಇವರ ಏಕರೂಪತೆಯನ್ನು ದರ್ಶಿಸಿದರೆ, ಶ್ರೀಕೃಷ್ಣ ಮತ್ತು ರಾಧೆ ಇವರು ಪರಮಾತ್ಮ ಮತ್ತು ಆತ್ಮ ಇವುಗಳಲ್ಲಿರುವ ಏಕರೂಪತೆಯನ್ನು ದರ್ಶಿಸುತ್ತಾರೆ ಎಂದು ಬ್ರಹ್ಮ ಮತ್ತು ಸರಸ್ವತಿಯ ಬಗ್ಗೆ ಆಳವಾಗಿ ಅಧ್ಯಯನಿಸಿ ವರ್ಣಿಸಲಾಗಿದೆ.

ಮಹಾಸರಸ್ವತಿದೇವಿ ಮತ್ತು ಸರಸ್ವತಿದೇವಿ ಇಬ್ಬರೂ ಅನುಕ್ರಮವಾಗಿ ನಿರ್ಗುಣ ಮತ್ತು ಸಗುಣ ಈ ಎರಡೂ ಸ್ತರಗಳಲ್ಲಿ ಬ್ರಹ್ಮನ ಶಕ್ತಿಯಾಗಿ ಬ್ರಹ್ಮಾಂಡದ ನಿರ್ಮಿತಿಯಲ್ಲಿ ಬ್ರಹ್ಮದೇವನಿಗೆ ಸಹಾಯ ಮಾಡಿದ್ದಾರೆ. ಸರಸ್ವತಿದೇವಿ ಬ್ರಹ್ಮನ ನಿರ್ಗುಣ ಅಥವಾ ಸಗುಣ ಸ್ತರದಲ್ಲಿ ಕಾರ್ಯನಿರತವಾಗುವ ಶಕ್ತಿಯಾಗಿದೆ. ಬ್ರಹ್ಮನ ಶಕ್ತಿಯು ಅವರೊಂದಿಗೆ ಏಕರೂಪವೇ ಆಗಿರುತ್ತದೆ. ಅವಶ್ಯಕತೆಗನುಸಾರ ಅದು ಕಾರ್ಯನಿರತವಾಗುತ್ತದೆ. ಬ್ರಹ್ಮನ ಮಗಳು ಎಂಬ ಪರಿಕಲ್ಪನೆಯನ್ನು ಮೀರಿ ಸರಸ್ವತಿಗೆ 'ಬ್ರಹ್ಮನ ಶಕ್ತಿ' ಎಂಬ ಸ್ವರೂಪವೂ ಎಂದು ಪೂಜಿಸಲಾಗಿದೆ.

### ಬ್ರಹ್ಮನ ರಾಣಿ

'ದುರ್ಗಾ ಸಪ್ತಶತಿ' ಪುರಾಣ ಗ್ರಂಥದ ಪ್ರಕಾರ ಸೃಷ್ಟಿಗಿಂತಲೂ ಮೊದಲು ಎಲ್ಲೆಲ್ಲೂ ನೀರು ಇತ್ತು. ಯಾವ ಜೀವಿಗಳು ಇರಲಿಲ್ಲ. ನಿದ್ರಿಸುತ್ತಿದ್ದ ಭಗವಂತನಲ್ಲಿ ಅದ್ಭುತ ಶಕ್ತಿ









ವೊಂದು ಇತ್ತು, ಅದು ಸೃಷ್ಟಿ ಶಕ್ತಿ, ಅದನ್ನು ದೇವೀ ಶಕ್ತಿ ಎನ್ನುತ್ತಾರೆ.

ಭಗವಂತನ ದೇವಿ ಶಕ್ತಿ ಎನ್ನಲಾಗುವ ಭಗವತಿ ಮಹಾಲಕ್ಷ್ಮೀಯು ಪ್ರಪಂಚವನ್ನು ಸೃಷ್ಟಿಸಬೇಕೆಂದು ನಿರ್ಧರಿಸಿಕೊಂಡಳು.ಭಗವತೀದೇವಿಯು ತನ್ನ ಅಂಶಗಳಿಂದ ಮಹಾಕಾಳಿ, ಮಹಾಲಕ್ಷ್ಮೀ, ಮಹಾಸರಸ್ವತಿ ಎಂಬುದಾಗಿ ತ್ರಿರೂಪಿಯಾದಳು. ಮಹಾಸರಸ್ವತಿಯು ಸತ್ವಗುಣದಿಂದ ಮೂಡಿದ ಮಾತೆ. ಆಕೆಯು ಚಂದ್ರನಂತೆ ಬಿಳಿಯ ಬಣ್ಣವುಳ್ಳವಳು. ನಾಲ್ಕು ಕೈಗಳಲ್ಲೂ ಕ್ರಮವಾಗಿ ಜಪಮಾಲೆ, ಅಂಕುಶ, ವೀಣೆ ಮತ್ತು ಪುಸ್ತಕಗಳನ್ನು ಹಿಡಿದಳು. ಮಹಾಲಕ್ಷ್ಮೀಯು ಆಕೆಗೆ ಮಹಾವಿದ್ಯಾ ಮಹಾವಾಣಿ, ಭಾರತಿ ವಾಕ್, ಸರಸ್ವತಿ,ಆರ್ಯಾ ಬ್ರಾಹ್ಮೀ, ಕಾಮಧೇನು, ವೇದ ಗರ್ಭಾಧೀಶ್ವರಿ ಎಂಬ ಹೆಸರುಗಳನ್ನು ಕೊಟ್ಟಳು.

ಈ ಮೂವರು ಮಾತೆಯರೂ ಒಂದೊಂದು ಸ್ತ್ರೀ - ಪುರುಷರ ಜೋಡಿಯನ್ನು ಸೃಷ್ಟಿಸಿದರು. ಅಂದರೆ ಮಹಾಲಕ್ಷ್ಮೀಯು ಎರಡು ಅಂಶಗಳಾಗಿ ಬ್ರಹ್ಮ-ಲಕ್ಷ್ಮೀಯರನ್ನೂ, ಮಹಾಕಾಳಿಯು ಶಂಕರ-ಸರಸ್ವತಿಯರನ್ನೂ, ಮಹಾ ಸರಸ್ವತಿಯು ವಿಷ್ಣು ಗೌರಿಯರನ್ನೂ ಸೃಷ್ಟಿಸಿದರು.

ಆಗ ಭಗವತೀ ಮಹಾಲಕ್ಷ್ಮೀಯು ಪುರುಷ ದೇವತೆಗಳೇ, ನೀವು ತ್ರಿಮೂರ್ತಿಗಳು. ಬ್ರಹ್ಮನು ಈ ಸರಸ್ವತಿಯನ್ನು ಪತ್ನಿಯನ್ನಾಗಿ ಪಡೆದು, ಆಕೆಯ ಸಹಾಯದಿಂದ ಬ್ರಹ್ಮಾಂಡಲೋಕಗಳನ್ನೂ, ಜೀವಿಗಳನ್ನೂ ರಚಿಸಿ ಸೃಷ್ಟಿಕರ್ತನಾಗಲಿ, ವಿಷ್ಣು ತನ್ನ ಪತ್ನಿಯಾದ ಲಕ್ಷ್ಮೀಯೊಡಗೂಡಿ ಲೋಕಗಳನ್ನು ಪಾಲಿಸಲಿ. ಶಂಕರನು ಗೌರಿಯನ್ನು ಪತ್ನಿಯನ್ನಾಗಿ ಪಡೆದುಕೊಂಡು ಅಧರ್ಮಿಗಳನ್ನು ನಾಶ ಮಾಡುತ್ತ ಲಯಕರ್ತನಾಗಿರಲಿ ಎಂದು ಆಜ್ಞಾಪಿಸಿದಳು. ಹೀಗೆ ಸರಸ್ವತಿಯು ಬ್ರಹ್ಮನ ರಾಣಿಯಾದಳು.

ಸರಸ್ವತಿಯ ಸಹಾಯದಿಂದ ಬ್ರಹ್ಮನು ಲೋಕಗಳನ್ನೂ ಜೀವಿಗಳನ್ನೂ ಸೃಷ್ಟಿಸುತ್ತಾನೆ. ಬ್ರಹ್ಮನ ಸೃಷ್ಟಿಗೆ ಆಕೆಯೇ ಶಕ್ತಿಯಾದುದರಿಂದ ಆಕೆಗೆ ಬ್ರಾಹ್ಮೀ ಎಂದು ಹೆಸರು. ಯುಗಾಂತರಗಳಲ್ಲಿ ಪ್ರಳಯವಾಗಿ ಲೋಕಗಳೆಲ್ಲ ಕಣ್ಮರೆಯಾದಾಗ ಈಕೆಯು ಬ್ರಹ್ಮನಲ್ಲಿ ಅಡಗಿರುತ್ತಾಳೆ. ಪುನಃಬ್ರಹ್ಮನು ಸೃಷ್ಟಿಸಲು ಪ್ರಾರಂಭಿಸುವಾಗ ಈಕೆಯು ಆತನ ಬಾಯಿಂದ ಹೊರಬರುತ್ತಾಳೆ.

**ಕಾಶ್ಮೀರ ಪುರವಾಸಿನಿ**

"ನಮಸ್ತೆ ಶಾರದಾ ದೇವಿ। ಕಾಶ್ಮೀರಪುರವಾಸಿನಿ
ತ್ವಾಮಹಂ ಪ್ರಾರ್ಥಯೇ ದೇವಿ।
ಸಿದ್ಧಿ ದಾನಂಚ ದೇಹಿಮೆ॥







ಕಾಶ್ಮೀರದ ಅಧಿದೇವತೆಯಾಗಿರುವ ಶಾರದೆ, ಕಾಶ್ಮೀರದಲ್ಲಿ ಹಂಸರೂಪಿಯಾಗಿ ನೆಲೆನಿಂತಿದ್ದಾಳೆ ಎಂಬುದು ಕಾಶ್ಮೀರಿ ಮೂಲದ ಕವಿಗಳ ನಂಬಿಕೆ. ಕಾಶ್ಮೀರದ ಬಲಭಾಗದ ಪರ್ವತ ಶ್ರೇಣಿಗಳಲ್ಲಿನ "ಬ್ರಹ್ಮಸರ" ಎಂಬ ಸರೋವರವಿದೆ. ಸರಸ್ವತಿ ನದಿ ಇಲ್ಲಿಯೇ ಉಗಮವಾಗುತ್ತಿತ್ತು, ಸರಸ್ವತಿ ಹುಟ್ಟಿದ ಆ ತವರು ನಾಡು ಕಾಶ್ಮೀರದಲ್ಲೇ ಅವಳಿಗೆ ಪೀಠ ನಿರ್ಮಾಣ ಮಾಡಿದರು.ಹಂಸ ಅವಳ ವಾಹನ-ಸರ್ವಶುಕ್ಲೆಯಾದ ಆಕೆಯ ವಸ್ತ್ರಾಭರಣಗಳೂ ಶ್ವೇತವರ್ಣದವುಗಳು. ಸರಸ್ವತಿಯು ಸರ್ವಲೋಕವನ್ನೂ ವ್ಯಾಪಿಸಿರುವಳು.



# ತಿಲದಾನ ಮಹತ್ವ ದಿನ ಮಕರ ಸಂಕ್ರಾಂತಿ

- ಪ್ರತ್ಯಗ್ರ

ಸಂಕ್ರಾಂತಿ ಹಬ್ಬ ದೇಶ ವಿದೇಶಗಳಲ್ಲಿ ಬೇರೆ ಬೇರೆ ಹೆಸರುಗಳಲ್ಲಿ ಆಚರಿಸುವ ಒಂದು ಸುಗ್ಗಿ ಹಬ್ಬ . ಕನ್ನಡನಾಡಿನಲ್ಲಿ ಮತ್ತು ಆಂಧ್ರಪ್ರದೇಶದಲ್ಲಿ ಸಂಕ್ರಾಂತಿ ಎಂದು ಆಚರಿಸಿದರೆ, ಅದನ್ನು ತಮಿಳು ನಾಡಿನಲ್ಲಿ ಪೊಂಗಲ್ ಎಂದು ಆಚರಿಸುತ್ತಾರೆ. ಸೂರ್ಯನು ಮಕರ ಸಂಕ್ರಾಂತಿಯಂದು ಮಕರ ರಾಶಿಯನ್ನು ಪ್ರವೇಶ ಮಾಡುತ್ತಾನೆ. ಆದ್ದರಿಂದಲೇ ಉತ್ತರ ಭಾರತದಲ್ಲಿ ಈ ಹಬ್ಬಕ್ಕೆ ಮಕರ ಸಂಕ್ರಾಂತಿಯೆಂದು ಹೆಸರು.

ದಕ್ಷಿಣದತ್ತ ಚಲಿಸುತ್ತಿದ್ದ ಸೂರ್ಯ ಇನ್ನು ಮುಂದೆ ಉತ್ತರ ದಿಕ್ಕಿಗೆ ತಿರುಗಿ ಚಲಿಸುತ್ತಾನೆ. ಹೀಗೆ ಸೂರ್ಯ ಪಥ (ದಾರಿ) ಬದಲಾವಣೆಯಿಂದ ನಮ್ಮ ದೇಶದಲ್ಲಿ ಕೊರೆಯುವ ಚಳಿ ಕಡಿಮೆಯಾಗಿ ಬಿಸಿಲಿನ ತಾಪವನ್ನು ಮತ್ತು ಹಗಲು ಹೆಚ್ಚಾಗಲು ಪ್ರಾರಂಭಿಸುತ್ತದೆ. ಈ ಹಬ್ಬವನ್ನು ಭೋಗಿ ಹಬ್ಬ. ಸಂಕ್ರಮಣ ಮತ್ತು ಕನುಹಬ್ಬ ಎಂದು ನಾನಾ ರೀತಿಯಿಂದ ಕರೆಯುತ್ತಾರೆ. ಇದನ್ನು ಹೆಚ್ಚಾಗಿ ದಕ್ಷಿಣ ಭಾರತದಲ್ಲಿ (ಕರ್ನಾಟಕ, ಆಂಧ್ರ, ತಮಿಳುನಾಡು , ಕೇರಳಗಳಲ್ಲಿ) ವಿವಿಧ ರೀತಿಯಲ್ಲಿ ಆಚರಿಸುತ್ತಾರೆ. ಇದು ಸುಗ್ಗಿಯನ್ನು ಸಾರುವ ಹಬ್ಬ.

ಸಂಕ್ರಾಂತಿ ಹಬ್ಬದ ಹಿಂದಿನ ದಿನವೇ ಭೋಗಿ ಹಬ್ಬ. ಅಂದು ಹಳೆಯದನ್ನು ತೊರೆದು ಹೊಸದನ್ನು ಪಡೆದು ಸಂತೋಷ ಪಡುವ ಸಡಗರ. ಮನೆಯನ್ನು ಶುದ್ಧಿಗೊಳಿಸುವುದು, ಮನೆ ಮಂದಿಯೆಲ್ಲಾ ಎಣ್ಣೆ ಸ್ನಾನ ಮಾಡಿ ನೂತನ ವಸ್ತ್ರಗಳನ್ನು ಧರಿಸುವುದು, ಮೂರನೆಯ ದಿನ ಹೊಸ ಫಸಲನ್ನು ಉಂಡು ಸಂತೋಷ ಪಡಲು ಎಲ್ಲಾ ಸನ್ನದ್ಧತೆ ನಡೆಸುತ್ತಾರೆ.

ಭೂಮಿಯಲ್ಲಿ ನಡೆಯುವ ಪ್ರತಿಯೊಂದು ಚಟುವಟಿಕೆಗಳಿಗೆ ಸೂರ್ಯನೇ ಆಧಾರ, ಇಂತಹ ಸೂರ್ಯ ಒಂದು ರಾಶಿಯಿಂದ ಮತ್ತೊಂದು ರಾಶಿಗೆ ಪ್ರವೇಶಿಸುವ ಸಂಧಿ ಕಾಲಕ್ಕೆ 'ಸಂಕ್ರಾಂತಿ" ಅಥವಾ "ಸಂಕ್ರಮಣ" ಅಂತ ಕರೆಯುತ್ತಾರೆ.ಮಕರ ಸಂಕ್ರಾಂತಿಯಂದು ಸೂರ್ಯನು ಮಕರರಾಶಿಗೆ ಪ್ರವೇಶಿಸುತ್ತಾನೆ. ಇದೇ ಸಮಯ ಉತ್ತರಾಯಣ ಮತ್ತು ದಕ್ಷಿಣಾಯಣ ಪ್ರಾರಂಭದ ದಿನಗಳಾದ್ದರಿಂದ ಇನ್ನು ವಿಶೇಷ ಮಹತ್ವ ಹೊಂದಿದೆ.

ಅತಿ ಉದ್ದದ ದಿನ ಹಾಗೂ ಅತಿ ಸಣ್ಣ ರಾತ್ರಿ ಅಥವಾ ಅತಿ ಚಿಕ್ಕ ದಿನ ಹಾಗೂ ಅತಿ ಉದ್ದದ ರಾತ್ರಿ ಪ್ರಮಾಣದ ಕಾಲವನ್ನು ಹೊಂದಿದ ದಿನ. ಭೂಮಿಯ ಮಕರಸಂಕ್ರಾಂತಿ ವೃತ್ತದ ಮೇಲೆ ಸೂರ್ಯನು ನೇರವಾಗಿ ಪ್ರಕಾಶಿಸಲಾರಂಭಿಸುವ ಕಾಲ.

ಉತ್ತರಾಯಣ ಆರಂಭ ಕಾಲದಲ್ಲಿ ವೈದಿಕರು ಸ್ನಾನ, ತರ್ಪಣ ಮೊದಲಾದುವನ್ನು ಮಾಡುವುದಿದೆ. ಸೂರ್ಯ ಅಸ್ತನಾಗುವುದಕ್ಕೆ ಸ್ವಲ್ಪಕಾಲ ಮೊದಲು ಮಕರರಾಶಿಯನ್ನು ಪ್ರವೇಶಿದರೆ ಆ ದಿವಸದಲ್ಲೂ ಸಾಯಂಕಾಲಾನಂತರ ಪ್ರವೇಶಿಸಿದರೆ ಮಾರನೆಯ ದಿವಸದ ಹಗಲಿನಲ್ಲೂ ಮಕರ ಸಂಕ್ರಮಣ ಪುಣ್ಯಕಾಲವಾಗುತ್ತದೆ.ಇದರ ಅವಧಿ ಪ್ರವೇಶ ಕಾಲದಿಂದ ಮುಂದೆ ಎಂಟು ಗಂಟೆಗಳವರೆಗೆ. ಕೆಲವರು ಹನ್ನೆರಡು ಗಂಟೆ ಕಾಲದವರೆಗೂ ಇರುತ್ತದೆಂದೂ ಅಭಿಪ್ರಾಯ ಪಡುತ್ತಾರೆ. ಇದನ್ನು ಮಕರಸಂಕ್ರಾಂತಿ ಎಂದೂ ಕರೆಯುತ್ತಾರೆ. ಈ ದಿವಸ ತಿಲದಾನ ಮಾಡುವುದು ವಿಶೇಷ. ಅದಕ್ಕಾಗಿಯೇ ಇಂದಿಗೂ ಮಕರ ಸಂಕ್ರಾಂತಿಯಂದು ಎಳ್ಳಿಗೆ ಬೆಲ್ಲ ಮೊದಲಾದವನ್ನು ಕೂಡಿಸಿ ಎಲ್ಲರಿಗೂ ತಿನ್ನಲು ಕೊಡುತ್ತಾರೆ.







ಸಂಕ್ರಮಣದಲ್ಲಿ ಎಳ್ಳಿನ ದಾನ ಅಕ್ಷಯವಾದ ಫಲವನ್ನು ಕೊಡುತ್ತದೆಂದು ಯಮನೇ ಹೇಳಿರುತ್ತಾನೆ. ಯಮದೂತರು ತಪ್ಪಿನಿಂದ ಒಬ್ಬ ಬ್ರಾಹ್ಮಣನನ್ನು ನರಕಕ್ಕೆ ಒಯ್ದಿದ್ದರು. ಯಮನು ಅವನನ್ನು ಸತ್ಕರಿಸಿ, ಅವನೊಡನೆ ಧರ್ಮಸಂವಾದ ನಡೆಸಿ ಹಿಂದಕ್ಕೆ ಕಳಿಸಿಕೊಡುತ್ತಾರೆ. ಈ ಸಂದರ್ಭದಲ್ಲಿ ತಿಲದಾನದ ಮಹತ್ವವು ವಿಶೇಷವಾಗಿ ಹೇಳಲ್ಪಟ್ಟಿದೆ. ಎಳ್ಳಿನಿಂದ ಮಾಡಿದ ಗೋವನ್ನು ದಾನಮಾಡಿ, ಗೋದಾನದ ಫಲವನ್ನು ಪಡೆಯಬಹುದು.

ತಿಲೋದ್ವರ್ತೀ ತಿಲಸ್ನಾಯೀ ತಿಲಹೋಮೀ ತಿಲಪ್ರದಃ
ತಿಲಭುಕ್ ತಿಲವಾಪೀ ಚ ಷಟ್ತಿಲೇ ನಾವಸೀದತಿ ॥

ಎಳ್ಳಿನ ಎಣ್ಣೆಯಿಂದ ದೀಪ ಹಚ್ಚುವುದು, ಎಳ್ಳೆಣ್ಣೆಯನ್ನು ಹಚ್ಚಿಕೊಂಡು ಸ್ನಾನ ಮಾಡುವುದು, ಎಳ್ಳನ್ನು ಹೋಮ ಮಾಡುವುದು, ದಾನ ಮಾಡುವುದು, ತಿನ್ನುವುದು ಮತ್ತು ಬಿತ್ತುವುದು, ಹೀಗೆ ಈ ಆರು ವಿಧಗಳಿಂದಲೂ ಎಳ್ಳನ್ನು ಬಳಸಿಕೊಳ್ಳುವವನು ನಾಶವಾಗುವುದಿಲ್ಲ. ಶನಿಗ್ರಹದ ಪೀಡಾಪರಿಹಾರಾರ್ಥವಾಗಿ ಎಳ್ಳಿನ ದೀಪ ಹಚ್ಚುವ ವಾಡಿಕೆಯಿದೆ. ಎಳ್ಳಿನ ದಾನವು ಪವಿತ್ರವೆಂದರೂ, ಬರಿಯ ಎಳ್ಳನ್ನು ದಾನವಾಗಿ ಯಾರೂ ಸ್ವೀಕರಿಸುವುದಿಲ್ಲ.

ಬ್ರಾಹ್ಮಣಃ ಪ್ರತಿಗೃಹ್ಣೀಯಾತ್ ವೃತ್ತ್ಯರ್ಥಂ ಸಾಧುತಸ್ತಥಾ
ಅತ್ಯಲ್ಪಮಪಿ ಮಾತಂಗ ತಿಲತಾಹಾಂಶ್ಯ ವರ್ಜಯೇತ್ ॥

ಎಂದು ಧರ್ಮಶಾಸ್ತ್ರ ಹೇಳುತ್ತದೆ. ಆನೆ, ಎಳ್ಳು ಮತ್ತು ಕಬ್ಬಿಣಗಳ ದಾನವನ್ನು ತೆಗೆದುಕೊಳ್ಳಬಾರದೆಂದು ಇಲ್ಲಿ ನಿಷೇಧಿಸಿದೆ. ಆದ್ದರಿಂದ ಬರಿಯ ಎಳ್ಳನ್ನು ದಾನ ಕೊಡಲು ಹೋದರೆ ಯಾರೂ ತೆಗೆದುಕೊಳ್ಳುವುದಿಲ್ಲ. ಅದಕ್ಕಾಗಿಯೇ ನಮ್ಮ ಹಿರಿಯರು ಉತ್ತರಾಯಣ ಪುಣ್ಯಕಾಲದಲ್ಲಿ ಈ ರೀತಿ ಎಳ್ಳನ್ನು ವಿನಿಮಯ ಮಾಡಿಕೊಳ್ಳುವ ಉಪಾಯವನ್ನು ಕಂಡುಕೊಂಡಿರುತ್ತಾರೆ. ಎಳ್ಳಿನ ಜೊತೆಗೆ ಹುರಿದಕಡಲೆಕಾಯಿ, ಬೆಲ್ಲ, ಹುರಿಗಡಲೆ ಮತ್ತು ಕೊಬ್ಬರಿಯನ್ನು ಸೇರಿಸುವುದರಿಂದ ಅದರ ಪುಷ್ಟಿ ಮತ್ತು ರುಚಿಗಳೆರಡೂ ಹೆಚ್ಚುತ್ತವೆ. ಈ ಐದನ್ನು ಸೇರಿಸಿ ಮಾಡಿದ ಎಲ್ಲನ್ನು ಪಂಚಕಜ್ಜಾಯವೆಂದೂ ಕರೆಯುತ್ತಾರೆ. ಗಣಪತಿಗೂ ಇದು ಪ್ರಿಯವಾದ ತಿನಿಸು.

ಹಿಂದೂ ಪ್ರತಿ ಸಂವತ್ಸರ (ವರ್ಷ) ವನ್ನು ಸೂರ್ಯನ ಸಂಚಲನವನ್ನು ಅನುಸರಿಸಿ, ಎರಡು ಅಯನಗಳಾಗಿ ವಿಂಗಡಿಸಲಾಗಿದೆ. 1. ಉತ್ತರಾಯಣ, 2. ದಕ್ಷಿಣಾಯನ, ಸೂರ್ಯನು ಉತ್ತರ ಧ್ರುವರೇಖೆಯಲ್ಲಿ ಕಾಣಿಸುವ ಕಾಲ-ಉತ್ತರಾಯಣ. ಇದು ಹಿಂದೆ ಮಕರ ಸಂಕ್ರಾಂತಿಯಿಂದ ಕಟಕ ಸಂಕ್ರಾಂತಿಯವರೆಗೆ ಅಥವಾ ಸಾಮಾನ್ಯವಾಗಿ ಪುಷ್ಯಮಾಸದಿಂದ ಆಷಾಢಮಾಸದವರೆಗೆ 6 ತಿಂಗಳ ಕಾಲದ ಅವಧಿಗೆ ಹೊಂದಿತ್ತು. ಆದರೆ, ಭೂಮಿಯ ಧ್ರುವಚಲನೆ ಅಥವಾ ವಕ್ರಾಯನದ ಪರಿಣಾಮವಾಗಿ, ಉತ್ತರಾಯಣವೂ, ಸೂರ್ಯನ ಮಕರ ಸಂಕ್ರಮಣವೂ ಈಗ ಬೇರೆ ಬೇರೆ ದಿನಗಳಂದು ನಡೆಯುತ್ತವೆ.

ಆದರೂ, ಉತ್ತರಾಯಣ ಪುಣ್ಯಕಾಲವನ್ನು ಈ ಹಿಂದಿನಂತೆಯೇ ಆಚರಿಸಲಾಗುತ್ತಿದೆ. ಉತ್ತರಾಯಣದ 6 ತಿಂಗಳ ಪುಣ್ಯಕಾಲದಲ್ಲಿ ಸ್ವರ್ಗದ ಬಾಗಿಲು ತೆರೆದಿರುತ್ತದೆಂದೂ ಈ ಕಾಲದಲ್ಲಿ ಸಾಯುವವರು ನೇರ ಸ್ವರ್ಗಕ್ಕೆ ಹೋಗುತ್ತಾರೆಂದೂ ನಂಬಿಕೆ ಇದೆ. ಭೀಷ್ಮನು ಶರಶಯ್ಯೆಯ ಮೇಲೆ ಮಲಗಿದ್ದಾಗಲೂ, ಇಚ್ಛಾಮರಣದ ವರವನ್ನು ಪಡೆದಿದ್ದ ಕಾರಣ ಉತ್ತರಾಯಣ ಪುಣ್ಯಕಾಲ ಬರುವವರೆಗೂ ಕಾದಿದ್ದು, ಉತ್ತರಾಯಣ ಪುಣ್ಯಕಾಲ ಬಂದ ನಂತರ ದೇಹತ್ಯಾಗ ಮಾಡಿದನೆಂಬ ವಿಚಾರ ಕಾಣಸಿಗುತ್ತದೆ.

ಮಕರ ಮೊದಲಾಗಿ ಆರು ರಾಶಿಗಳಲ್ಲಿ ಸೂರ್ಯ ದಕ್ಷಿಣದಿಂದ ಉತ್ತರಕ್ಕೆ ಸಂಚರಿಸುವ ಕಾಲ. ಪ್ರಾಚೀನ ಸಂಪ್ರದಾಯದ ಪ್ರಕಾರ ಇದು ಸಾಮಾನ್ಯವಾಗಿ ಜನವರಿ 13 ಅಥವಾ 14 ನೆಯ ದಿವಸ ತೊಡಗಿ ಜುಲೈ 16 ಅಥವಾ 17 ನೆಯ ದಿವಸ ಕೊನೆಗೊಳ್ಳುತ್ತಿತ್ತು. ಉತ್ತರಾಯಣಾರಂಭ ಪುಷ್ಯ ಮಾಸದಲ್ಲಿ ಶಿಶಿರ, ವಸಂತ, ಗ್ರೀಷ್ಮ ಋತುಗಳು ಉತ್ತರಾಯಣ ಕಾಲದಲ್ಲಿ ಬರುತ್ತವೆ. ಇವು ಉತ್ತರಾಯಣದ ಪ್ರಾರಂಭ ಮತ್ತು ಮುಗಿಯುವ ಕಾಲಗಳು, ಅಯನಾಂಶದ ಕಾರಣದಿಂದ ಇದು ಕಾಲ ಕಾಲಕ್ಕೆ ಬದಲಾಗುತ್ತದೆ. ಆದರೂ ಸಾಯನ ಉತ್ತರಾಯಣಕಾಲ ಕರ್ಮಾಚರಣೆಗೆ ಗ್ರಾಹ್ಯವಾಗಿರುವುದಿಲ್ಲ. ಒಮ್ಮೆ ಉತ್ತರಾಯಣ ಪ್ರಾರಂಭ ಕಾಲ ಮಾಘ ಶುಕ್ಲ ಸಪ್ತಮೀ ದಿವಸ ಇದ್ದ ಕಾರಣದಿಂದ ಅಂದು ಅದರ ದ್ಯೋತಕವಾಗಿ ಸೂರ್ಯ



ಮಂಡಲದಿಂದ ಕೂಡಿದ ರಥದಲ್ಲಿ ಭಗವಂತನನ್ನು ಸೂರ್ಯೋದಯ ಕಾಲಕ್ಕೆ ಸರಿಯಾಗಿ ರಥಾರೋಹಣ ಮಾಡಿಸುವುದು ಇಂದಿಗೂ ಆಚರಣೆಯಲ್ಲಿದೆ.

ದನಕರುಗಳನ್ನು ತೊಳೆದು ಬಣ್ಣ ಮೊದಲಾದುವುಗಳಿಂದ ಶೃಂಗರಿಸಿ ಕಿಚ್ಚು ಹಾಯಿಸುತ್ತಾರೆ. ಸಂಕ್ರಾಂತಿ ಹಬ್ಬ ದೇಶ ವಿದೇಶಗಳಲ್ಲಿ ಬೇರೆ ಬೇರೆ ಹೆಸರುಗಳಲ್ಲಿ ಆಚರಿಸುವ ಒಂದು ಸುಗ್ಗಿ ಹಬ್ಬ, ಆಂಧ್ರ, ತಮಿಳು ನಾಡುಗಳಲ್ಲಿ ಭೋಗಿ ಸಂಕ್ರಾಂತಿ, ಕನು, ಎಂದು ಆಚರಿಸಲ್ಪಡುತ್ತದೆ.

ಸೂರ್ಯನು ಒಂದು ರಾಶಿಯಿಂದ ಮತ್ತೊಂದು ರಾಶಿಗೆ ಪ್ರವೇಶಿಸುವ ಕಾಲವನ್ನು "ಸಂಕ್ರಮಣ ಅಥವಾ ಸಂಕ್ರಾಂತಿ" ಎಂದು ಜ್ಯೋತಿಷ್ಯಾಧಾರದ ಮೇಲೆ ಪರಿಗಣಿಸಲಾಗುವುದು. ಸಂಕ್ರಾಂತಿಯು ಒಂದು ವಿಧದಲ್ಲಿ ಸೂರ್ಯನ ಆರಾಧನೆಯಾಗಿದ್ದು,ಉತ್ತರಾಯಣ ದಕ್ಷಿಣಾಯಣಗಳ ಪ್ರಾರಂಭದ ದಿನವಾದ್ದರಿಂದ ಹೆಚ್ಚಿನ ಮಹತ್ವವನ್ನು ಪಡೆದಿದೆ. ಸಾಮಾನ್ಯವಾಗಿ ಸುಗ್ಗಿಯ ಸಂದರ್ಭದಲ್ಲಿ ಆಚರಿಸುವ ಸಂಕ್ರಾಂತಿ ಹಬ್ಬವು ಭಾರತೀಯ ಕಾಲಮಾನ ಪುಷ್ಯಮಾಸದಲ್ಲಿ ಬರುವುದು.ಉತ್ತರಾಯಣದ ಪುಣ್ಯ ಕಾಲವೆಂದೂ (ದೇವತೆಗಳ ಕಾಲವೆಂದೂ) ಸಹ ಕರೆಯಲಾಗುತ್ತದೆ.

ಮಕರ ಸಂಕ್ರಾಂತಿಯ ದಿನದಿಂದ ದೇವತೆಗಳಿಗೆ ಹಗಲು ಮತ್ತು ರಾಕ್ಷಸರಿಗೆ ರಾತ್ರಿ ಆಗುವುದೆಂದು ನಮ್ಮ ಪುರಾಣಗಳು ಹೇಳುತ್ತವೆ. ಆದ್ದರಿಂದಲೇ ಹಿರಿಯರು "ಎಳ್ಳು ಬೆಲ್ಲ ತಿಂದು ಒಳ್ಳೆಯ ಮಾತಾಡು" ಏಕೆಂದರೆ ದೇವತೆಗಳು ಸದಾ ಜಾಗೃತರಿರುತ್ತಾರೆ ಅಂತ ಹೇಳುತ್ತಾರೆ.

ಸಂಕ್ರಾಂತಿ ಹಬ್ಬದ ಹಿಂದಿನ ದಿನವೇ ಭೋಗಿ ಹಬ್ಬ. ಅಂದು ಹಳೆಯದನ್ನು ತೊರೆದು ಹೊಸದನ್ನು ಪಡೆದು ಸಂತೋಷ ಪಡುವ ಸಡಗರ. ಮನೆಯನ್ನು ಶುದ್ಧಿಗೊಳಿಸುವುದು, ಮನೆ ಮಂದಿಯೆಲ್ಲಾ ಎಣ್ಣೆ ಸ್ನಾನ ಮಾಡಿ ನೂತನ ವಸ್ತ್ರಗಳನ್ನು ಧರಿಸುವುದು, ಮೂರನೆಯ ದಿನ ಹೊಸ ಫಸಲನ್ನು ಉಂಡು ಸಂತೋಷಪಡಲು ಎಲ್ಲಾ ಸನ್ನದ್ಧತೆ ನಡೆಸುತ್ತಾರೆ. ಗ್ರಾಮೀಣ ಭಾಗದಲ್ಲಿ ರೈತರು ತಾವು ಬೆಳೆದ ವರ್ಷದ ಮೊದಲ ಬೆಳೆಯನ್ನು ದೇವರಿಗೆ ಅರ್ಪಿಸಿ ತದನಂತರ ಮುಂದಿನ ದಿನಗಳಲ್ಲಿ ತಮಗೆ ಒಳ್ಳೆ ಬೆಳೆ ಬರಲಿ ಅಂತ ದೇವರಲ್ಲಿ ಪ್ರಾರ್ಥಿಸುತ್ತಾರೆ.

ಈ ಹಬ್ಬದ ಸಂದರ್ಭದಲ್ಲಿ ಭಕ್ತರು ಪುಣ್ಯ ನದಿಗಳೆಂದು ಹೆಸರುವಾಸಿಯಾದ ಗಂಗಾ, ಕಾವೇರಿ ಮೊದಲಾದವುಗಳಲ್ಲಿ ಸ್ನಾನ ಮಾಡುವುದು ಉಂಟು. ಶಾಸ್ತ್ರದೃಷ್ಟಿಯಿಂದ ಈ ಹಬ್ಬದಂದು ಕಪ್ಪು ಎಳ್ಳಿನಿಂದ ಸ್ನಾನ ಮಾಡಿ ಬ್ರಾಹ್ಮಣರಿಗೆ ಎಳ್ಳುದಾನವನ್ನು ಮಾಡುತ್ತಾರೆ. ಸಂಜೆಯ ಹೊತ್ತು ದೇವಸ್ಥಾನಕ್ಕೆ ತೆರಳಿ ಎಳ್ಳಿನ ದೀಪ ಹಚ್ಚಬೇಕು. ಈ ದಿನ ಮಾಡಿದ ದಾನದಿಂದ ಸೂರ್ಯನು ಆ ಜನ್ಮ ಪರ್ಯಂತ ಅನುಗ್ರಹಿಸುತ್ತಾನೆಂಬ ನಂಬಿಕೆಯು ಇದೆ ಅಲಹಾಬಾದಿನಲ್ಲಿ ಈ ಸಂದರ್ಭದಲ್ಲಿ ಕುಂಭ ಮೇಳ ನಡೆಯುವುದನ್ನು ಕಾಣಬಹುದು.

ಎಳ್ಳು, ಬೆಲ್ಲವನ್ನು ಊರಿನಲ್ಲೆಲ್ಲಾ ಹಂಚುವುದು. ಇದರೊಂದಿಗೆ ಬೇರೆ ದಿನಗಳಲ್ಲಿ ಎಳ್ಳನ್ನು ಬೇರೆಯವರಿಗೆ ಕೊಡುವುದಾಗಲೀ ಅವರಿಂದ ಪಡೆಯುವುದಾಗಲೀ ಶುಭಕರವಲ್ಲ.ಎಳ್ಳುಧಾನ್ಯ ಏನಿದ್ದರೂ ಋಣಾನುಬಂಧದ ಸಂಕೇತವಾಗಿರುವುದರಿಂದ ಅದನ್ನು ನೆಂಟರಿಷ್ಟರೆಲ್ಲರಿಗೂ ಆ ದಿನ ಹಂಚುವುದು ಮುಖ್ಯವಾಗಿ ಬಾಂಧವ್ಯ ನಿರಂತರವಾಗಿರಲಿ ಎಂಬುದರ ಸಂಕೇತ. ಆದ್ದರಿಂದಲೇ ಎಳ್ಳು ಬೆಲ್ಲ ತಿಂದು ಒಳ್ಳೆಯ ಮಾತನಾಡಿ ಎಂಬುದನ್ನು ಆ ದಿನ ಕೇಳುತ್ತೇವೆ.

ಗ್ರಾಮೀಣ ಭಾಗದಲ್ಲಿ ರೈತರು ತಾವು ಬೆಳೆದ ವರ್ಷದ ಮೊದಲ ಬೆಳೆಯನ್ನು ದೇವರಿಗೆ ಅರ್ಪಿಸಿ ತದನಂತರ ಮುಂದಿನ ದಿನಗಳಲ್ಲಿ ತಮಗೆ ಒಳ್ಳೆ ಬೆಳೆ ಬರಲಿ ಅಂತ ದೇವರಲ್ಲಿ ಪ್ರಾರ್ಥಿಸುತ್ತಾರೆ. ತಮ್ಮ ದನಕರುಗಳಿಗೆ ಮೈತೊಳೆದು ಸಿಂಗರಿಸಿ ಮೆರವಣಿಗೆ ಮಾಡುತ್ತಾರೆ. ಸಂಜೆ ಬೆಂಕಿ ಹಾಕಿ ಕಿಚ್ಚು ಹಾಯಿಸುತ್ತಾರೆ.

## ಸ್ವಾಮಿಯ ಆಲಯದಲ್ಲಿ ಸೆಲ್‌ಫೋನ್ ನಿಷೇಧ

ತಿರುಮಲೆ ಸ್ವಾಮಿಯವರ ಆಲಯದಲ್ಲಿ ಸೆಲ್‌ಫೋನ್, ಕೆಮರಾ, ಇತರ ಎಲೆಕ್ಟ್ರಾನಿಕ್ ವಸ್ತುಗಳನ್ನು ನಿಷೇಧಿಸಲಾಗಿದೆ. ನಿಷೇಧಿಸಿದ ವಸ್ತುಗಳೊಂದಿಗೆ ಭಕ್ತರು ಕಂಡು ಬಂದರೆ ಅಂತಹ ವ್ಯಕ್ತಿಯರನ್ನು ಆಲಯದೊಳಗೆ ಅನುಮತಿಸಲಾಗುವುದಿಲ್ಲ. ಆದ್ದರಿಂದ ಭಕ್ತರು ತಿ.ತಿ.ದೇ.ಯೊಂದಿಗೆ ಸಹಕರಿಸಬೇಕಾಗಿ ಕೋರಲಾಗಿದೆ.

- ಕಾರ್ಯನಿರ್ವಹಣಾಧಿಕಾರಿ



# ಪರಸ್ಪರ ಶಾಂತಿ ಸೌಹಾರ್ದಕ್ಕಾಗಿ ಶ್ರೀ ಮಧ್ವರ ಮಹಾಸಂದೇಶ

– ಓಂ ಪ್ರಕಾಶ್ ಭಟ್
99640 25922

ಇಂದು ಸಮಾಜದಲ್ಲಿ ಸಾಮರಸ್ಯವು ಮರೀಚಿಕೆಯಾಗುತ್ತಿದೆ. ಹಲವು ವೈವಿಧ್ಯತೆಗಳನ್ನು ಹೊಂದಿರುವ ಭಾರತದಲ್ಲಿ ಜಾತಿ - ಮತ - ಭಾಷೆಗಳಿಂದಾಗಿ ಹೊಂದಾಣಿಕೆಯಿಲ್ಲದೆ ಪರಸ್ಪರ ಹೊಡೆದಾಡಿಕೊಳ್ಳುವ ಪರಿಸ್ಥಿತಿಯಿದೆ. ಗಡಿ ಸಮಸ್ಯೆ ನೀರಿನ ಸಮಸ್ಯೆಗಳು ರಾಜ್ಯ ರಾಜ್ಯಗಳ ಬಾಂಧವ್ಯವನ್ನೇ ಹಾಳು ಮಾಡಿವೆ.

ಆದರೆ ಇಲ್ಲೊಬ್ಬ ಯತಿ ಜಾತಿ - ಮತ - ರಾಜ್ಯ ಭೇದ ಮರೆತು ಸಾಮಾಜಿಕ ಸಾಮರಸ್ಯವನ್ನು ತರಲು 12-13 ನೇ ಶತಮಾನದಲ್ಲೆ ಪ್ರಯತ್ನಿಸಿದ್ದ ಕರ್ನಾಟಕದ ತುಳುನಾಡಿನಲ್ಲಿ ಜನಿಸಿದ. ಭಾರತೀಯ ದರ್ಶನಗಳಲ್ಲಿ “ತತ್ತ್ವವಾದ” ವನ್ನು ಪ್ರಚಾರ ಗೈದ ಶ್ರೀಮಧ್ವಾಚಾರ್ಯರೇ ಆ ಮಹಾಯತಿ. ಪ್ರಶ್ನೆ ಮಾಡದೆ ಏನನ್ನೂ ಸ್ವೀಕರಿಸಬಾರದು ಎಂಬುದು ಮೂಲ ಸಿದ್ಧಾಂತ. ಅದನ್ನು ಬಾಲ್ಯದಲ್ಲೇ ಅಳವಡಿಸಿಕೊಂಡಿದ್ದ ಶ್ರೀಮಧ್ವರು ತಮ್ಮ ಗುರುಗಳನ್ನು ಪ್ರಶ್ನೆ ಮಾಡುತ್ತಲೇ ಇದ್ದರು. ಆದರೆ ಉತ್ತರ ಸಿಗುತ್ತಿರಲಿಲ್ಲ. ಉತ್ತರಕ್ಕಾಗಿ ಹುಡುಕಾಡಿದರು. ಉತ್ತರಕ್ಕಾಗಿ ಭಾರತದಾದ್ಯಂತ ಸಂಚರಿಸಿ ಪ್ರಮಾಣ ಗ್ರಂಥಗಳನ್ನು ಪರಿಶೋಧಿಸಿ ಸಂಗ್ರಹಿಸಿದರು. ಗ್ರಂಥ ಭಂಡಾರವನ್ನೇ ಹೊಂದಿದ್ದರು. ಜಗತ್ತಿನ ಎಲ್ಲವನ್ನೂ ಎಲ್ಲರನ್ನೂ ಪ್ರೀತಿಸಬೇಕು ಎಂದು ಬೋಧಿಸಿದರು ಶ್ರೀಮಧ್ವರು.

ಹೌದು ! ಇದು ಕುತೂಹಲಕಾರೀ ಅಂಶ.

ಉತ್ತರ ಭಾರತದ ಒಂದು ಕಡೆ ಗಂಗಾ ನದಿಯೇ ಎರಡು ರಾಜ್ಯಗಳಿಗೆ ಗಡಿಯಾಗಿತ್ತು. ಈ ಕಡೆ ಒಂದು ರಾಜ್ಯವಾದರೆ ನದಿಯ ಆ ಕಡೆ ಮುಸಲ್ಮಾನ ರಾಜನ ಆಡಳಿತ. ಆ ಕಡೆ ಮುಸಲ್ಮಾನ ರಾಜನ ಸೈನಿಕರು ಮಾರಕಾಯುಧಗಳಿಂದ ಕಾವಲು ಕಾಯುತ್ತಿದ್ದರು. ಯಾರನ್ನೂ ರಾಜ್ಯ ಪ್ರವೇಶಿಸಲು ಬಿಡುತ್ತಿರಲಿಲ್ಲ. ಶ್ರೀಮಧ್ವರಿಗೆ ತೀರ್ಥಯಾತ್ರೆಯ ಪ್ರಯುಕ್ತ ಗಂಗಾನದಿಯನ್ನು ದಾಟಲೇ ಬೇಕಿತ್ತು. ಎಲ್ಲರೂ ಹೇಳಿದರು ನದಿ ದಾಟಿ ಸೈನಿಕರ ಕೈಗೆ ಸಿಲುಕಿ ಅಪಾಯವನ್ನು ಆಹ್ವಾನಿಸುವುದು ಮಾಡಬಾರದು. ಆದರೆ ಶ್ರೀಮಧ್ವರು ಕಿರುನಗೆಯನ್ನು ಬೀರಿ ನದಿ ದಾಟಲು ಪ್ರಾರಂಭಿಸಿಯೇ ಬಿಟ್ಟರು.

ಆ ಕಡೆಯಿಂದ ಮುಸಲ್ಮಾನ ರಾಜ್ಯದ ಸೈನಿಕರು ಗಲಾಟೆ ಮಾಡಲು ಪ್ರಾರಂಭಿಸಿದರು. ಶ್ರೀಮಧ್ವರು ನದಿಯ ಮಧ್ಯದಿಂದಲೇ “ಹೆದರಬೇಡಿ, ನಾನು ನಿಮಗೆ ಏನೂ ಮಾಡಲಾರೆ!” ಎಂದು ಹೇಳುತ್ತಿದ್ದರು! ಎಲ್ಲರಿಗೂ ಆಶ್ಚರ್ಯ. ಸ್ವಲ್ಪವೂ ಹೆದರದ ನಿರಾಯುಧರಾದ ಶ್ರೀಮಧ್ವರು ಸೈನಿಕರಿಗೆ ಅಭಯ ನೀಡುತ್ತಿದ್ದರು.

ನದಿ ದಾಟಿ, ದಡಕ್ಕೆ ಬಂದದ್ದೇ ತಡ ಸೈನಿಕರು ಮುಗಿಬಿದ್ದರು. ಶ್ರೀಮಧ್ವರು ಎಲ್ಲರನ್ನೂ ಸಮಾಧಾನಿಸಿ ರಾಜನಲ್ಲಿಗೆ ಕರೆದುಕೊಂಡು ಹೋಗುವಂತೆ ಹೇಳಿದರು. ಇತ್ತ ಮುಸಲ್ಮಾನ ರಾಜನಿಗೂ ಆಶ್ಚರ್ಯ. ಒಬ್ಬ ಹಿಂದೂ ಯತಿ, ಮುಸಲ್ಮಾನ ರಾಜನನ್ನು ಭೇಟಿಯಾಗಲು ಬರುತ್ತಿದ್ದಾನೆಂದು ! ದಾಟಲಸಾಧ್ಯವಾದ ಗಂಗಾನದಿಯನ್ನು ಕ್ರೂರಿ ಸೈನಿಕರನ್ನು ಹೇಗೆ ದಾಟಿ ಬಂದಿರಿ ಎಂದು ಕೇಳಿದಾಗ ಶ್ರೀಮಧ್ವರು, “ಯಾರು ಜಗತ್ತನ್ನು ಬೆಳಗುವರೋ ಅವನ ಅನುಗ್ರಹದಿಂದ ಈ ಕಾರ್ಯ ಮಾಡಿದೆವು” ಎಂದು ಧೈರ್ಯದಿಂದ ಅವನ ಭಾಷೆಯಲ್ಲೇ (ತುರುಷ್ಕರ ಭಾಷೆ) ಉತ್ತರ ನೀಡಿದರು.ಶ್ರೀಮಧ್ವರ ಗಾಂಭೀರ್ಯ, ಧೈರ್ಯ ಉತ್ಕೃಷ್ಟ ಪೌರುಷ ವಿದ್ವತ್ತು ಮತ್ತು ವರ್ಚಸ್ಸುಗಳನ್ನು ನೋಡಿ ಆ ಮುಸಲ್ಮಾನ ರಾಜನು ಮನಸಾ ಮೆಚ್ಚಿಕೊಂಡು ತನ್ನ ರಾಜ್ಯಾರ್ಧವನ್ನು ಸಮರ್ಪಿಸಿದನು. ಯಾರೊಂದಿಗೆ ಹೇಗೆ ಸೌಹಾರ್ದಯುತವಾಗಿ ಸಂವಹನ ಮಾಡಬೇಕು ಎಂದು ಇಲ್ಲಿ ತೋರಿಸಿ ಕೊಟ್ಟಿದ್ದಾರೆ.

ಇದು ಶ್ರೀಮಧ್ವರ ಒಂದು ಮಹಾಸಂದೇಶ. ನಾವು ಪರಸ್ಪರ ಹೊಡೆದಾಡಿ ಜಗಳ ಮಾಡಿಕೊಳ್ಳದೆ,ಪರಸ್ಪರ ಸಹಕಾರದಿಂದ ಆತ್ಮೀಯತೆಯಿಂದ ಬದುಕಬೇಕು. ಯಾಕೆಂದರೆ ಎಲ್ಲರಿಗೂ ದೇವರು ಒಬ್ಬನೇ, ದೇವರು ಎರಡಿಲ್ಲ .ನಮ್ಮ ನಮ್ಮಲ್ಲಿ ಆಚರಣೆಗಳಲ್ಲಿ ವೈವಿಧ್ಯತೆಗಳಿದ್ದರೆ ಅದನ್ನು ನಾವು ಇನ್ನೊಬ್ಬರಿಗೆ ತೊಂದರೆಯಾಗದಂತೆ ಆಚರಿಸಬೇಕು. ಇದು ಸಾರ್ವಕಾಲಿಕ ವೈದಿಕ ಸಂದೇಶ ಕೂಡ ಹೌದು. ಇಂದಿನ ಕಾಲದ ಅಗತ್ಯ ಕೂಡ.

ಶ್ರೀಮಧ್ವನವಮಿಯಂದು ಪರಸ್ಪರ ಶಾಂತಿ ಸೌಹಾರ್ದದಿಂದ ಬಾಳುವ ಪ್ರತಿಜ್ಞೆಯನ್ನು ಮಾಡೋಣ. ಅದಕ್ಕೆ ಶ್ರೀಮಧ್ವರ ಈ ಜೀವನ ಸಂದೇಶ ಆದರ್ಶವಾಗಲಿ.

# ರಥಸಪ್ತಮಿ

-ಬಿ.ಆರ್. ಶ್ರೀಕಂಠಯ್ಯ

ಮಾಘಮಾಸವು ಬಹಳ ಪ್ರಾಮುಖ್ಯವಾದ ಮಾಸ. ಉತ್ತರಾಯಣದ ಈ ಮಾಸದಲ್ಲಿ ಮಾಘಸ್ನಾನ ಬಹಳ ಪ್ರಸಿದ್ಧಿಯಾಗಿದೆ. ಪುಣ್ಯ ನದಿಗಳಲ್ಲಿ ಸ್ನಾನ ಬಹಳ ಶ್ರೇಷ್ಠ. ಊರಿಂದ-ಊರಿಗೆ ಹೋಗಿ ಪವಿತ್ರನದಿ ಮತ್ತು ಸಂಗಮಗಳಲ್ಲಿ ಸ್ನಾನ ಮಾಡುತ್ತಾರೆ. ಭಕ್ತಿ ಮತ್ತು ಶ್ರದ್ಧೆಗಳಿಂದ ಮಾಡಿದ ಸ್ನಾನ "ಪ್ರಯಾಗ" ದಲ್ಲಿ ಮಾಡಿದಷ್ಟೇ ಪುಣ್ಯ ಎಂದು ಹೇಳುತ್ತಾರೆ. ರಥಸಪ್ತಮಿಯನ್ನು ಮಾಘಮಾಸದ ಶುಕ್ಲಪಕ್ಷದ ಸಪ್ತಮಿಯಂದು (28-01-2023) ಆಚರಿಸುತ್ತಾರೆ. ಈ ಹಬ್ಬದ ಆಚರಣೆಗೆ ಯಾವ ಭೇದವಿಲ್ಲ. ಕಾರಣ ಈ ಹಬ್ಬದ ಆರಾಧ್ಯ ದೇವತೆ "ಸೂರ್ಯ", ಈ ಹಬ್ಬವನ್ನು "ಸೂರ್ಯ ಜಯಂತಿ" ಎಂದು ಕರೆಯುವ ವಾಡಿಕೆ ಇದೆ. ಇವನನ್ನು ಸೂರ್ಯ ನಾರಾಯಣ ಎಂದು ಸಂಬೋಧಿಸುತ್ತಾರೆ. ಗಾಯಿತ್ರಿಮಂತ್ರದ ಸ್ವರೂಪವು ಸೂರ್ಯನದೆ ಆಗಿದೆ. ರಥ ಸಪ್ತಮಿಯಂದು ಅನೇಕ ಕಡೆ ರಥೋತ್ಸವಗಳು ನಡೆಯುತ್ತದೆ ಈ ಸಪ್ತಮಿಯಲ್ಲಿ ಸೂರ್ಯದೇವನಿಗೆ ವಿಶೇಷ ಪೂಜೆಸಲ್ಲುತ್ತದೆ.

ರಥಸಪ್ತಮಿಯಂದು ಸ್ನಾನ ಮಾಡುವಾಗ ಏಳು ಎಕ್ಕದೆಲೆಗಳನ್ನು ತಲೆ, ತೋಳುಗಳ ಮೇಲೆ ಇಟ್ಟುಕೊಂಡು ಅವರವರ ಪದ್ಧತಿಗೆ ಅನುಸಾರವಾಗಿ ಸ್ನಾನವನ್ನು ಮಾಡುತ್ತಾರೆ. ಇದಕ್ಕೆ ವೈಜ್ಞಾನಿಕವಾದ ಕಾರಣವಿದೆ. ಈ ಏಳು ಸಂಖ್ಯೆಯ ಸಂಕೇತ. ಸೂರ್ಯನ ರಥದ ಅಶ್ವಗಳ ಸಂಖ್ಯೆ ಏಳು, ಲೋಕಗಳು ಏಳು, ದ್ವೀಪಗಳು ಏಳು, ಸ್ನಾನಮಾಡುವ ದಿನವೂ ಏಳನೆಯ ದಿನ (ಸಪ್ತಮಿ) ಎಕ್ಕದಸಹಿತ ಸ್ನಾನ,ವಾತ, ಕಫ, ಚರ್ಮ ವ್ಯಾಧಿ ಇತ್ಯಾದಿ ರೋಗಗಳ ನಿವಾರಣೆಯಾಗುತ್ತದೆ. ಈ ಶ್ಲೋಕವನ್ನು ಹೇಳಿ ಸ್ನಾನ ಮಾಡುತ್ತಾರೆ.

ಸಪ್ತಸಪ್ತ ಮಹಾಸಪ್ತ ।ಸಪ್ತದ್ವೀಪಾವಸುಂಧರಾ ।
ಸಪ್ತಾರ್ಕವರ್ಣಮಾದಾಯ। ಸಪ್ತಮ್ಯಾಂಸ್ನಾನ ಮಾಚರೇತ್।

ಆರೋಗ್ಯಕ್ಕಾಗಿ ಆದಿತ್ಯನನ್ನು ಆರಾಧಿಸಲು ಅರುಣ ಪ್ರಶ್ನವನ್ನು ಪಾರಾಯಣ ಮಾಡುತ್ತಾರೆ. ಶಾಂತಿಕರ್ಮಗಳಲ್ಲಿ ಸಂಕಟಗಳಲ್ಲಿ ಸೂರ್ಯನಮಸ್ಕಾರ ಮಾಡುವುದು ವಾಡಿಕೆ. ಪೂರ್ಣಗರ್ಭಿಣಿಯು, ಪ್ರಸವವೇದನೆಯಲ್ಲಿದ್ದಾಗ ಅರುಣ ಪ್ರಶ್ನೆ ಪಾರಾಯಣದಿಂದ ಸುಖ ಪ್ರಸವವಾಗುವುದು ಎಂಬ ನಂಬಿಕೆಯಿದೆ. ಹಾಗೆಯೇ ಸಾಮಾನ್ಯವಾಗಿ ಈ ಅರುಣ ಪಾರಾಯಣ ಕಾಲದಲ್ಲಿ 61-63 ನೇ ಮಂತ್ರಗಳನ್ನು ಮನಸ್ಸಿನಲ್ಲಿಯೇ ಹೇಳುವ ವಾಡಿಕೆ ಇದೆ. ಮಳೆಯ ಪ್ರಾರ್ಥನೆಗೆ ಅರುಣ ಪ್ರಶ್ನೆಯ ಒಂದು ಮಂತ್ರವನ್ನು ಜಪಕ್ಕಾಗಿ ಉಪಯೋಗಿಸುತ್ತಾರೆ. ನಿಷ್ಠೆಯಿಂದ ಮಾಡಿದ ಜಪಕ್ಕೆ ಫಲವಿದೆ. ದೇವರ ರಥೋತ್ಸವಗಳಲ್ಲಿ ಅರುಣ ಪಾರಾಯಣ ಮಾಡುವ ಕ್ರಮವಿದೆ.



ರಥಸಪ್ತಮಿ ಹಾಗೂ ಮಾಘ ಮಾಸದ ಭಾನುವಾರ (ಸೂರ್ಯನ ವಾರ)ಗಳು ಸೂರ್ಯಾರಾಧನೆಗೆ ಬಹಳ ಶ್ರೇಷ್ಠ ಈ ಭಾನುವಾರ

ಗಳಂದು "ಅರುಣ" ಪಾರಾಯಣ, ಸೌರ ಸೂಕ್ತ ಮತ್ತು ಆದಿತ್ಯ ಹೃದಯ (ಮೂವತ್ತು ಶ್ಲೋಕಗಳು) ಇತ್ಯಾದಿ ಸ್ತೋತ್ರಗಳಿಂದ ನಮಸ್ಕಾರ ಪ್ರಿಯವಾದ ಆದಿತ್ಯನಿಗೆ ನಮಸ್ಕಾರವನ್ನು ಮಾಡುತ್ತಾರೆ. ಷೋಡಶೋಪಚಾರ ಪೂಜೆ ಮಾಡಿ ಸೂರ್ಯನ ಧಾನ್ಯವಾದ"ಗೋಧಿ"ರವೆಯ ಪಾಯಸವನ್ನು ನೈವೇದ್ಯ ಮಾಡುತ್ತಾರೆ. ಅರುಣ ಪ್ರಶ್ನದಲ್ಲಿ ಒಟ್ಟು ನೂರ ಮೂವತ್ತು ಅನು ವಾಕಗಳಿವೆ. ಇದರ ಪಾರಾಯಣಕ್ಕೆ ಸುಮಾರು ತೊಂಬತ್ತು ನಿಮಿಷಗಳು ಬೇಕಾಗುತ್ತದೆ. ಈ ಅರುಣ ಪ್ರಶ್ನಯಲ್ಲಿ ಅನೇಕ ವಿಚಾರಗಳು ಅಡಕವಾಗಿದೆ. ಹಾಗೆಯೆ, "ಆದಿತ್ಯ ಹೃದಯ"ವನ್ನು ಅಗಸ್ತ್ಯರು ಶ್ರೀ ರಾಮಚಂದ್ರನಿಗೆ ಯುದ್ಧ ಭೂಮಿಯಲ್ಲಿ ಉಪದೇಶ ಮಾಡುತ್ತಾರೆ. ಇದರಿಂದ ರಾವಣನ ಸಂಹಾರಕ್ಕೆ ಸಹಕಾರಿ ಯಾಯಿತು ಎಂದು ಹೇಳಲಾಗುತ್ತದೆ.ಉಪದೇಶ ಪಡೆದು, ಇದನ್ನು ಎಲ್ಲರು ಹೇಳಿ ಕೊಳ್ಳಬಹುದು. ಬಹಳ ಒಳ್ಳೆಯ ಸ್ತೋತ್ರ. ಇದ ರಿಂದ ಅನೇಕ ಪ್ರಯೋಜನಗಳಿವೆ. ಈ ರಥಸಪ್ತಮಿಯ ದಿನ. ಸಂಕ್ರಾಂತಿಯಂತೆ ಎಳ್ಳು ಬೆಲ್ಲದ ಮಿಶ್ರಣವನ್ನು ಹಂಚುತ್ತಾರೆ.

ಶ್ರೀಆದಿಶಂಕರರು ಷಣ್ಮತ ಸ್ಥಾಪನಾಚಾರ್ಯರು, ಇವರು ಆರಂಭಿಸಿದ ಪಂಚಾಯತನ ಪೂಜೆಯಲ್ಲಿ ಸೂರ್ಯ ನಿಗೆ ಸ್ಥಾನವಿದೆ. ಆದಿತ್ಯ, ಅಂಬಿಕಾ, ವಿಷ್ಣು ಗಣನಾಥ, ಮಹೇಶ್ವರ, ಇವರೇ ಈ ಪಂಚಾಯತನ ದೇವತೆಗಳು, ಅವರವರ ಪದ್ಧತಿಯಂತೆ ಯಾರನ್ನು ಮಧ್ಯದಲ್ಲಿಟ್ಟು ಪೂಜಿಸು ತ್ತಾರೆಯೋ ಆ ಪೂಜೆಗೆ ಆಯಾಯ ದೇವತೆಗೆ ಪೂಜೆಸಲ್ಲುತ್ತದೆ. (ಸೂರ್ಯ, ಶಿವ, ಪಂಚಾಯತನ).ಅನೇಕ ಆದಿತ್ಯರ ಹೆಸರು ಗಳಲ್ಲಿ ದ್ವಾದಶ ಆದಿತ್ಯರು ಬಹಳ ಮುಖ್ಯವಾದವರು. ಇವರು ಹನ್ನೆರಡು ಮಾಸಗಳ (ಚೈತ್ರ ಮಾಸದಿಂದ ಫಾಲ್ಗುಣ ಮಾಸ) ಅಧಿಪತಿಯಾಗಿರುತ್ತಾರೆ. ಅವರೇ ಧಾತ ಅರ್ಯಮಾ, ಮಿತ್ರ ವರಣ ಸೂರ್ಯ, ಇಂದ್ರಸೂರ್ಯ, ವಿವಸ್ಮಾನ್, ಅಂಶು ಮಾನ್, ಪೂಜಾ, ಪರ್ಜನ್ಮ ಇತ್ಯಾದಿ. ಸೂರ್ಯನ ಮಕ್ಕಳೆ ಶನಿ ಮತ್ತು ಯಮ.

ಗಾಯತ್ರಿಯ ಉಪಾಸನೆಯು ಸೂರ್ಯೋಪಾಸನೆ. ಸೂರ್ಯನು ತ್ರಿಮೂರ್ತಿ ರೂಪಗಳಲ್ಲಿರುತ್ತಾನೆ. ಉದಯೋ ಬ್ರಹ್ಮ ಸ್ವರೂಪೋ,ಮಧ್ಯಾಹ್ನೇತು ಮಹೇಶ್ವರ,ಅಸ್ತಮಾನೆ (ಸಾಯಂ ಕಾಲ) ಸ್ವಯಂ ವಿಷ್ಣು ತ್ರಯೀಮೂರ್ಥಿ ದಿವಾರಕರಃ ಭಗವದ್ಗೀ ತೆಯಲ್ಲಿ ಶ್ರೀಕೃಷ್ಣನ ವಾಣಿ

ಆದಿತ್ಯಾನಾಮಹಂ ವಿಷ್ಣುರ್ಜ್ಯೋತಿಷಾಂ ರವಿರಂಶುವಾನ್।
ಮರೀಚಿರ್ಮರು ತಾಮಸ್ಮಿ, ನಕ್ಷತ್ರಾಣಾಮಹಂ ಶಶೀ॥

(೧೦/೨೧) ನಾನು ಜ್ಯೋತಿಗಳಲ್ಲಿ ಕಿರಣಗಳುಳ್ಳ ಸೂರ್ಯನಾಗಿದ್ದೇನೆ.

ಯಾಜ್ಞಾವಲ್ಕ್ಯರ ಗುರುವು ಸೂರ್ಯದೇವನೆ ನಮ್ಮ ಆಂಜನೇಯನ ಗುರು ಸೂರ್ಯದೇವ, ಇದರ ಹಿಂದೆ ಬಹಳ ವಿಶದವಾದ ಕಥೆಯಿದೆ. ಸೂರ್ಯನ ಅಣತಿಯಂತೆ, ಸೂರ್ಯನನ್ನೆ ಹಿಂಬಾಲಿಸಿ, ಅನೇಕ ವಿದ್ಯೆಗಳನ್ನು ಕಲಿತಿದ್ದಾನೆ. ಇವನು ವ್ಯಾಕರಣ ಪಂಡಿತ ಆಂಜನೇಯನು , ಸೂರ್ಯ ದೇವನನ್ನು ಕೇಳುತ್ತಾನೆ. ನಿಮಗೆ "ಗುರುದಕ್ಷಿಣೆ" ಏನು ಕೊಡಬೇಕು ಎಂದು ಕೇಳಿದಾಗ, ನನ್ನ ಅಂಶನಾದ "ಸುಗ್ರೀವ" ನನ್ನು ರಕ್ಷಿಸು. ಆದರಿಂದಲೇ ಶ್ರೀರಾಮನ ಸಹಾಯದಿಂದ ಸುಗ್ರೀವನನ್ನು ರಕ್ಷಣೆ ಮಾಡುತ್ತಾನೆ. ಇದರ ಕಥೆ ಎಲ್ಲರಿಗೂ ತಿಳಿದಿದೆ. ವಿಭೀಷಣ ಕೂಡ ಸೂರ್ಯಾಂಶದವನು. ಶ್ರೀರಾಮನ ವಂಶವು ಸೂರ್ಯವಂಶ. ರಿಪು-ಅಜ-ದಶರಥ-ಶ್ರೀರಾಮ, ಇವರೆಲ್ಲಾ ಸೂರ್ಯವಂಶದ ರಾಜರುಗಳು.

ಮಾಘಮಾಸದಲ್ಲಿ ಸೂರ್ಯ ಕ್ಷೇತ್ರಗಳು ಹಾಗೂ ಅನೇಕ ಸ್ಥಳಗಳಲ್ಲಿ ರಥೋತ್ಸವಗಳು ನಡೆಯುತ್ತದೆ. ಸೂರ್ಯನ ದೇವಸ್ಥಾನಗಳನ್ನು ನಾವು ಬೆಂಗಳೂರು, ಕೋನಾರ್ಕ್, ಅರಸವಲ್ಲಿ ಹಾಗೂ ಕುಂಭಕೋಣದ ಸಮೀಪವಿರುವ 'ನವಗ್ರಹ' ಗಳಿಗೆ ಮೀಸಲಾಗಿರುವ ದೇವಸ್ಥಾನ "ಕಂಜನೂರು" ನಲ್ಲಿ ನೋಡಬಹುದು.

ಸ್ವಲ್ಪಕಾಲದ ಹಿಂದೆ (ಈಗಲೂ ಹೇಳುತ್ತಿರಬಹುದು) ಶಾಲೆಯಲ್ಲಿ ಪ್ರಾರ್ಥನೆಯಾಗಿ ಒಂಬತ್ತು ಚರಣಗಳುಳ್ಳ ಸೂರ್ಯಸ್ತೋತ್ರವನ್ನು ಹೇಳಿಕೊಡುತ್ತಿದ್ದರು. "ಸ್ವಾಮಿದೇವನೆ ಲೋಕಪಾಲನೇ ತೇ ನಮೋಸ್ತು ನಮೋಸ್ತುತೇ। ಪ್ರೇಮದಿಂದಲೆ ನೋಡು ನಮ್ಮನು ತೇ ನಮೋಸ್ತು ನಮೋಸ್ತುತೇ (1) ಬೇಡಿ ಕೊಂಬೆವು ನಮ್ಮ ದೇಹಕೆ ಸೌಖ್ಯವಂ ಬಲು ಪುಷ್ಟಿಯಂ ನಿನ್ನಯ ಪಾದ ಭಜನೆಯ ಎಂದಿಗೂ ಬಿಡಲಾರೆವೈ (೨)

ಸನಾತನವಾಗಿ ಬಂದಿರುವ ಹಬ್ಬಗಳ ಆಚರಣೆಗಳು ಬಹಳ ಶ್ರೇಯಸ್ಕರ ಮತ್ತು ಅದಕ್ಕೆ ಅದರದೇ ಆದ ವಿಶೇಷತೆ ಯಿದೆ. ಎಲ್ಲ ಆಚರಣೆಗಳಿಗೂ ಧಾರ್ಮಿಕ ಮತ್ತು ವೈಜ್ಞಾನಿಕ ಹಿನ್ನಲೆಯಿದೆ. ತಿಳಿದುಕೊಳ್ಳುವ ಆಸಕ್ತಿಯನ್ನು ಬೆಳಸಿಕೊಳ್ಳ ಬೇಕು. ಆಯಾಯ ಮಾಸ ಮತ್ತು ಋತುಗಳಲ್ಲಿ ಬರುವ ಹಬ್ಬಗಳು ಆಯಾಯ ಋತುಗಳಲ್ಲಿ ದೇಹದಲ್ಲಾಗುವ ಬದಲಾವಣೆಯ ಪೂರಕವಾಗಿ ಆರೋಗ್ಯವನ್ನು ರಕ್ಷಿಸಿ ಮನಸ್ಸಿಗೆ ನೆಮ್ಮದಿಯನ್ನು ಕೊಡುತ್ತದೆ.

ಭಾಸ್ವಾಕಾಶ್ಯಪ ಗೋತ್ರ ಜೋಽರುಣ ರುಚಿರ್ಯಸ್ಸಿಂಹ ಪ್ರೋರ್ಕಸ್ಸಮಿತ್
ಷಟ್ತ್ರಿಸ್ಥೋದಶದಶ್ಶುಭಶ್ಶೇ ಗುರೂ ಭೌಮಶ್ಚ ಮಿತ್ರಂ ಸದಾ
ಶುಕ್ರೋ ಮಂದರಿಪುಃ ಕಳಿಂಗ ಜನಪಶ್ಚಾಗ್ನೀಶ್ವರೋ ದೇವತೇ ।
ಮಧ್ಯೇವರ್ತುಲ ಪೂರ್ವದಿಗ್ದಿನಕರಃ ಕುರ್ಯಾತ್ಸದಾ ಮಂಗಳಂ।

ಸೂರ್ಯನಾರಾಯಣನು ಸರ್ವರಿಗೂ ಮಂಗಳ ವನ್ನುಂಟು ಮಾಡಲಿ ಎಂದು ಪ್ರಾರ್ಥಿಸೋಣ.



# ನಾದ ಬ್ರಹ್ಮಶ್ರೀ ತ್ಯಾಗರಾಜರು


**- ಡಾ।। ಎಸ್. ನಂಜುಂಡಸ್ವಾಮಿ**

78990 11310


ಕಾವೇರಿ ತೀರದ ಚೋಳನಾಡು ನೂರಾರು ಭಕ್ತಿ ಮಾರ್ಗ ಪ್ರವರ್ತಕರಿಗೆ ಜನ್ಮ ನೀಡಿದೆ. ಅವರಲ್ಲಿ ಆಳ್ವಾರರುಗಳು, ಶೈವ ನಾಯನ್ಮಾರರುಗಳು, ಸಂಗೀತಗಾರರು ಪ್ರಮುಖರು. ಇದನ್ನು ಗಮನಿಸಿಯೇ ಭಾಗವತದಲ್ಲಿ ಭಕ್ತಿ ಜ್ಞಾನ ವೈರಾಗ್ಯವು "ಉತ್ಪನ್ನಾ ದ್ರವಿಡೇ ಸಾಹಂ ವೃದ್ಧಿಂ ಕರ್ನಾಟಕೇ ಗತಾ" ಅಂದರೆ ದ್ರವಿಡ ದೇಶದಲ್ಲಿ ಹುಟ್ಟಿ ಕರ್ನಾಟಕದಲ್ಲಿ ಬೆಳೆಯಿತೆಂದು ಹೇಳಿದೆ. ಅಂದಿನ ಕಾಲದಲ್ಲಿ ಚೋಳನಾಡಿನ ಕೇಂದ್ರವಾದ ತಂಜಾವೂರು ಸಂಸ್ಥಾನದ ಆಳ್ವಿಕೆಯನ್ನು ನಡೆಸುತ್ತಿದ್ದ ನಾಯಕರು ಮತ್ತು ಮರಾಠಾ ದೊರೆಗಳು ತಾವೇ ಸ್ವತಃ ಸಂಗೀತ ಮತ್ತು ಸಾಹಿತ್ಯ ವಿದ್ವಾಂಸರಾಗಿದ್ದರಲ್ಲದೆ, ಅವರ ಆಸ್ಥಾನವು ಕೂಡಾ ಸಂಗೀತಗಾರರಿಂದ ತುಂಬಿ ಹೋಗಿತ್ತು .

ಕರ್ನಾಟಕ ಶಾಸ್ತ್ರೀಯ ಸಂಗೀತದ ತ್ರಿಮೂರ್ತಿಗಳಲ್ಲಿ ಒಬ್ಬರೆನಿಸಿದ ತ್ಯಾಗರಾಜರು, ಕಾವೇರಿ ತೀರದ ಚೋಳನಾಡಿನ ಪ್ರಸಿದ್ಧ ಶೈವ ಮತ್ತು ವೈಷ್ಣವ ಕ್ಷೇತ್ರವಾದ ಹಾಗೂ ಸಂಗೀತ ಕೇಂದ್ರವೆನಿಸಿದ ತಿರುವಾರೂರಿನಲ್ಲಿ ಸರ್ವಜಿತ್ ಸಂವತ್ಸರದ ಚೈತ್ರಮಾಸದ 25 ನೇ ದಿನ ಅಂದರೆ 4 ಮೇ 1767 ರಂದು ಜನಿಸಿದರೆಂದು ವಿದ್ವಾಂಸರು ಸಂಶೋಧನೆ ಮಾಡಿ ಹೇಳಿದ್ದಾರೆ. ತ್ಯಾಗರಾಜರ ತಂದೆ ರಾಮ ಬ್ರಹ್ಮಮ್, ತಾಯಿ ಸೀತಮ್ಮ ಅಥವಾ ಸೀತಾಂಬ.ರಾಮ ಬ್ರಹ್ಮಮ್ ಅವರು ತಂಜಾವೂರಿನ ಮಹಾರಾಜ ತುಲ ಜಾಜಿ ಆಸ್ಥಾನದಲ್ಲಿ ರಾಮಾಯಣ ಪ್ರವಚನ ಮಾಡುತ್ತಿದ್ದರು.

ರಾಮಬ್ರಹ್ಮಮ್ ಅವರು ತಿರುವಾರೂರಿನ ಪ್ರಮುಖ ದೇವತೆಯಾದ ತ್ಯಾಗರಾಜ ಸ್ವಾಮಿಯ ಆರಾಧಕರು. ಒಮ್ಮೆ ತ್ಯಾಗರಾಜ ಸ್ವಾಮಿಯು ರಾಮಬ್ರಹ್ಮಮ್ ಅವರ ಕನಸಿನಲ್ಲಿ ಕಾಣಿಸಿಕೊಂಡು ನಿನಗೆ ಸಂಗೀತ ಸಾಹಿತ್ಯ, ಕಲಾ, ಕೋವಿದನಾದ ಮಗನು ಹುಟ್ಟುತ್ತಾನೆ. ಅವನಿಗೆ ತ್ಯಾಗರಾಜನೆಂದು ಹೆಸರಿಡಬೇಕೆಂದು ಹೇಳಿದನೆಂದು ಪ್ರತೀತಿ. ತ್ಯಾಗರಾಜರು ಮುಲುಕುನಾಡು ಬ್ರಾಹ್ಮಣ ವಂಶದವರು, ಭಾರದ್ವಾಜ ಗೋತ್ರದವರು. ತ್ಯಾಗರಾಜರು ತಾವು ರಾಮ ಬ್ರಹ್ಮನ ಮಗನೆಂದು "ದೊರಕುನ ಇಟುವಂಟಿ ಸೇವಾ ರಾಮಬ್ರಹ್ಮ ತನಯುಡು ತ್ಯಾಗರಾಜ ತಾಬಾಡುಚು ನೂಚಗಾಃ" ಎಂಬ ಕೀರ್ತನೆಯಲ್ಲಿ ಹೇಳಿದ್ದಾರೆ. ಅದೇ ರೀತಿ ತಾವೇ ರಚಿಸಿದ "ಪ್ರಹ್ಲಾದ ಭಕ್ತಿ ವಿಜಯಂ" ಎಂಬ ಗೀತ ನಾಟಕದಲ್ಲಿ "ಶ್ರೀರಾಮಬ್ರಹ್ಮ ತನಯ ತ್ಯಾಗರಾಜೇನ ನಿರ್ಮಿತಂ" ಎಂದು ಹೇಳಿದ್ದಾರೆ.

ರಾಮಾಯಣ ಪ್ರವಚನಕ್ಕೆ ತಂದೆಯ ಜೊತೆಯಲ್ಲಿ ತ್ಯಾಗರಾಜರೂ ರಾಜನ ಆಸ್ಥಾನಕ್ಕೆ ಹೋಗುತ್ತಿದ್ದರು. ಬಾಲ್ಯದಿಂದಲೇ ತ್ಯಾಗರಾಜರಿಗೆ ರಾಮಾಯಣದ ಶ್ಲೋಕಗಳು ಬಾಯಿಪಾಠವಾಗಿತ್ತು. ತಾಯಿಯ ತಂದೆ ವೀಣಾ ಕಾಳಹಸ್ತಿ ಅಯ್ಯರ್ ಅವರು ತಂಜಾವೂರು ಆಸ್ಥಾನದಲ್ಲಿ ವಿದ್ವಾಂಸರು. ತ್ಯಾಗರಾಜರ ತಾಯಿ ಸೀತಮ್ಮನವರು ಅವರು ಕರ್ನಾಟಕ ಸಂಗೀತ ಪಿತಾಮಹ ಪುರಂದರದಾಸರ ಕೀರ್ತನೆಗಳನ್ನು ಸಂಗ್ರಹಿಸಿ ಇಟ್ಟುಕೊಂಡು ಹಾಡುತ್ತಿದ್ದರು.

ಹೀಗೆ ತ್ಯಾಗರಾಜರ ಮನೋಭೂಮಿಕೆಯ ಮೇಲೆ ಬಾಲ್ಯದಿಂದಲೇ ರಾಮಾಯಣ ಮತ್ತು ಸಂಗೀತದ ಪ್ರಭಾವ ಅಚ್ಚೊತ್ತಿತ್ತು. ತ್ಯಾಗರಾಜರಿಗೆ ಇಬ್ಬರು ಅಣ್ಣಂದಿರು ಪಂಚಾಕೇಶನ್ ಅಥವಾ ಜಲ್ಪೇಶನ್ ಮತ್ತು ರಾಮನಾಥನ್. ತ್ಯಾಗರಾಜರು ಸುಮಾರು 5 ವರ್ಷದ ಬಾಲಕನಾಗಿದ್ದಾಗ ತೀವ್ರವಾದ ಖಾಯಿಲೆಯಿಂದ ಬಳಲುತ್ತಿದ್ದರಂತೆ. ಆಗ ಒಬ್ಬ ಸನ್ಯಾಸಿಯು ಬಂದು ಅವರನ್ನು ಆಶೀರ್ವದಿಸಿದ ಮರುದಿನವೇ ಅವರು ಗುಣಮುಖರಾದರಂತೆ.

ರಾಮಬ್ರಹ್ಮರು ತಂಜಾವೂರಿಗೆ ಸಮೀಪ ಇರಬೇಕೆಂಬ ಉದ್ದೇಶದಿಂದ 1774 ರಲ್ಲಿ ತಮ್ಮ ಕುಟುಂಬದೊಡನೆ ತಿರುವೈಯಾರಿಗೆ ಬಂದರು. ಈ ಸಮಯದಲ್ಲಿ ತ್ಯಾಗರಾಜರಿಗೆ ಉಪನಯನವಾಯಿತು. ತ್ಯಾಗರಾಜರು ಪ್ರತಿದಿನ ದೇವರ ಪೂಜೆಗೆ ಹೂವುಗಳನ್ನು ಸಂಗ್ರಹಿಸಿ ತರಲು ಅಂದನರ್ ಕುರುಚಿ ಎಂಬಲ್ಲಿ ತೋಟಕ್ಕೆ ಹೋಗುತ್ತಿದ್ದರು. ದಾರಿಯಲ್ಲಿ ಸೊಂಟಿ ವೆಂಕಟ ರಮಣ ಅಯ್ಯರ್ ಎಂಬ ಸಂಗೀತ ವಿದ್ವಾಂಸರ ಮನೆಯಲ್ಲಿ ಶಿಷ್ಯರಿಗೆ ಸಂಗೀತ ಪಾಠ ನಡೆಯುತ್ತಿತ್ತು. ತ್ಯಾಗರಾಜರು ಅದನ್ನು ಕೇಳುತ್ತಾ ನಿಲ್ಲುತ್ತಿದ್ದರು. ಅದನ್ನು ಕಂಡ ತಂದೆ ರಾಮ ಬ್ರಹ್ಮರು ಮಗನಿಗೆ ಸಂಗೀತ ಪಾಠ ಹೇಳಿ ಕೊಡುವಂತೆ ವೆಂಕಟ ರಮಣ ಅಯ್ಯರ್ ಅವರಲ್ಲಿ ಕೇಳಿಕೊಂಡರು. ತ್ಯಾಗರಾಜರು ಒಂದು ವರ್ಷದ ಕಾಲ ಅವರಲ್ಲಿ ಶಿಷ್ಯವೃತ್ತಿ ಮಾಡಿದರು. ತ್ಯಾಗರಾಜರು ತಮ್ಮ ಗುರುಗಳನ್ನು ಕುರಿತು 'ದೊರಕುನಾಇ ಟುವಂಟಿಸೇವಾ' ಎಂಬ ಕೃತಿಯನ್ನು ರಚಿಸಿದ್ದಾರೆ.

ಹದಿನೆಂಟರ ವಯಸ್ಸಿಗೆ ತ್ಯಾಗರಾಜರಿಗೆ ಪಾರ್ವತಿಯಮ್ಮ ಎಂಬುವವರೊಡನೆ ಮದುವೆಯಾಯಿತು. ಮದುವೆಯಾದ ಐದು ವರ್ಷದಲ್ಲೇ ಅವರ ಪತ್ನಿ ಕಾಲವಾದರು. ನಂತರ ಪಾರ್ವತಿಯಮ್ಮ ಅವರ ತಂಗಿ ಕಮಲಮ್ಮನವರನ್ನು ತ್ಯಾಗರಾಜರು ಮದುವೆಯಾದರು. ಅವರಿಗೆ ಸೀತಾಲಕ್ಷ್ಮಿ ಎಂಬ ಪುತ್ರಿ ಜನಿಸಿದರು. ಸೀತಾಲಕ್ಷ್ಮಿಯನ್ನು ಅಮ್ಮಾಳ್ ಆಗ್ರಹಾರದ ಕುಪ್ಪಸ್ವಾಮಿ ಅಯ್ಯರ್ ಎಂಬುವವರಿಗೆ ಮದುವೆ ಮಾಡಿಕೊಡಲಾಯಿತು. ಇವರಿಗೆ ತ್ಯಾಗರಾಜನೆಂಬ ಪುತ್ರನು ಜನಿಸಿದನು. ಇವರು ಪಿಟೀಲ್ ವಿದ್ವಾಂಸರಾಗಿದ್ದರು, ಮದುವೆಯೂ ಆಗಿತ್ತು. ಆದರೆ ಅವರು ಸಂತಾನಹೀನರಾಗಿ ಕಿರಿಯ ವಯಸ್ಸಿಗೇ ನಿಧನರಾದರು. ಅದರಿಂದಾಗಿ ತ್ಯಾಗರಾಜರ ಸಂತತಿ ಕೊನೆಯಾಯಿತು. ಆದರೆ ತ್ಯಾಗರಾಜರ ಸಹಸ್ರಾರು ಶಿಷ್ಯ ಸಂತತಿ ಆಲದಮರದಂತೆ ಬೆಳೆದು ನಿಂತಿದೆ.




**ರಾಮತಾರಕ ಮಂತ್ರ ದೀಕ್ಷೆ**

ಸುಮಾರು ಹದಿನೆಂಟನೆಯ ವಯಸ್ಸಿನಲ್ಲಿ ಕಾಂಚೀಪುರದಿಂದ ತಿರುವೈಯಾರಿಗೆ ಬಂದಿದ್ದ ರಾಮಕೃಷ್ಣ ಯತೀಂದ್ರರೆಂಬುವವರು ತ್ಯಾಗರಾಜರಿಗೆ ರಾಮತಾರಕ ನಾಮ ಮಂತ್ರ ಜಪದೀಕ್ಷೆಯನ್ನು ನೀಡಿದರು. 96 ಕೋಟಿ ರಾಮನಾಮವನ್ನು ಜಪಿಸಬೇಕೆಂದು ಹೇಳಿದರು. ತ್ಯಾಗರಾಜರು ತಿರುವೈಯಾರಿನ ಪಂಚನದೇಶ್ವರ ಸ್ವಾಮಿಯ ದೇವಾಲಯದ ದಕ್ಷಿಣದಲ್ಲಿರುವ ಕೈಲಾಸ ಮಂಟಪದಲ್ಲಿ ಕುಳಿತು. ದಿನಕ್ಕೆ ಒಂದು ಲಕ್ಷದ ಇಪ್ಪತ್ತೈದು ಸಾವಿರದಂತೆ 21 ವರ್ಷಗಳ ಕಾಲ ರಾಮಾನಾಮವನ್ನು ಜಪಿಸಿ ಶ್ರೀರಾಮಚಂದ್ರನ ಸಾಕ್ಷಾತ್ಕಾರ ಮಾಡಿಕೊಂಡರು. ಆಗಾಗ ಶ್ರೀರಾಮನು ಅವರಿಗೆ ದರ್ಶನ ನೀಡುತ್ತಿದ್ದನು. "ಏಲ ನೀ ದಯರಾದೂ","ಕನುಗೊಂಟಿನಿ' ಮೊದಲಾದ ಕೃತಿಗಳಲ್ಲಿ ರಾಮ ದರ್ಶನದ ಘಟನೆಗಳ ಸೂಚನೆ ಇದೆ . ನೌಕಾ ಚರಿತ್ರ ಎಂಬ ಅವರ ಗೇಯ ನಾಟಕದಲ್ಲಿ ರಾಮಕೃಷ್ಣ ಯತೀಂದ್ರರನ್ನು ಸ್ತುತಿಸಿದ್ದಾರೆ. ಇದೇ ಪಂಚನದೇಶ್ವರ ದೇವಾಲಯದಲ್ಲಿಯೇ ನಾಯ

ನ್ಮಾರ್ ಅಂದರೆ ಶೈವಸಂತರಾದ ಅಪ್ಪರ್ ಅವರಿಗೆ ಶಿವನು ದರ್ಶನ ನೀಡಿದನೆಂದು ಪ್ರತೀತಿ ಇದೆ.

### ನಾರದ ದರ್ಶನ

ಒಂದು ಬೆಳಗ್ಗೆ ಸನ್ಯಾಸಿಯೊಬ್ಬರು ತ್ಯಾಗರಾಜರ ಮನೆಗೆ ಬಂದು ಅವರ ಗಾಯನವನ್ನು ಆಲಿಸಿ ತಮ್ಮಲ್ಲಿದ್ದ ಸಂಗೀತ ಕೃತಿಗಳ ಒಂದು ಗಂಟನ್ನು ಅಲ್ಲಿಯೇ ಬಿಟ್ಟು. ಕಾವೇರಿ ನದಿಯಲ್ಲಿ ಸ್ನಾನ ಮಾಡಿಕೊಂಡು ಭಿಕ್ಷೆಗೆ ಬರುವುದಾಗಿ ಹೇಳಿ ಹೋದರಂತೆ. ಈ ರೀತಿ ಹೋದವರು ಪುನಃ ಬರಲೇ ಇಲ್ಲ ಆ ದಿನವೆಲ್ಲಾ ತ್ಯಾಗರಾಜರು ಉಪವಾಸ ಮಾಡಿದರು. ರಾತ್ರಿ ಕನಸಿನಲ್ಲಿ ಆ ಸನ್ಯಾಸಿಯು ಕಾಣಿಸಿಕೊಂಡು ತಾನು ನಾರದ ನೆಂದೂ, ಸಂಗೀತ ಕೃತಿಗಳನ್ನು ನೀಡಲು ಅವರಿಗೆ ಸನ್ಯಾಸಿಯ ರೂಪದಲ್ಲಿ ಬಂದಿದ್ದನೆಂದೂ ಹೇಳಿದನಂತೆ ತ್ಯಾಗರಾಜರು ಎಚ್ಚರ ಗೊಂಡು ಆ ಪುಸ್ತಕದ ಕಟ್ಟುಗಳನ್ನು ಬಿಡಿಸಿ ನೋಡಿದಾಗ, ಅದರಲ್ಲಿ 'ಸ್ವರಾರ್ಣವ' ಮತ್ತು 'ನಾರದೀಯಂ' ಎಂಬ ಎರಡು ಗ್ರಂಥಗಳು ಇದ್ದವಂತೆ "ಶ್ರೀನಾರದಮುನೇ ಗುರುರಾಯ" ಎಂಬ ಕೃತಿಯಲ್ಲಿ ನಾರದ ದರ್ಶನ ಭಾಗ್ಯವನ್ನು ವರ್ಣಿಸಿದ್ದಾರೆ. ಸ್ವರಾರ್ಣವ ಕೃತಿಯನ್ನು ತ್ಯಾಗರಾಜರು ಆಮೂಲಾಗ್ರವಾಗಿ ಅಧ್ಯಯನ ಮಾಡಿ ಸಂಗೀತದಲ್ಲಿ ಸಿದ್ಧಿಯನ್ನು ಪಡೆದರು. ಶಂಕರಾಭರಣದಲ್ಲಿ ರಚಿಸಿರುವ "ಸ್ವರರಾಗ ಸುಧಾರಸ"ಎಂಬ ಕೃತಿಯಲ್ಲಿ ಇದನ್ನು ಸೂಚಿಸಿದ್ದಾರೆ. ಶಿವ ಪಾರ್ವತಿಯರಿಗೆ ನಡೆದ ಸಂವಾದ ರೂಪದಲ್ಲಿ ಈ ಸಂಗೀತ ಶಾಸ್ತ್ರ ಗ್ರಂಥವಿದೆ. 'ಆತ್ಮ ಮಧ್ಯಗತಾಃ ಪ್ರಾಣಃ ಪ್ರಾಣ ಮಧ್ಯಗತೋ ಧ್ವನಿಃ ಧ್ವನಿ ಮಧ್ಯ ಗತೋ ನಾದಃ ನಾದ ಮಧ್ಯೇ ಸದಾಶಿವಃ । ಎಂಬ ಶ್ಲೋಕ ಈ ಕೃತಿಯಲ್ಲಿದೆ.

### ಭಕ್ತಿ, ಜ್ಞಾನ, ವೈರಾಗ್ಯದ ಸರಳ ಜೀವನ

ತ್ಯಾಗರಾಜರು ಸರಳವಾದ ಭಕ್ತಿ ಮಾರ್ಗದಲ್ಲಿ ಜೀವನವನ್ನು ನಡೆಸಿದರು. ತಮ್ಮ ಪೂರ್ವಜರಿಂದ ಬಂದ ಒಂದು ಮನೆ ಸ್ವಲ್ಪ ಭೂಮಿ ಬಿಟ್ಟರೆ ಬೇರೆ ಆಸ್ತಿಯೇನೂ ಅವರಿಗೆ ಇರಲಿಲ್ಲ. ಅವರು ತಮ್ಮ ಕುಟುಂಬವನ್ನು, ಸಂಗೀತವನ್ನು ಕಲಿಯಲು ಬಂದ ಶಿಷ್ಯವೃಂದವನ್ನೂ, ಹೆಚ್ಚಿನ ಸಂಖ್ಯೆಯಲ್ಲಿ ಮನೆಗೆ ಬರುತ್ತಿದ್ದ ಅತಿಥಿಗಳನ್ನೂ, ಬಹಳ ಕಷ್ಟಕರವಾದ ಊಂಛ (ಭಿಕ್ಷಾ) ವೃತ್ತಿಯಿಂದ ಸಾಕಿದರು. ಹಾಡು, ಭಜನೆಗಳನ್ನು ಹಾಡುತ್ತಾ ಬೀದಿಯಲ್ಲಿ ಹೋಗುವಾಗ ಮನೆಯವರು ಬಂದು ಆಹಾರ ಪದಾರ್ಥಗಳನ್ನು ನೀಡುತ್ತಿದ್ದರು. ಇದನ್ನು ಅವರು ತಮ್ಮ "ಎನ್ನಾಳ್ಳು ತಿರುಗೇದಿ" ಎಂಬ ಕೃತಿಯಲ್ಲಿ ಸೂಚಿಸಿದ್ದಾರೆ. ಒಂದು ಬಾರಿ ಅರಮನೆಯ ಅಧಿಕಾರಿಗಳು ತ್ಯಾಗರಾಜರ ಸಂಗೀತವನ್ನು ಮಹಾರಾಜರು ಕೇಳ ಬಯಸುತ್ತಾರೆಂದೂ ರಾಜನನ್ನು ಹೊಗಳಿ ಒಂದೆರಡು ಕೃತಿಗಳನ್ನು ರಚಿಸಿ ಹಾಡಬೇಕೆಂದೂ ಅವರಿಗೆ ಸಾಕಷ್ಟು ಭೂಮಿಯನ್ನು, ಚಿನ್ನವನ್ನೂ ಬಹುಮಾನವನ್ನಾಗಿ ನೀಡಲಾಗುವುದೆಂದೂ ಸೂಚನೆ ನೀಡಿದರು. ಇದರಿಂದ ತ್ಯಾಗ ರಾಜರಿಗೆ ಕೋಪ ಬಂದಿತು . ಈ ಆಹ್ವಾನವನ್ನು ತ್ಯಾಗರಾಜರು ನಿರಾಕರಿಸಿದರು. ಕಲ್ಯಾಣಿ ರಾಗದ ದ "ನಿಧಿ ಚಾಲ ಸುಖಮಾ" ಎಂಬ ಕೃತಿಯಲ್ಲಿ ಇದನ್ನು ಸೂಚಿಸಿದ್ದಾರೆ.

### ತ್ಯಾಗರಾಜರ ಕೃತಿಗಳು :

ತ್ಯಾಗರಾಜರು ಸಂಸ್ಕೃತ ಮತ್ತು ತೆಲುಗು ಭಾಷೆಗಳಲ್ಲಿ ಪ್ರಕಾಂಡ ಪಾಂಡಿತ್ಯವನ್ನು ಪಡೆದಿದ್ದರು. ಅನೇಕ ಸಂಗೀತ ಶಾಸ್ತ್ರ ಗ್ರಂಥಗಳನ್ನು ಅಭ್ಯಾಸ ಮಾಡಿ ಅರಗಿಸಿಕೊಂಡಿದ್ದರು. ರಾಮಾಯಣ ಅವರಿಗೆ ಕರಾತಲಮಲಕವಾಗಿತ್ತು. ಇದರಿಂದಾಗಿಯೇ ಅವರ ಕೃತಿಗಳು, ಭಕ್ತಿ, ಜ್ಞಾನ ವೈರಾಗ್ಯ ಸಹಿತವಾಗಿದ್ದು ಸುಭಗತೆ, ಮಾಧುರ್ಯ, ಸರಳತೆಯಿಂದ ಕೂಡಿವೆ. "ವಿದುಲಕು ಮೊಕ್ಕೆದ", "ಸಂಗೀತ ಜ್ಞಾನಮು" ಕೃತಿಗಳಲ್ಲಿ ಅನೇಕ ಸಂಗೀತ ಗ್ರಂಥಗಳನ್ನು ಉಲ್ಲೇಖಿಸಿದ್ದಾರೆ. ತ್ಯಾಗರಾಜರು ರಚಿಸಿದ ಒಂದು ಸಾವಿರಕ್ಕೂ ಹೆಚ್ಚು ಕೃತಿಗಳು ದೊರಕಿವೆ. ಅವರ ಕೃತಿಗಳನ್ನು ಬಹು, ಸರಳ, ಮಧ್ಯಮ, ಕಷ್ಟ, ಬಹಳ ತೊಡಕಿನದು ಎಂದು ಐದು ರೀತಿಯಾಗಿ ಕೆಲವು ವಿದ್ವಾಂಸರು ವರ್ಗೀಕರಿಸಿದ್ದಾರೆ. ಕೃತಿಗಳ ಸಾಹಿತ್ಯವನ್ನು ಅನುಲಕ್ಷಿಸಿ, ಉಪದೇಶಕ, ನೀತಿ ಬೋಧಕ, ಅಭಿವಾದನದ ಕೃತಿಗಳು, ಸ್ವಗತವಾದ ಮನೋ ಬೋಧೆಯ ಕೃತಿಗಳು, ಪಶ್ಚಾತ್ತಾಪದ ಕೃತಿಗಳು, ಸಂಗೀತದ ಮಹತ್ವವನ್ನು ಪ್ರಶಂಸೆ ಮಾಡಿದ ಕೃತಿಗಳು ಎಂದೂ ವಿಂಗಡಿಸಲಾಗಿದೆ. ಭಕ್ತಿ ರಸವನ್ನು ಸೂಸುವ ಕೃತಿಗಳನ್ನು ಉತ್ಸವ ಸಂಪ್ರದಾಯದ ಕೃತಿಗಳು ಎಂದು ಕರೆಯಲಾಗುತ್ತದೆ. ದೇವರನ್ನು ಪೂಜಿಸುವಾಗ ಅನುಸರಿಸುವ ಷೋಡಷೋಪಚಾರವನ್ನು ಕುರಿತ ಕೀರ್ತನೆಗಳನ್ನೂ ತಾಗ್ಯರಾಜರು ರಚಿಸಿದ್ದಾರೆ.

ತ್ಯಾಗರಾಜರು ರಚಿಸಿರುವ "ಜಗದಾನಂದ ಕಾರಕ", "ದುಡುಕುಗಲ","ಸಾಧಿಂಚೆನೇ" ಎಂದರೋ ಮಹಾನು ಭಾವಲು", ಕನಕನ ರುಚಿರ" ಈ ಐದು ಕೃತಿಗಳನ್ನು ಪಂಚ

ರತ್ನ ಕೃತಿಗಳು ಎನ್ನುತ್ತಾರೆ. ನಾಟ, ಗೌಳ, ಆರಭಿ, ಶ್ರೀರಾಗ ಮತ್ತು ವರಾಳಿ ಈ ರಾಗಗಳನ್ನು ಘನರಾಗ ಪಂಚಕವೆಂದು ಹೇಳುತ್ತಾರೆ. ಈ ಐದು ರಾಗಗಳಲ್ಲಿ ರಚಿಸಿರುವ ಮೇಲ್ಕಂಡ ಕೃತಿಗಳನ್ನು ಪಂಚರತ್ನ ಕೃತಿಗಳೆಂದು ಹೇಳುತ್ತಾರೆ. ಇದನ್ನು ತ್ಯಾಗರಾಜರ ಆರಾಧನೆಯ ಸಮಯದಲ್ಲಿ ತಪ್ಪದೇ ಹಾಡಲಾಗುತ್ತದೆ. ತ್ಯಾಗರಾಜರು ತಮ್ಮ ಕೃತಿಗಳಲ್ಲಿ 'ತ್ಯಾಗರಾಜ' ಎಂಬ ಸ್ವನಾಮ ಮುದ್ರಿಕೆ ಅಥವಾ ಅಂಕಿತವನ್ನು ಸೂಕ್ತವಾದ ಪ್ರತ್ಯಯಗಳನ್ನು ಸೇರಿಸಿ ನಾನಾ ರೂಪದಲ್ಲಿ ಬಳಸಿದ್ದಾರೆ. ತ್ಯಾಗರಾಜನುತ, ತ್ಯಾಗರಾಜ ವಿನುತ. ತ್ಯಾಗರಾಜುನಿ ಹೃದಯ, ತ್ಯಾಗರಾಜ ಹೃದಯಾಲ, ತ್ಯಾಗರಾಜ ಪೂಜಿತ ಈ ರೀತಿಯಾಗಿ ಅನೇಕ ಅಂಕಿತಗಳನ್ನು ಬಳಸಿದ್ದಾರೆ. ತ್ಯಾಗರಾಜರು ಸೀತಾ ರಾಮ ವಿಜಯಂ, ಪ್ರಹ್ಲಾದ ಭಕ್ತ ವಿಜಯಂ, ನೌಕಾ ಚರಿತ್ರೆ ಎಂಬ ಮೂರು ಗೇಯ ನಾಟಕ ಅಥವಾ ಗೀತೆ ನಾಟಕಗಳನ್ನು ರಚಿಸಿದ್ದಾರೆ. ತ್ಯಾಗರಾಜರನ್ನು ಸಂಗೀತ ನಾಟಕದ ಪಿತಾಮಹರೆಂದು ಹೇಳಬಹುದು.

**ತ್ಯಾಗರಾಜರ ಕೊನೆಯ ದಿನಗಳು :**

ತ್ಯಾಗರಾಜರು ಪರಮದೈವಭಕ್ತರು, ವೈರಾಗ್ಯ ಮೂರ್ತಿಯೂ ಆಗಿದ್ದರಿಂದ ಅವರಿಗೆ ತಮ್ಮ ಅಂತಿಮ ದಿನದ ಬಗ್ಗೆ ತಿಳಿದಿತ್ತು. ತ್ಯಾಗರಾಜರು ಪರಾಭವ ಸಂವತ್ಸರದ ಪುಷ್ಯ ಬಹುಳ ಪಂಚಮಿ ಅಂದರೆ ಜನವರಿ 6,1847ರಲ್ಲಿ ಪರಂಧಾಮವನ್ನೈದಿದರು. ಪುಷ್ಯ ಶುದ್ಧ ಏಕಾದಶಿಯಂದು ರಾತ್ರಿಯ ಭಜನೆಯು ಮುಗಿದ ಮೇಲೆ, ಸುತ್ತಲೂ ನೆರೆದಿದ್ದ ತಮ್ಮ ಶಿಷ್ಯ ಸಭಾ ಮಂಡಲಿಯನ್ನು ಉದ್ದೇಶಿಸಿ, ಪುಷ್ಯ ಬಹುಳ ಪಂಚಮಿಯೆಂದು ಒಂದು ಅದ್ಭುತ ನಡೆಯಲ್ಲಿದೆ. ತಾವೆಲ್ಲರೂ ಆ ದಿನ ಬರ ಬೇಕೆಂದು ಹೇಳಿದರು. ಪುಷ್ಯ ಶುದ್ಧಚೌತಿಯ ದಿನ ತಮಗೆ ಸನ್ಯಾಸ ದೀಕ್ಷೆ ನೀಡುವಂತೆ ಪರಮಹಂಸ ಬ್ರಹ್ಮಾನಂದ ಸ್ವಾಮಿಗಳಲ್ಲಿ ವಿನಂತಿ ಮಾಡಿದರು. ತ್ಯಾಗರಾಜರು ಈಗಾಗಲೇ ಜೀವನ್ಮುಕ್ತರಾಗಿರುವುದರಿಂದ ಅವರಿಗೆ ಸನ್ಯಾಸದ ಅಗತ್ಯ ಇಲ್ಲವೆಂದು ಸ್ವಾಮಿಗಳು ಹೇಳಿದರು. ಆದರೂ ತ್ಯಾಗರಾಜರ ಪ್ರಾರ್ಥನೆಯಂತೆ ಸನ್ಯಾಸ ದೀಕ್ಷೆಯನ್ನು ನೀಡಿ ಅವರಿಗೆ "ನಾದಬ್ರಹ್ಮಾನಂದ" ಎಂಬ ಆಶ್ರಮ ನಾಮವನ್ನು ನೀಡಿದರು. ಮಾರನೆಯ ದಿನ ಪಂಚಮಿಯಂದು ತ್ಯಾಗರಾಜರು "ಪರಮಾತ್ಮುಡು" 'ಪರಿತಾಪಮು" ಎಂಬ ಎರಡು ಕೃತಿಗಳನ್ನು ರಚಿಸಿ ಮನದುಂಬಿ ಹಾಡಿ, ಯೋಗಸಮಾಧಿಯಲ್ಲಿ ಕುಳಿತರು. ಸ್ವಲ್ಪ ಹೊತ್ತಿನಲ್ಲಿ ಅವರ ನೆತ್ತಿಯಿಂದ ಒಂದು ಹೊಳೆವ ಬೆಳಕಿನ ಪ್ರಕಾಶವು ಹೊರಟು ಉತ್ತರ ದಿಕ್ಕಿಗೆ ಹೋಗಿ ಆಗಸದಲ್ಲಿ ಲೀನವಾಯಿತು. ಅವರ ಪಾರ್ಥಿವ ಶರೀರವನ್ನು ಕಾವೇರಿ ತೀರದಲ್ಲಿದ್ದ ಅವರ ಗುರು ಸೊಂಟಿ ವೆಂಕಟರಮಣ ಆಯ್ಯರ್ ಅವರ ಸಮಾಧಿಯ ಪಕ್ಕದಲ್ಲಿಯೇ ಸಮಾಧಿ ಮಾಡಲಾಯಿತು. ತ್ಯಾಗರಾಜರ ಶಿಷ್ಯ ಪರಂಪರೆಯ ಸೂಲಮಂಗಲ ವೈದ್ಯನಾಥ ಭಾಗವತರಿಗೆ ಒಂದು ಬಾರಿ ತ್ಯಾಗರಾಜರ ಸಮಾಧಿಯಿಂದ ರಾಮ ರಾಮ ಎಂಬ ಶಬ್ದವು ಹೊರಟದ್ದು ಕೇಳಿಸಿತಂತೆ.

**ತ್ಯಾಗರಾಜರ ಆರಾಧನೆ :**

ತ್ಯಾಗರಾಜರ ಸಮಾಧಿಯ ಮೇಲೆ ಒಂದು ವೃಂದಾವನವನ್ನು ನಿರ್ಮಿಸಲಾಯಿತು. ತಾವು ಸಿದ್ಧಿ ಪಡೆದ 60 ವರ್ಷಗಳ ಮೇಲೆ ತಮ್ಮ ಕೀರ್ತಿಯು ಹರಡುವುದೆಂದು ತ್ಯಾಗರಾಜರು ತಮ್ಮ ಶಿಷ್ಯರಿಗೆ ತಿಳಿಸಿದ್ದರು. ಆದರಂತೆ 1907 ರಿಂದ ಅವರ ಸಮಾಧಿ ಪೂಜೆಯು ಹೊಸ ರೂಪದಲ್ಲಿ ನಡೆಯತೊಡಗಿತು. ಮುಂದೆ ಕಾಲಕಾಲಕ್ಕೆ ನಾನಾ ಕಾರಣಗಳಿಂದ ತ್ಯಾಗರಾಜರ ಆರಾಧನೆಯಲ್ಲಿ ಬದಲಾವಣೆಗಳಾದವು. 1920 ರಲ್ಲಿ ತ್ಯಾಗರಾಜರ ಪರಮ ಭಕ್ತೆಯಾದ ಬೆಂಗಳೂರು ನಾಗರತ್ನಮ್ಮನವರು ತಮ್ಮ ಸಮಸ್ತ ಆಸ್ತಿಯನ್ನೂ ಮಾರಿ ಅದರಿಂದ ಬಂದ ಹಣದಿಂದ ತ್ಯಾಗರಾಜರ ಸಮಾಧಿಯ ಮೇಲೆ ಭವ್ಯವಾದ ಮಂದಿರವನ್ನು ನಿರ್ಮಿಸಿದರು. ಅದು 1925 ರಲ್ಲಿ ಪೂರ್ಣಗೊಂಡಿತು. 1926 ರಿಂದ ಬೆಂಗಳೂರು ನಾಗರತ್ನಮ್ಮನವರೇ ತಿರುವೈಯಾರಿನಲ್ಲಿ ತ್ಯಾಗರಾಜರ ಉತ್ಸವವನ್ನು ಆಚರಿಸತೊಡಗಿದರು. ಕೊನೆಗೆ 1940 ರಲ್ಲಿ ಶ್ರೀ ತ್ಯಾಗಬ್ರಹ್ಮೋತ್ಸವ ಸಭೆಯ ಆಸ್ತಿತ್ವಕ್ಕೆ ಬಂದಿತು. ಪ್ರತಿ ವರ್ಷ ಜನವರಿ ತಿಂಗಳಲ್ಲಿ ಪುಷ್ಯ ಬಹುಳ ಪಂಚಮಿಯಂದು ತ್ಯಾಗರಾಜರ ಆರಾಧನಾ ಉತ್ಸವವನ್ನು ಬಹಳ ವೈಭವದಿಂದ ವಿಜೃಂಭಣೆಯಿಂದ ನಡೆಸಲಾಗುತ್ತಿದೆ. ದೇಶದಾದ್ಯಂತ ಇರುವ ಸಾವಿರಾರು ಕರ್ನಾಟಕ ಸಂಗೀತ ವಿದ್ವಾಂಸರು ಗಳು, ಶಿಷ್ಯ ಪರಂಪರೆಯವರು ತಿರುವೈಯಾರಿಗೆ ಬಂದು ತ್ಯಾಗರಾಜರ ಸಮಾಧಿಯ ಎದುರು ಕುಳಿತು ಭಕ್ತಿ ಭಾವನೆ ಯಿಂದ ಅವರ ಕೃತಿಗಳನ್ನು ಸಾಮೂಹಿಕವಾಗಿ ಹಾಡುತ್ತಾರೆ. ತ್ಯಾಗರಾಜ ಆರಾಧನಾಮಹೋತ್ಸವವು ಭಾರತದ ಅತ್ಯಂತ ಪ್ರಮುಖ ಸಂಗೀತೋತ್ಸವವಾಗಿದೆ.





## ಜನವರಿ ತಿಂಗಳ

# ರಾಶಿ ಫಲಗಳು



ಮೂಲ- ಬ್ರಹ್ಮಶ್ರೀ ತಂಗಿರಾಲ ವೆಂಕಟಕೃಷ್ಣ ಪೂರ್ಣಪ್ರಸಾದ್ ಸಿದ್ಧಾಂತಿ

ಅನುವಾದ- ಕೆ.ಎನ್.ಎಸ್

**ಮೇಷ**

ಸವಂತ್ಸರಾರಂಭದಲ್ಲಿ ನೂತನ ವಸ್ತ್ರಾಭರಣಗಳಿಂದ ಆನಂದವಾಗಿರುತ್ತೀರಿ. ನಾಯಕತ್ವ ಮತ್ತು ಹೋರಾಟದ ಗುಣವನ್ನು ಪ್ರದರ್ಶಿಸಿ ಕೆಲಸಗಳನ್ನು ಚಾಕುಚಕ್ಯತೆಯಿಂದ ಚೊಕ್ಕಟವಾಗಿ ನಿರ್ವಹಿಸುವಿರಿ. ಸಂತಾನ ವಿಷಯದಲ್ಲಿ ಸಂತೋಷ. ಭೂಗೃಹ ಸ್ಥಿರಾಸ್ತಿಗಳ ಪಲ್ಲಟದಿಂದ ನಿಮಗೆ ಅನುಕೂಲವಾಗಲಿದೆ. ಆಸ್ತಿ ವಿವಾದಗಳಲ್ಲಿ ಪರಿಷ್ಕಾರಸಿಗಲಿದೆ. ಜನ್ಮರಾಶಿಯ ರಾಹುವಿನ ದುಷ್ಪರಿಣಾಮಗಳನ್ನು ಎದುರಿಸಲು ಶ್ರೀವೇಂಕಟೇಶ್ವರ ಸುಪ್ರಭಾತ, ದುರ್ಗಾ ಪ್ರಾರ್ಥನೆಯನ್ನು ಮಾಡ ತಕ್ಕದ್ದು.

**ವೃಷಭ**

ಸಹೋದರರ ಸಹಾಯ ಸಹಕಾರಗಳು ಸಂಪೂರ್ಣವಾಗಿರುತ್ತವೆ. ಕೆಂಪು ಭೂಮಿ ಸಂಘದಿಂದ ಗೌರವ, ದೃಢತೆಯಿಂದ ವ್ಯವಹರಿಸುತ್ತಾ ಭೂಗೃಹ ಸ್ಥಿರಾಸ್ತಿಗಳ ಮೇಲೆ ಅಧಿಪತ್ಯವುಂಟಾಗಿ ವಿಲಾಸ ಜೀವನವನ್ನು ನಡೆಸುತ್ತಿದ್ದೀರಿ. ಬಹಳ ಗೌರವ, ಪ್ರತಿಷ್ಠೆ ಮತ್ತು ಸಮಾಜದಲ್ಲಿ ಸ್ಥಾನ ಸಂಪಾದನೆ ಮಾಡುತ್ತೀರಿ. ನೀವು ಮಾಡುವ ಪ್ರತಿಯೊಂದು ಪ್ರಯತ್ನವನ್ನು ನಿಮ್ಮ ಸ್ವಯಂ ಕೃಷಿಯಿಂದ ಸಾಧಿಸುತ್ತಿರೀ. ಆದಾಯವು ಸಹಾ ವೃದ್ಧಿಸುತ್ತದೆ ಮತ್ತು ವ್ಯಾಪಾರದಲ್ಲಿ ಲಾಭವು ಹೊಂದುವ ಅವಕಾಶವಿದೆ.

**ಮಿಥುನ**

ಪ್ರತಿಕೂಲಕರವಾದ ಧೋರಣೆಗಳನ್ನು ಕಡಿಮೆ ಮಾಡಿಕೊಳ್ಳುವುದು ಒಳಿತು. ಆರ್ಥಿಕವಾಗಿ ಉಲ್ಲಾಸಭರಿತರಾಗಿರುವಿರಿ. ಉದ್ಯೋಗ ವೃತ್ತಿ - ವ್ಯವಹಾರಗಳು ಕೂಡಿ ಬರುತ್ತದೆ. ಭೂಮಿ ಖರೀದಿ - ಮಾರಾಟಗಳಲ್ಲಿ ಭಾಗ್ಯೋದಯ ವ್ಯವಸಾಯ ಮಾಡುವವರಿಗೆ ಸಮಯ ಅನುಕೂಲಕರವಾಗಿದೆ. ವ್ಯಾಪಾರಿಗಳಿಗೆ ಧನಲಾಭವಿದೆ. ಸಂತಾನ ವಿಷಯದಲ್ಲಿ ಜಾಗರೂಕತೆ ಅವಶ್ಯಕ. ಮಾಸಾಂತ್ಯದಲ್ಲಿ ಶನಿಗ್ರಹ ಅಷ್ಟಮ ರಾಶಿಯಿಂದ ಮುಂದೆ ಸಾಗುವುದರಿಂದಾಗಿ ವ್ಯವಹಾರ ಪ್ರತಿಬಂಧಕಗಳು ತೊಲಗುತ್ತವೆ. ಶರೀರ ಬಾಧೆಗಳು ತೊಲಗುತ್ತದೆ.

**ಕರ್ಕಾಟಕ**

ಪ್ರಯಾಣವು ಮಿಶ್ರಿತ ಫಲಗಳನ್ನು ಕೊಡುತ್ತದೆ. ವಿದ್ಯಾರ್ಥಿಗಳು ಪ್ರತಿಭೆ ಪ್ರದರ್ಶಿಸಿ ವಿಜಯವನ್ನು ಸಾಧಿಸುತ್ತಾರೆ. ವಿದ್ಯೆಯ ವಿಷಯಗಳಲ್ಲಿ ವಿಶೇಷ ಕೃಷಿ ಮಾಡುತ್ತಾರೆ . ಆರೋಗ್ಯ ವಿಷಯದಲ್ಲಿ ಉಪಶಮನ ಹೊಂದುತ್ತಾರೆ. ಸಂತೋಷಕರವಾದ ಹಾಗೂ ಅದೃಷ್ಟಕರವಾದ ಜೀವನವನ್ನು ಅನುಭವಿಸುತ್ತಿದ್ದೀರಿ. ದೂರ ಪ್ರಯಾಣಗಳು ಒದಗಿ ಬರುತ್ತವೆ. ಶುಭಕಾರ್ಯ ನಿರ್ವಹಣೆಗೆ ಉಪಕ್ರಮಿಸುತ್ತೀರಿ.

**ಸಿಂಹ**

ವಾದ ಪ್ರತಿವಾದಗಳಿಂದ ದೂರವಾಗಿರುವುದು ಒಳ್ಳೆಯದು. ವಿನೋದಗಳಿಗೆ ಧನ ವ್ಯಯ. ವಸ್ತ್ರ, ಧನ ಲಾಭಗಳು, ವಿದ್ಯಾ - ವಿನೋದಗಳಿಂದ ಆನಂದವುಂಟಾಗಲಿದೆ. ಕ್ರೀಡೆಗಳೂ ಸಹಾ ಕೂಡಿ ಬರುವುವು. ತಿಳುವಳಿಕೆಯಿಂದ ಕಾರ್ಯ ಜಯ, ತೀರ್ಥಯಾತ್ರೆ, ಸಂದರ್ಶನ ಗಳಿಂದ ಉದ್ಯೋಗ ಜೀವನದಲ್ಲಿ ಸಮಸ್ಯೆಗಳಿಂದ ಸ್ವಲ್ಪ ಮಾನಸಿಕ ಒತ್ತಡ ಅಧಿಕವಾಗಲಿದೆ. ಹನುಮಾನ್ ಚಾಲೀಸ ನಿತ್ಯ ಪಠಿಸುವುದು ಒಳಿತು.

**ಕನ್ಯ**

ಪ್ರಮಾಣದಲ್ಲಿ ಜಾಗರೂಕರಾಗಿರುವುದು ಒಳಿತು. ಮಾರ್ಗ ವಿರೋಧ ವಿರಬಹುದು. ದೂರ ಪ್ರಯಾಣಗಳನ್ನು ಮುಂದೂಡುವುದು ಅಗತ್ಯ ಹಲವು ಮಾನಸಿಕ ಉದ್ಯೋಗಗಳ ಆಂದೋಲನಗಳಿರುತ್ತವೆ. ಭೂಮಿ ಮತ್ತು ಆಸ್ತಿ ವಿಷಯಗಳಲ್ಲಿ ಕೂಡಾ ಸಮಸ್ಯೆಗಳು ತೊಲಗಿ ಭೂವ್ಯವಹಾರಗಳಲ್ಲಿ ಅಧಿಕ ಲಾಭವನ್ನು ಪಡೆಯುವಿರಿ. ವಿದ್ಯಾರ್ಥಿಗಳು ಉನ್ನತ ಸ್ಥಾನಕ್ಕೇರುವಿರಿ. ನಿಮ್ಮ ಪ್ರಯತ್ನಕ್ಕನುಗುಣವಾಗಿ ಆದಾಯವು ಸಹಾ ತಕ್ಕದ್ದಾಗಿರುತ್ತದೆ. ವೃತ್ತಿ - ವ್ಯಾಪಾರಗಳಲ್ಲಿ ಅನುಕೂಲವಾಗುತ್ತದೆ.

**ತುಲಾ**

ಅಷ್ಟಮ ಸ್ಥಾನದಲ್ಲಿ ಕುಜನ ಸಂಚಾರ ಅನುಕೂಲಕರವಲ್ಲ, ಧನ ಸೋರಿಕೆ, ಧನವ್ಯಯದ ಮೇಲೆ ನಿಯಂತ್ರಣವಿರದೆ ತಾಪತ್ರಯಗಳುಂಟಾಗಲಿವೆ. ಆದಾಯ ಮಾರ್ಗಗಳೇರ್ಪಡಲಿವೆ. ಬಂಧು ಮಿತ್ರರೊಂದಿಗೆ ಆನಂದವಾಗಿ ಕಾಲ ಕಳೆಯು ವಿರಿ. ದೈವಭಕ್ತಿ ವೃದ್ಧಿಯಾಗಲಿದೆ. ಆಧ್ಯಾತ್ಮಿಕ ಜೀವನವನ್ನು ಸಹಾ ಅನುಭವಿಸುವಿರಿ. ಧೈರ್ಯವಾಗಿ ತೊಂದರೆಗಳನ್ನು ಒತ್ತಿ ವಿಜಯವನ್ನು ಸಾಧಿಸುವಿರಿ.

**ವೃಶ್ಚಿಕ**

ಮೋಜು ಮಸ್ತಿಗಾಗಿ ಅಧಿಕ ಹಣ ವ್ಯಯಿಸುತ್ತೀರಿ. ಪುರಾತನ ಬಂಧುಗಳು ಬರದೇ ಮಿತ್ರರೊಂದಿಗೆ ಬೆರೆಯುವಿಕೆಯಿಂದ ಸ್ನೇಹ ಭಾವ ವೃದ್ಧಿಯಾಗಲಿದೆ.ಎಲ್ಲಾ ಕ್ಷೇತ್ರಗಳಲ್ಲೂ ಅಭಿವೃದ್ಧಿಯನ್ನು ಅನುಭವಿಸಲಿದ್ದೀರಿ. ಆರೋಗ್ಯ ವಿಚಾರದಲ್ಲಿ ಬಹಳ ಜಾಗರೂಕರಾಗಿರಬೇಕು. ಎದೆ, ರಕ್ತ ಸೆಳೆತ, ಇಲ್ಲವೇ ರಕ್ತಸ್ರಾವ ತಲೆನೋವು ಮತ್ತು ಕಣ್ಣಿಗೆ ಸಂಬಂಧಿಸಿದ ಹಲವು ಸಮಸ್ಯೆಗಳಿಗೆ ಪರಿಹಾರವಾಗಿ ಯೋಗಾಭ್ಯಾಸ ಮಾಡುವುದು ಉತ್ತಮ.

**ಧನಸ್ಸು**

ನೂತನ ಪರಿಚಯಗಳು, ಮೋಜು - ಮಸ್ತಿಗಳಲ್ಲಿ ಪಾಲ್ಗೊಳ್ಳುವಿರಿ. ವಿದ್ಯೆಯ ವಿಷಯಗಳಲ್ಲಿ ಶ್ರದ್ಧೆಯನ್ನು ತೋರಿಸಿ ಭವಿಷ್ಯಕ್ಕಾಗಿ ಬುನಾದಿಯನ್ನು ಹಾಕುವಿರಿ. ಪ್ರತಿಭಾಪುರಸ್ಕಾರಗಳನ್ನು ಗೆಲ್ಲುವಿರಿ. ಬಹುಮಾನಗಳನ್ನು ಪಡೆಯುವಿರಿ. ಸಂಪತ್‌ವೃದ್ಧಿಯಾಗುತ್ತದೆ. ವ್ಯವಹಾರಗಳನ್ನು ಪರಿಷ್ಕರಿಸಿಕೊಂಡು ಅನುಕೂಲವಾಗಿ ಮಾರ್ಪಾಡು ಮಾಡಿಕೊಳ್ಳಬಹುದು. ಆರೋಗ್ಯದ ಕಡೆ ಗಮನ ಕೊಡುವುದು ಅಗತ್ಯ.

**ಮಕರ**

ಭೋಗ -ಭಾಗ್ಯಗಳನ್ನು ಅನುಭವಿಸುವಿರಿ. ಶ್ರಮಕ್ಕೆ ತಕ್ಕ ಪ್ರತಿಫಲ ದೊರಕುತ್ತದೆ. ಕಲ್ಯಾಣ ಮುಂತಾದ ಶುಭಯೋಗಗಳು ಬರಲಿವೆ. ನಿಮ್ಮನ್ನು ಎಲ್ಲರೂ ಮೆಚ್ಚಿಕೊಳ್ಳುತ್ತಾರೆ. ಧೈರ್ಯದಿಂದ ಇರುವುದು ಒಳಿತು. ವ್ಯವಹಾರದಲ್ಲಿ ಜಯವುಂಟಾಗಲಿದೆ. ಸೂರ್ಯಾರಾಧನೆ ಉತ್ತಮ ಆರೋಗ್ಯ ಚೆನ್ನಾಗಿರುತ್ತದೆ.

**ಕುಂಭ**

ಮಕ್ಕಳಿಂದ ಶುಭವಾರ್ತೆ ಕೇಳಿಬರಲಿದೆ. ಸಮಸ್ತ ಸಂಪದಗಳು ಪ್ರಗತಿ ಕಾಣಲಿದೆ. ಕುಟುಂಬ ವಾತಾವರಣ ಅನುಕೂಲಕರವಾಗಿರುತ್ತದೆ. ಆರೋಗ್ಯವೃದ್ಧಿಸಲಿದೆ. ಉದ್ಯೋಗ ವಿಷಯಗಳಲ್ಲಿ ಪ್ರಮೋಷನ್, ಮೇಲಿನವರಿಂದ ಪ್ರಶಂಸೆ ಬರಲಿದೆ ನಿಮ್ಮ ಕಾರ್ಯನ್ನು ಎಲ್ಲರೂ ಮೆಚ್ಚುತ್ತಾರೆ. ವ್ಯಾಪಾರವೂ ಸಹ ಲಾಭದಾಯಕವಾಗಿರುತ್ತದೆ. ಮತ್ತು ಆದಾಯದ ಮೂಲಗಳು ಹೆಚ್ಚುತ್ತವೆ. ಪರಿಸರ ಲಾಭದಾಯಕವಾಗಿರಲಿದೆ. ಆರ್ಥಿಕವಾಗಿಯೂ ಕುಟುಂಬ ಪರವಾಗಿ ಮುನ್ನಡೆಯುವಿರಿ.

**ಮೀನ**

ಧೈರ್ಯ ಸಾಹಸಗಳನ್ನು ಪ್ರದರ್ಶಿಸಿ ಅತ್ಯುನ್ನತವಾದ ಅವಾರ್ಡುಗಳನ್ನು ಪಡೆಯುವಿರಿ ಹಾಗೆಯೇ ಕ್ರೀಡೆಗಳಲ್ಲೂ ಸಹ ಸಾಧನೆಗೈಯುವಿರಿ. ಶಾರೀರಿಕ ಸಾಮರ್ಥ್ಯವುಂಟಾಗಲಿದೆ. ನೂತನ ಉದ್ಯೋಗಗಳಲ್ಲಿ ಏಳಿಗೆಯಾಗಲಿದೆ. ಧನಪ್ರಾಪ್ತಿಯಾಗಲಿದೆ.ಸ್ಥಾನಪಲ್ಲಟವಾಗಲಿದೆ. ಜನ್ಮ ರಾಶಿಯಲ್ಲಿ ಗುರುವು ಸ್ವಲ್ಪ ಶಾರೀರಿಕ ಸಮಸ್ಯೆಗಳನ್ನು ತರಬಹುದಾದರೂ ಎಲ್ಲವನ್ನು ಎದುರಿಸಿ ದೈವಬಲದಿಂದ ಮುನ್ನಡೆಯುವಿರಿ ಧನವೃದ್ಧಿಯಾಗಲಿದೆ. ಬಂಧು ಮಿತ್ರರ ಸಹಾಯ ಲಭಿಸಲಿದೆ. ಆರ್ಥಿಕವಾಗಿ ಮುಂಬರುವಿರಿ.



# ವೀರನಾರಾಯಣನ ಪ್ರೇಮ ಕಿಂಕರ ಕುಮಾರವ್ಯಾಸ

ಶ್ರೀಮತಿ. ವಾಣಿಶ್ರೀ ಬಿ.ಎಂ.
94803 22475

ಭಾರತೀಯರ ರಾಷ್ಟ್ರೀಯ ಮಹಾಕಾವ್ಯ ಮಹಾಭಾರತ. ಆರ್ಯ ಸಂಸ್ಕೃತಿಯ ರಾಜ ಮನೆತನದಲ್ಲಿ ದಾಯಾದಿಗಳು ಭೂಮಿಗಾಗಿ, ಅಧಿಕಾರಕ್ಕಾಗಿ ನಡೆಸಿದ ಯುದ್ಧದ ಕಥೆ. ಈ ಕಥೆಯು ಮಹಾಕೃತಿಯಾಗಿ ಭಾರತೀಯರ ಬದುಕಿನ ಮೇಲೆ ಅಗಾಧವಾದ ಪರಿಣಾಮವನ್ನು ಬೀರಿದೆ. ವೈದಿಕ ಕೃತಿಯಾದ ಇದನ್ನು ಜೈನರು ತಮ್ಮ ಮತಕ್ಕೆ ಅನುಗುಣವಾಗಿ ಜೈನೀಕರಿಸಿದರು. ನಂತರ ಬಂದ ವೀರಶೈವರು 'ಭಾರತ ಪುರಾಣ ಗೋತ್ರಕ್ಕೆ ಮಾರಿ' ಎಂದು ಅದನ್ನು ಗಮನಿಸಲೂ ಇಲ್ಲ. ನಿಜವಾದ ವ್ಯಾಸ ಭಾರತ 15 ನೆಯ ಶತಮಾನದವರೆಗೆ ಜೈನ,ವೀರಶೈವ ಸಾಹಿತ್ಯ ಘಟ್ಟಗಳಲ್ಲಿ ಕನ್ನಡದಲ್ಲಿ ಬರಲಿಲ್ಲ. ಈ ಕೊರತೆಯನ್ನು ನೀಗಿಸಲು ಸಮರ್ಥನಾದ ವೈದಿಕ ಕವಿಯನ್ನು ವೈದಿಕ ಮನಸ್ಸು ಎದುರು ನೋಡುತ್ತಿತ್ತು. ಅಂತಹ ಸಮಯದಲ್ಲಿ ಹುಟ್ಟಿ ಬಂದವನು ಕುಮಾರವ್ಯಾಸ.

12 ನೆಯ ಶತಮಾನದ ಶರಣ ಚಳುವಳಿ, 14 ನೆಯ ಶತಮಾನದ ರಾಜಕೀಯ ಸಾಂಸ್ಕೃತಿಕ ದಾಳಿಗೆ ಸಿಲುಕಿ ವೈದಿಕ ಧರ್ಮ ಮೂಲೆಗುಂಪಾಯಿತು.ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾಗಿ ಶಾಂತಿ ನೆಲೆಸಿತು. ಸಾಯಣಾಚಾರ್ಯ ವೇದಗಳಿಗೆ ಭಾಷ್ಯವನ್ನು ಬರೆದರೆ, ಕುಮಾರವ್ಯಾಸನು ಪಂಚಮ ವೇದವಾದ ಭಾರತವನ್ನು ಕನ್ನಡೀಕರಿಸಿದ. 10 ನೆಯ ಶತಮಾನ ವೀರಯುಗವಾದರೆ, 15 ನೆಯ ಶತಮಾನ ಭಕ್ತಿಯುಗವಾಯಿತು. ಆ ಕಾಲಕ್ಕೆ ಭಕ್ತಿ ಮೌಲ್ಯದ ಅಗತ್ಯವಿತ್ತು. ವೀರ ನಾರಾಯಣನ ಪ್ರೇಮದ ಕಿಂಕರ ನಾರಣಪ್ಪ ಈ ನಿರೀಕ್ಷೆಯನ್ನು ಪೂರೈಸಿದ. 1 ಲಕ್ಷ ಶ್ಲೋಕಗಳ ಮೂಲಕೃತಿಯನ್ನು 10 ಪರ್ವಗಳಲ್ಲಿ 8700 ಭಾಮಿನೀ ಷಟ್ಪದಿಯಲ್ಲಿ ರಚಿಸಿದ. ವ್ಯಾಸ ಭಾರತವನ್ನು ಅನುಸರಿಸಿದ್ದರೂ ತನ್ನ ಪ್ರತಿಭೆಯಿಂದ ಸ್ವೋಪಜ್ಞತೆಯನ್ನು ಮೆರೆದಿದ್ದಾನೆ.

ನಾರಣಪ್ಪನ ಜನ್ಮಸ್ಥಳ ಗದುಗಿನ ಕೋಳಿವಾಡ. ಈತನಿಗೆ ಯೋಗೀಂದ್ರ ಎಂಬ ಹೆಸರೂ ಇದ್ದುದಾಗಿ ತಿಳಿದು ಬರುತ್ತದೆ. ಕವಿ ತನ್ನ ಕಾವ್ಯದಲ್ಲಿ ತನ್ನ ಸ್ವಂತ ವಿವರಗಳನ್ನು ಹೇಳಿಕೊಂಡಿಲ್ಲ. ಶ್ರೀವೀರ ನಾರಾಯಣನು ಕನಸಿನಲ್ಲಿ ಕಾಣಿಸಿಕೊಂಡು ಉಪದೇಶಿಸಿದ ಪ್ರಕಾರ ಚಿರಂಜೀವಿಯಾದ ಅಶ್ವತ್ಥಾಮಾಚಾರ್ಯರ ದರ್ಶನ ಭಾಗ್ಯ ಪಡೆದು, ಅವರ ಪ್ರಸಾದ ಬಲದಿಂದ 10 ಪರ್ವಗಳನ್ನು ರಚಿಸಿದ್ದಾನೆ. "ವೀರ ನಾರಾಯಣನೆ ಕವಿ, ಲಿಪಿಕಾರ ಕುಮಾರವ್ಯಾಸ" ಎಂಬ ವಿನೀತಭಾವ ಕವಿಯದ್ದು. ಹಲಗೆ ಬಳಪ ಪಿಡಿಯದ, ಪದವಿಟ್ಟು ಅಳುಪದ ಅಗ್ಗಳಿಕೆ ಆತನದ್ದು. ಕಂಠ ಪತ್ರದ ಉಲುಹುಗೆಡದಂತೆ ಬರೆಯಲು ಸಮರ್ಥನಾದ ವನು ಕುಮಾರವ್ಯಾಸ.

ಕುಮಾರವ್ಯಾಸನು ಸಾಮಾನ್ಯ ಹಳ್ಳಿಯ ಪ್ರತಿಭೆ. ಅವನಲ್ಲಿ ನಗರದ ಶಿಷ್ಟಾಚಾರ ಇಲ್ಲ. ಯಾರ ಯಶೋದುಂದುಭಿ ಯನ್ನೂ ಮೊಳಗಿಸಲು ಕಾವ್ಯ ರಚಿಸಲಿಲ್ಲ. ಮಹಾಭಾರತವು ಸಕಲ ವೇದಗಳ ಸಾರವೆಂದೂ, ಅದರಲ್ಲಿ ಅನೇಕ ಪುರಾಣ ಶಾಸ್ತ್ರಗಳು ಅಡಗಿರುವವೆಂದು, ಅದನ್ನು ಓದುವುದರಿಂದ ಸಕಲ ಪಾಪಗಳೂ ಪರಿಹಾರವಾಗಿ ಮುಕ್ತಿ ದೊರಕುವುದೆಂಬ ನಂಬಿಕೆ ಅವನದ್ದು, ಅಂತಹ ಮಹಾಫಲ ಸಕಲರಿಗೂ ದೊರೆಯಲೆಂಬುದು ಕವಿಯ ಆಶಯ. ಕುಮಾರವ್ಯಾಸ ಭಾರತದ ವಾಚನವೆಂದರೆ ಹೊಸ ಭಾಷಾ ಲೋಕವನ್ನು ಪ್ರವೇಶಿಸಿದಂತೆ. ಕನ್ನಡ ಕಾವ್ಯಗಳಲ್ಲಿ ಸಹೃದಯನಿಗೆ ಭಿನ್ನ ಅನುಭವ ನೀಡುತ್ತಾನೆ ಕುಮಾರವ್ಯಾಸ. ಈ ಕೃತಿಯನ್ನು ಸಂಸ್ಕೃತಿಯ ನೆಲೆಯಲ್ಲಿ ಸೃಷ್ಟಿಸಿದ್ದಾನೆ. ಕುಮಾರವ್ಯಾಸನಿಗೆ ತಾನು ರಚಿಸಿದ ಕಾವ್ಯ ಸಾಮಾನ್ಯರಿಗಾಗಿ ಆದ್ದರಿಂದ ತಾನು ಬಳಸುವ ಭಾಷೆಯ ಅರಿವಿದೆ. ಕಲಿಯುವವರಿಗೂ ಈ ಕಾವ್ಯ ಕಾಮಧೇನುವೆನಿಸಿದೆ.

ಬೆಲೆಯಿಂದಕ್ಕುಮೇ ಕೃತಿ ? ಗಾವಿಲ
ಭುವನದ ಭಾಗ್ಯದಿಂದಕ್ಕು

ಎಂದಿದ್ದಾನೆ ನಯಸೇನ. ಕನ್ನಡ ನಾಡಿನ ಭಾಗ್ಯದಿಂದ ಕುಮಾರವ್ಯಾಸ ಉದಿಸಿ ಬಂದಿದ್ದಾನೆ. ಪ್ರತಿಭೆ, ಶಾಸ್ತ್ರಬಲ, ಗುರುವಿನ ಆಶೀರ್ವಾದ ಎಲ್ಲವೂ ಇದ್ದ ಕವಿ ಕುಮಾರವ್ಯಾಸ. 'ಕವಿ ವ್ಯಾಸನೆಂಬ ಗರ್ವವೆನಗಿಲ್ಲ' ಎಂಬ ವಿನಯ ಆತನದ್ದು. ಕೃಷ್ಣ ಕಥೆಯಾದ ಭಾರತವನ್ನು ಭಗವದರ್ಪಣ ಬುದ್ಧಿಯಿಂದ ರಚಿಸಿ, ಅದಕ್ಕೆ ಅತ್ಯಂತ ಜನಪ್ರಿಯತೆ ದೊರೆತಿದೆ. ಗದುಗಿನ ಭಾರತವು ಸರ್ವಜನಾದರಣೀಯವಾಗಿ ಮಾನ್ಯವಾಗಲು ಕುಮಾರವ್ಯಾಸನ ಪ್ರತಿಭೆಯೇ ಕಾರಣ. ಕಥೆಯ ವೈಶಿಷ್ಟ್ಯ, ಪಾತ್ರಗಳ ಚಿತ್ರಣ. ಅಲಂಕಾರಗಳ ಬಳಕೆ, ಆಡು ಮಾತಿಗೆ ಒಗ್ಗುವ ಭಾಮಿನೀ ಲಯ ಮೊದಲಾದವುಗಳಿಂದ ಕುಮಾರವ್ಯಾಸನ ಕಾವ್ಯ ಓದುಗರನ್ನು ಪ್ರೇಕ್ಷಕರನ್ನಾಗಿಸುತ್ತದೆ. ಪಂಚಮವೇದವಾದ ಈ ಕೃಷ್ಣ ಕಥೆಯು ಕಾವ್ಯ ಪ್ರತಿಭೆ, ಭಾಷಾ ಸಾಮರ್ಥ್ಯ, ಪಾತ್ರಗಳನ್ನು ಅರ್ಥೈಸುವ ರೀತಿಗಳಿಂದ ಶ್ರೇಷ್ಠ ಕಾವ್ಯವೆನಿಸಿದೆ. ಮಹಾಕವಿ ಕುಮಾರವ್ಯಾಸ ಕನ್ನಡ ಜನಮಾನಸದಲ್ಲಿ ವಿಶಿಷ್ಟವಾದ ಶಾಶ್ವತ ಸ್ಥಾನ ಪಡೆದಿದ್ದಾನೆ.

# ಸಂಸ್ಕೃತ ಕಲಿಯೋಣ...!!

## अष्टादशः पाठः
## ಇಪ್ಪತ್ತೊಂದನೆ ಪಾಠ

ರಚನೆ:- ಮಹಾ ಮಹೋಪಾಧ್ಯಾಯ ಕಾಶಿ ಕೃಷ್ಣಾಚಾರ್ಯ

युष्माकम् = ನಿಮ್ಮದು   यथा = ಅದರ ಮೂಲಕ/ಕೂಡಾ   अस्माकम् = ನಮ್ಮದು   रे, अरे = ಹೇ
तेषाम् = ಅವರದು   वृथा = ಸೌಜನ್ಯ / ಕಾಳಜಿ

भूतकालः = ಭೂತಕಾಲ

प्र. अखादत् = असादन्   म. अखादः = अखादत   उ. अखादम् = अखादाम
ತಿಂದೆ = ತಿಂದಿದ್ದೆ   ತಿಂದಿದ್ದೀರಿ/ ತಿಂದಿಯಾ - ತಿಂದಾಯ್ತು   ತಿಂದಿರಾ - ತಿಂದಿದ್ದೀರಾ

### ಪ್ರಶ್ನೆ

1. युस्माकं गृहे अद्य वयम् अन्नम् अखादाम।
2. अस्माकम् अत्र गृहमेव नास्ति।
3. सः यथा अखादत्, त्वम् अपि तथा अखादः।
4. यूयं तत्र वृथा किमर्थमास्त?
5. वयं तत्र वृथा नास्म।
6. किन्तु तेषां गृहे स्नानं कुर्मः।
7. रे बालक! त्वं वृथा मा एधि।
8. युष्मद्गृहे पाकः कियत्पर्यन्तम् आसीत्?
9. शाकमकुर्वन्, अन्नं कुर्वन्ति।
10. ते शीघ्रमखादन्।

### ಉತ್ತರ

1. ಅವರು ಒಳಗಡೆ ಇದ್ದಾರಾ ಅಥವಾ ಹೊರಗಡೆ ಇದ್ದಾರಾ?
2. ಅವರೆಲ್ಲರೂ ನಮ್ಮ ಮನೆಯಲ್ಲಿಯೇ ಇಲ್ಲಿಯವರೆಗೆ ಇದ್ದರು.
3. ನಾವು ಈಗಲೇ ಹಣ್ಣುಗಳನ್ನು ತಿಂದೆವು.
4. ತಮ್ಮ ಸಲುವಾಗಿಯೇ ಅವರೆಲ್ಲರೂ ಇಲ್ಲಿಯೇ ಇದ್ದಾರೆ
5. ನೀವು ಇಂದು ಸಾಯಂಕಾಲ ಏನನ್ನು ತಿಂದಿದ್ದೀರಿ?
6. ನಾನು ನಿಮ್ಮ ತಂಬಿಗೆಯಲ್ಲಿ ಪಲ್ಯೆಯನ್ನು ಇಟ್ಟಿದ್ದೇನೆ
7. ಇಲ್ಲಿಯವರೆಗೆ ಎಲ್ಲಿದ್ದೀರಿ?
8. ನಿಮ್ಮ ಮನೆಯಲ್ಲಿಯೇ ಅವರು ಇದ್ದಾರೆಯೋ?
9. ಹಾಗೆಯೇ ಅವರೆಲ್ಲರೂ ಯಾರು?
10. ನಿನ್ನೆ ಪ್ರಾತಃಕಾಲ ನಿಮ್ಮ ಮನೆಯಲ್ಲಿ ಇವರು ಸ್ನಾನವನ್ನು ಮಾಡಿದ್ದವರೂ ಅವರೇ ಇವರಲ್ಲವೋ !

### ಪ್ರಶ್ನೆ

1. ನಿಮ್ಮ ಮನೆಯಲ್ಲಿ ಇಂದು ನಾವು ಅನ್ನವನ್ನು ತಿನ್ನಬಹುದಾ?
2. ನಮಗೆ ಇಲ್ಲಿ ಮನೆಯೇ ಇಲ್ಲ
3. ಅವನು ಕೂಡ ತಿಂದಿದ್ದಾನೆ ನೀವು ಕೂಡ ಹಾಗೆಯೇ ತಿಂದಿದ್ದೀರಿ.
4. ತಾವು ಅಲ್ಲಿ ವೃಥಾ ಇಲ್ಲವಲ್ಲ?
5. ನಾವು ಅಲ್ಲಿ ಇರಲೇ ಇಲ್ಲ.
6. ಆದರೆ ಅವರ ಮನೆಯಲ್ಲಿ ಸ್ನಾನವನ್ನು ಮಾಡಿದೆವು
7. ಹೇ ಬಾಲಕ! ನೀನು ವೃಥಾ ದುಃಖಿತನಾಗಿದ್ದ
8. ನಿಮ್ಮ ಮನೆಯಲ್ಲಿ ಅಡುಗೆಯು ಎಷ್ಟರವರೆಗೆ ಇತ್ತು?
9. ಪಲ್ಯವನ್ನು ಮಾಡದೆ ಅನ್ನವನ್ನು ಮಾಡುತ್ತೇನೆ.
10. ಅವರು ಬೇಗನೆ ತಿಂದರು.

### ಉತ್ತರ

1. ते अन्तः सन्ति वा, बहिः सन्ति वा?
2. ते अस्माकं गृहे कियत् पर्यन्तं स्युः।
3. वयम् इदानीमेव फलानि अखादाम।
4. युष्मभ्यं कृते ते अत्र सन्ति।
5. त्वम् अद्य सायंकाले किम् अखादः?
6. अहं तेषां कलशे शाकम् अकरवम्।
7. एतावत् पर्यन्तं कुत्र आसीः?
8. युष्मद् गृहे एव अभवम् खलु।
9. तथा वा! ते के?
10. ह्यः प्रातः युष्मद् गृहे ये स्नानं कृतवन्तः ते एव एते।



# ಶ್ರೇಷ್ಠ ಜ್ಯೋತಿಷ್ಯಕಾರರು ಗೋಪಾಲದಾಸರು

- ಪ್ರಿಯ ಪ್ರಾಣೇಶಹರಿದಾಸ

**ಗೋ**ಪಾಲದಾಸರು ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಮೊಸರಗಲ್ಲು ಎಂಬ ಊರಲ್ಲಿ ಹರಿತಸ್ ಎಂಬ ಗೋತ್ರದಲ್ಲಿ ಹುಟ್ಟಿದರು. ಇವರು ಗಣಪತಿಯ ಅಂಶದ ಅವತಾರ, ಇವರ ಕಾಲ 1722-1762. ಇವರ ತಂದೆ ಹೆಸರು ಮುರಾರಿರಾಯ ಮತ್ತು ತಾಯಿ ಹೆಸರು ವೆಂಕಮ್ಮಾ, ಇವರಿಗೆ ಸೀನಪ್ಪಾ ದಾಸಪ್ಪಾ, ರಂಗಪ್ಪಾ ಎಂಬ ಮೂವರು ತಮ್ಮಂದಿರು ಇದ್ದರು. ಮುಂದೆ ತಂದೆ ಅಕಾಲ ಮರಣದಿಂದಾಗಿ ಸಂಸಾರ ಜವಾಬ್ದಾರಿ ಇವರ ಹೆಗಲ ಮೇಲೆ ಬಿತ್ತು. ಇವರದು ಕಡು ಬಡತನ.ಸಂಕಾಪುರದ ಗುಂಡಪ್ಪ ತನ್ನ ಮಗನ ಉಪನಯನದ ಜೊತೆ ಇವರ ಉಪನಯನ ಮಾಡಿಸಿದರು.

ಗಾಯಿತ್ರೀ ಪುರಶ್ಚರಣೆ ಮಾಡಬೇಕೆಂದು ನಿಶ್ಚಯಿಸಿ ಸುಮುಹೂರ್ತದಲ್ಲಿ ಭಾಗಣ್ಣನ ತಪಸ್ಸಿಗಾರಂಭ ವಾಯಿತು. ಎರಡು ವರ್ಷ ಕಾಲ ಮೌನ ವ್ರತದಿಂದ ಭಾಗಣ್ಣನು ತಪಸ್ಸು ಮಾಡಿದರು. ಕೆಲಮಂದಿ ದುಷ್ಟ ಜನರು ವ್ರತಭಂಗ ಮಾಡಬೇಕೆಂದು ತೊಂದರೆ ಗಳನ್ನಿತ್ತರು.ಬಾಲಕನ ಮೇಲೆ ಕುದಿಯುವ ನೀರನ್ನು ಸುರಿದರೂ ಭಾಗಣ್ಣ ತಪೋನಿಷ್ಠರಾಗಿದ್ದರು.

ಗಾಯತ್ರಿ ದೇವಿಯು ಭಾಗಣ್ಣನ ನಾಲಿಗೆಯ ಮೇಲೆ ಬೀಜಾಕ್ಷರಗಳನ್ನು ಬರೆದು ಅನುಗ್ರಹಿಸಿದಳು. ಅಂದಿನಿಂದಲೇ ಭಾಗಣ್ಣನು ವರಕವಿಯಾದನು. ಯಾರನ್ನು ನೋಡಿದರೂ ಅವರ ಮೂರು ಜನ್ಮದ ವೃತ್ತಾಂತವನ್ನು ಹೇಳುವ ಸಾಮರ್ಥ್ಯ ಜ್ಯೋತಿಷ್ಯರಾಗಿದ್ದರು. ಇದರ ಜೊತೆ ಇವರ ಆಧ್ಯಾತ್ಮ ಸಾಧನೆಯೂ ನಡೆದಿತ್ತು ಹೀಗೆ ಇವರ ಬಡತನ ಕಳೆದು ಶ್ರೀಮಂತ ರಾದರು. ಯಾವುದೇ ಗರ್ವವಿಲ್ಲದೆ ಸದಾ ಹರಿಯ ಚಿಂತನೆಯಲ್ಲಿ ಇರುತ್ತಿದ್ದರು. ಮುಂದೆ ಇವರಿಗೆ ಗದ್ವಾಲ ಪ್ರಾಂತದ ದೊರೆಯ ಪರಿಚಯ ಹಾಗೂ ಅದವಾನಿಯ ದಿವಾನ ತಿಮ್ಮಣ್ಣ ಹೀಗೆ ಶ್ರೀಮಂತರ ಪರಿಚಯವು ಬೆಳೆದು ಜನಾನುರಾಗಿಯಾಗಿದ್ದರು.

ಇವರು "ವೆಂಕಟಕೃಷ್ಣ" ಎಂಬ ಅಂಕಿತದಿಂದ ಮೊದಲು ಸಾಕಷ್ಟು ದೇವರ ಸಾಹಿತ್ಯ ರಚಿಸಿದ್ದಾರೆ. ಆದರೆ ದೇವರ ಸಂಕಲ್ಪ ಇವರು ಇನ್ನು ಹೆಚ್ಚಿನ ಸಾಧನೆಗೋಸ್ಕರ ವಿಜಯದಾಸರ ಮೂಲಕ ವೈರಾಗ್ಯ ಮೂಡಿಸಿ "ಗೋಪಾಲವಿಠ್ಠಲ" ಎಂಬ ಅಂಕಿತ ಕೊಡಿಸಿದ ಪರಮಾತ್ಮನು. ಗೋಪಾಲದಾಸರು ವಿಜಯದಾಸರ ಮೆಚ್ಚಿನ ಮೂರು ಜನ ಶಿಷ್ಯರಲ್ಲಿ ಒಬ್ಬರು. (ಮೊದಲನೆಯವರು ಭಕ್ತಿಯಲಿ ಭಾಗಣ್ಣ ದಾಸರು, ಎರಡನೆಯವರು ಯುಕ್ತಿಯಲಿ ಮೋಹನ್‌ದಾಸರು, ಶಕ್ತಿಯಲಿ ತಮ್ಮಣ್ಣದಾಸರು) ಇವರು ಭಕ್ತಿಯಲಿ ಭಾಗಣ್ಣ ಎಂದು ಹೆಸರುವಾಸಿಯಾಗಿದ್ದರು.

ಮುಂದೆ ತಮ್ಮ ತಮ್ಮಂದಿರಿಗೂ ಇದೆ ಸಾಧನೆ ಮಾರ್ಗದಲ್ಲಿ ನಡೆಸಿ ಸೀನಪ್ಪಗೆ "ವರದಗೋಪಾಲ ವಿಠ್ಠಲ್" ಎಂಬ ಅಂಕಿತ, ದಾಸಪ್ಪಗೆ ಗುರುಗೋಪಾಲ ವಿಠ್ಠಲ್ ರಂಗಪ್ಪಗೆ ತಂದೆ " ಗೋಪಾಲ ವಿಠಲ್" ಎಂಬ ಅಂಕಿತಕೊಟ್ಟರು. ಈ ಮೂವರು ಸಹ ಅಣ್ಣನ ಮಾರ್ಗವನ್ನು ಅನುಸರಿಸಿ ಅವರುಗಳು ಸಹ ಅನೇಕ ಸಾಹಿತ್ಯ ರಚಿಸಿದ್ದಾರೆ.

ವಿಜಯದಾಸರ ಅತಿಥ್ಯ ತಿರಸ್ಕರಿಸಿ ಹೋದ ಶ್ರೀನಿವಾಸ ಆಚಾರ್ಯರರು (ಇವರೇ ಜಗನ್ನಾಥದಾಸರು) ಮುಂದೆ ಉದರ ಶೂಲೆಯಿಂದ ಜೀವ ಹೋಗುವ ಪರಿಸ್ಥಿತಿ ಬಂದಾಗ ಇವರು ತಮ್ಮ ಗುರುಗಳಾದ ವಿಜಯದಾಸರ ಆಜ್ಞೆಯಂತೆ "ಎನ್ನ ಬಿನ್ನಪ ಕೇಳೋ...." ಹಾಡು ರಚಿಸಿ ತಮ್ಮ ಆಯುಷ್ಯದ 40 ವರುಷಗಳನ್ನು ಜಗನ್ನಾಥದಾಸರಿಗೆ ಧಾರೆ ಎರೆದರು.

ಒಮ್ಮೆ ಸತ್ಯಭೋಧ ಸ್ವಾಮಿಗಳ ಆಜ್ಞೆಯಂತೆ ಗೋಪಾಲದಾಸರ ಅಣ್ಣತಮ್ಮಂದಿರು ಪ್ರತ್ಯೇಕ ಕುಳಿತು "ಮಾರ್ ಮಧಾಥನ್ನ ..." ಎಂಬ ಹಾಡನ್ನು ರಚಿಸಿದರು. ಇವರು 30 ನುಡಿಗಳನ್ನೊಳಗೊಂಡ ಅನೇಕ ಪದ್ಯಗಳನ್ನು ಮತ್ತು ಉಗಾಭೋಗ ಸುಳಾದಿಗಳನ್ನು ರಚಿಸಿದ್ದಾರೆ. ಹಾಗೆ ಇವರು ಸುಂದರವಾಗಿ ದೇವರ ಚಿತ್ರಗಳನ್ನು ಬಿಡುಸುತ್ತಿದ್ದರು. ಈಗಲೂ ಉತ್ತನೂರಿನಲ್ಲಿ ಕಾಣಬಹುದು. ಅನೇಕರ ಜೀವನವನ್ನು ಉದ್ದಾರ ಮಾಡಿದ್ದಾರೆ. ಶಿವಮೊಗ್ಗದ ದರೋಡೆಕಾರನಾದ ಭೀಮನನ್ನು ಪರಿವರ್ತಿಸಿದರು, ಮತ್ತೆ ತಿರುಪತಿಯಲ್ಲಿ ಒಮ್ಮೆ ರಥ ಮುಂದೆ ಹೋಗದಾಗ "ನಡೆದು ಬಾರಯ್ಯಾ..." ಪದ್ಯ ರಚಿಸಿ ಹಾಡಿದಾಗ ರಥ ಮುಂದೆ ಚಲಿಸಿತು.ಹೇಳವನ ಕಟ್ಟೆಗಿರಿಯಮ್ಮ ನಿಜ ಸ್ವರೂಪ ಮುದ್ದುಕೃಷ್ಣನ ಜೊತೆ ಆಡುವುದನ್ನು ಸ್ವತಃ ನೋಡಿದ್ದರು. ಹೀಗೆ ಇವರ ಅನೇಕ ಕಾರ್ಯಗಳು ಮಾಡಿದ್ದಾರೆ. ಕೇವಲ 40 ವರುಷದಲ್ಲಿ ಇಷ್ಟು ಸಾಧಿಸಿ ಪುಷ್ಯ ಕೃಷ್ಣ ಅಷ್ಟಮಿ ಶನಿವಾರದಂದು ಉತ್ತನೂರಿನಲ್ಲಿ ದೇಹತ್ಯಾಗ ಮಾಡಿದರು.

## ನೀತಿಕಥೆ

# ಹತ್ತಿರದವರೇ ದೂರದವರು

- ಡಾ॥ ಪ್ರದೀಪ್ ಕುಮಾರ್ ಹೆಬ್ರಿ

9844018457

ಅದೊಂದು ಖಾಸಗೀ ಪ್ರೌಢಶಾಲೆ. ಸಮಾಜದ ಉನ್ನತ ವರ್ಗದ ಶ್ರೀಮಂತರ ಮಕ್ಕಳೇ ಕಲಿಯುತ್ತಿದ್ದುದು. ಆ ಶಾಲೆಯ ಶಿಕ್ಷಕರೂ ಮಕ್ಕಳನ್ನು ತುಂಬ ಪ್ರೀತಿಸುತ್ತಿದ್ದರು. ಚೆನ್ನಾಗಿ ಪ್ರೀತಿಸುತ್ತಿದ್ದರು. ಅನೇಕ ಮಕ್ಕಳಿಗೆ ತಮ್ಮ ಮನೆಯಲ್ಲಿ ಹೆತ್ತವರಿಂದ ಸಿಗದ ಪ್ರೀತಿ ಮಾರ್ಗದರ್ಶನ ಶಾಲೆಯಲ್ಲಿ ಸಿಗುತ್ತಿತ್ತು.

ಶೈಕ್ಷಣಿಕ ವರ್ಷ ಮುಗಿಯಲು ಕೇವಲ ಒಂದೇ ತಿಂಗಳು ಉಳಿದಿತ್ತು ಶಿಕ್ಷಕರಲ್ಲೂ ಮಕ್ಕಳಲ್ಲೂ ಅಂತಿಮ  ಪರೀಕ್ಷೆಯ ಧಾವಂತ. ಶಾಲೆಗೆ ಉತ್ತಮ ಫಲಿತಾಂಶ ಬರಬೇಕೆಂಬುದೇ ಎಲ್ಲರ ಆಶಯವಾಗಿತ್ತು. ಅಂದಿನ ತರಗತಿ ಆರಂಭವಾಗಿತ್ತು. ವಿದ್ಯಾರ್ಥಿಗಳನ್ನು ಉದ್ದೇಶಿಸಿ ಕ್ಲಾಸ್ ಟೀಚರ್" ನಾಳೆಯಿಂದ ಪರೀಕ್ಷೆಗೆ  ಓದಲು ನಿಮಗೆ ರಜೆ ಪ್ರಾರಂಭ. ಈ ಸಮಯದ ಸದುಪಯೋಗ ಪಡೆಯುವಿರೆಂಬ ನಂಬಿಕೆ ನನಗಿದೆ. ನಿಮಗೇನಾದರೂ ಸಂಶಯವಿದ್ದರೆ ನೀವು ಬಂದು ನಿಮ್ಮ ಶಿಕ್ಷಕರನ್ನು ಭೇಟಿಯಾಗಬಹುದು. ನಿಮ್ಮ ಪಾಠಕ್ಕೆ ಸಂಬಂಧಿಸಿದ ಸಂಶಯಗಳನ್ನು ನಿವಾಸರಿಸಿಕೊಳ್ಳಬಹುದು. ನಾನಿಂದು  ನಿಮಗೆ ಪರೀಕ್ಷಾಪೂರ್ವ ರಸಪ್ರಶ್ನೆ ಸ್ಪರ್ಧೆ ಮಾಡುವೆ ಸಿದ್ಧರಿರಿ" ಎಂದರು. ವಿದ್ಯಾರ್ಥಿಗಳೆಲ್ಲರೂ ಒಮ್ಮನದಿಂದ ತಲೆಯಾಡಿಸಿ ಒಪ್ಪಿದರು.

ಅನಂತರ ಕ್ಲಾಸ್ ಟೀಚರ್ ಪರೀಕ್ಷೆಗೆ ಸಂಬಂಧಿಸಿದ ಅನೇಕ ಪ್ರಶ್ನೆಗಳನ್ನು ಕೇಳಿದರು ಎಲ್ಲರೂ ತಡಬಡಾಯಿಸದೆ ಪಟಪಟನೆ ಉತ್ತರಿಸುತ್ತಿದ್ದರು ಅವರವರಲ್ಲೇ ಸ್ಪರ್ಧೆ ಏರ್ಪಟ್ಟಿದ್ದಂತಿತ್ತು. ಇನ್ನೂ ಇನ್ನೂ ಕೇಳಲಿ ಎಂಬ ಉತ್ಸಾಹವೂ ಹೆಚ್ಚುತ್ತಿತ್ತು. ಕ್ಲಾಸ್ ಟೀಚರ್ ಗೆ ಬಹಳ ಸಂತೋಷವಾಯಿತು ಅಂತಿಮ ಪರೀಕ್ಷೆಯ ಫಲಿತಾಂಶದ ಬಗ್ಗೆ ಭರವಸೆಯೂ ಮೂಡಿತು.

ಕೊನೆಯಲ್ಲಿ ಕ್ಲಾಸ್ ಟೀಚರ್ "ಮಕ್ಕಳೇ, ಎಲ್ಲ ಪ್ರಶ್ನೆಗಳಿಗೂ ಸರಿಯಾದ ಉತ್ತರಗಳನ್ನೇ ಹೇಳಿದಿರಿ. ಕೊನೆಯದಾಗಿ ನಿಮಗೊಂದು ಬೇರೆಯೇ ಪ್ರಶ್ನೆ ಕೇಳುವೆ. ಉತ್ತರ ಗೊತ್ತಿದ್ದವರು ಅವರ ಕೈಗಳನ್ನು ಮೇಲೆತ್ತಿದರೆ ಸಾಕು ಎಂದರು. ಮಕ್ಕಳೆಲ್ಲರೂ ಒಕ್ಕೊರಳಿನಲ್ಲಿ" ಕೇಳಿ ಟೀಚರ್, ಬೇಗ ಕೇಳಿ ಟೀಚರ್ " ಎಂದರು.

ಟೀಚರ್ ಆಗ ಮಕ್ಕಳೇ ನೀವೀಗ ಅಮೇರಿಕದ ಅಧ್ಯಕ್ಷ ಮೊದಲ ಭಾರತರತ್ನ ಪುರಸ್ಕೃತ ಮೊದಲ ಸಲ ಮೌಂಟ್ ಎವರೆಸ್ಟ್ ಏರಿದವ ಭಾರತದ ಮೊದಲ ಮಹಿಳಾ ಗಗನಯಾತ್ರಿ ಹೀಗೆ ಎಲ್ಲಾ ಪ್ರಶ್ನೆಗಳಿಗೂ ಸರಿಯಾದ ಉತ್ತರ ಕೊಟ್ಟಿರುವಿರಿ. ಈಗ ಹೇಳಿ ಕಳೆದ ಮೂರು ವರ್ಷಗಳಿಂದ ನೀವು ತರಗತಿಗೆ ಬರುವ ಮೊದಲು ನಿಮ್ಮ ತರಗತಿಯನ್ನು ಪ್ರತೀದಿನ  ಸ್ವಚ್ಛ ಮಾಡುತ್ತಾಳಲ್ಲ ಅವಳ ಹೆಸರೇನು? ಎಂದರು.

ತರಗತಿಯಲ್ಲಿ ಗಾಢ ಮೌನ

ಶಿಕ್ಷಕರಿಗೆ ತುಂಬಾ ಬೇಸರವಾಯಿತು. ಯಾರಿಂದಲೂ ಉತ್ತರ ಬಂದಿರಲಿಲ್ಲ. ಅವರಾಗ." ನೀವೆಲ್ಲರೂ ಅಥವಾ ನಿಮ್ಮಲ್ಲಿ ಕೆಲವರಾದರೂ ಕೈಗಳನ್ನು ಮೇಲೆತ್ತಬಹುದೆಂದು ಭಾವಿಸಿದ್ದೆ. ಆದರೆ ನಿಮ್ಮಲ್ಲಿ ಒಬ್ಬರಿಗೂ ಅವಳ ಹೆಸರು ಗೊತ್ತಿಲ್ಲ. ಪ್ರತೀದಿನ ನೀವು ಅವಳನ್ನು ನೋಡುತ್ತಿದ್ದಿರಿ. ಆದರೆ ಅವಳ ಜೊತೆ ಮಾತಾಡಲಿಲ್ಲ. ಅವಳ ಹೆಸರೂ ಕೇಳಲಿಲ್ಲ ಆಕೆ ಒಂದು ದಿನ ಬರದಿದ್ದರೆ ನಿಮ್ಮ ಕ್ಲಾಸ್ ರೂಂ ಹೇಗಿರುತ್ತದೆಂದು  ನಿಮಗೆ ಗೊತ್ತು ಅಂಥವರ ಹೆಸರು ತಿಳಿದುಕೊಳ್ಳಬೇಕೆಂಬ ಮನಸ್ಸೇ ನಿಮಗಿಲ್ಲ. ಇದು ಬೇಸರದ ವಿಷಯ. ನಮ್ಮ ಸುತ್ತಮುತ್ತ ಇರುವವರ ನಮ್ಮ ಯೋಗಕ್ಷೇಮ ನೋಡಿಕೊಳ್ಳುವವರ ಹೆಸರು.  ಅವರ ಕಷ್ಟಸುಖದ ಕುರಿತು ತಿಳಿದುಕೊಳ್ಳುವ ಮಾನವೀಯ ಗುಣ ನಮಗಿರಬೇಕು. ಪರೀಕ್ಷೆಯಲ್ಲಿ ನಾವು ಗಳಿಸುವ ಅಂಕಗಳಿಗಿಂತಲೂ ದೊಡ್ಡಪಾತ್ರ ಭವಿಷ್ಯದಲ್ಲಿ ನಮ್ಮ ಮಾನವೀಯ ನಡತೆ ವಹಿಸುತ್ತದೆ. ಇನ್ನು ಮುಂದಾದರೂ ನಿಮ್ಮ ನಿಮ್ಮ ಹೆತ್ತವರ ಸಿರಿವಂತಿಕೆಯ ಅಹಂಕಾರ ತೋರದೇ ಎಲ್ಲರಲ್ಲಿ ಒಂದಾಗಿರಲು ಕಲಿಯಿರಿ. ನಿಮ್ಮ ಭವಿಷ್ಯ ಉಜ್ವಲವಾಗಲಿ ಎಂದರು. ತರಗತಿಯಲ್ಲಿ ಮತ್ತದೇ ಮಹಾಮೌನ. ಆದರೆ ಎಲ್ಲರ ಮುಖದಲ್ಲಿ ಶಿಕ್ಷಕರ ಉಪದೇಶವನ್ನು ಒಪ್ಪಿದ ಕುರುಹು ಕಂಗೊಳಿಸಿತ್ತು.

**ನೀತಿ: ಆತ್ಮೀಯ ಸಂಬಂಧ ಬೆಳೆಸುವಂಥ ಮನೋಧರ್ಮ ನಮ್ಮದಿರಬೇಕು.**



ಬಾ ಲ ವಿ ನೋ ಧಿ ನಿ

## ಈ ಗೊಂಬೆಗೆ ಬಣ್ಣವನ್ನು ತುಂಬಿರಿ.......



## ಪಕ್ಕದಲ್ಲಿರುವ ಗೊಂಬೆಯನ್ನು ಬಾಕ್ಸ್‌ನಲ್ಲಿ ಬರಿಯೋಣ...



ಈ ಚಿತ್ರದಲ್ಲಿ ಒಟು 7 ವ್ಯತ್ಯಾಸಗಳಿವೆ.

ಮಕ್ಕಳೇ ಇದನ್ನು ಕಂಡು ಹಿಡಿಯಿರಿ ನೋಡೋಣ.



**ಹೂ, ಕುಚ್ಚು, ವಂಕಿ, ಗೆಜ್ಜೆ, ಜುಮುಕಿ, ಜಡೆಬಿಲ್ಲೆ, ಬಳೆ,**

## ಈ ಅಕ್ಷರಗಳಲ್ಲಿ ಒಂದು ಗಾದೆ ಇದೆ ಕಂಡು ಹಿಡಿಯಿರಿ ನೋಡೋಣ....

| | | | | | | |
|---|---|---|---|---|---|---|
| ವ | ಜ | ಲೆ | ಹಾ | ಪ್ಪೆ | ಸೆ | ದ |
| ಗೆ | ಎ | ಕ | ಅಂ | ನ | ಮೇ | ದ |

## ತಿರುಮಲ ತಿರುಪತಿ ದೇವಸ್ಥಾನಗಳು

# ಮಕ್ಕಳೇ ಇದು ನಿಮಗಾಗಿ



## 6 ಕ್ವಿಜ್

### ಸೂಚನೆಗಳು

1. ಈ ಕ್ವಿಜ್ 10-15 ವರ್ಷ ವಯಸ್ಸಿನ ಮಕ್ಕಳು ಹಿಂದೂವಾಗಿರಬೇಕು.
2. ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳುವ ಮಕ್ಕಳ ತಂದೆ ತಾಯಿ ತಪ್ಪದೇ ಸಪ್ತಗಿರಿ ಮಾಸ ಪತ್ರಿಕೆಯ ಚಂದಾ ದಾರರಾಗಿರಬೇಕು.
3. ಕ್ವಿಜ್ ಪ್ರಶ್ನಾಪತ್ರಿಕೆಯಲ್ಲಿ ತಪ್ಪದೇ ತಮ್ಮ ಚಂದಾ ಸಂಖ್ಯೆ, ಹೆಸರು, ವಿಳಾಸ, ಪಿನ್‌ಕೋಡ್,ಫೋನ್ ನಂಬರ್ ಸ್ಪಷ್ಟವಾಗಿ ಬರೆಯಬೇಕು.
4. ಕ್ವಿಜ್ ಉತ್ತರಗಳನ್ನು ಪ್ರಶ್ನೆಯ ಕೆಳಗೆ ನಿರ್ದೇಶಿಸಿದ ಸ್ಥಳದಲ್ಲಿಯೇ ಬರೆದು ಕಳುಹಿಸಬೇಕು.
5. ಕ್ವಿಜ್ ಉತ್ತರದ ಜೆರಾಕ್ಸ್ ಅನ್ನು ತೆಗೆದುಕೊಂಡು ಕಳಿಹಿಸಿದವರು ಖಚಿತವಾಗಿ ಚಂದಾನಂಬರ್‌ನ್ನು ಕಳುಹಿಸಬೇಕು. ಒಬ್ಬ ಚಂದಾದಾರರು ಒಂದು ಉತ್ತರವನ್ನು ಮಾತ್ರವೇ ಕಳುಹಿಸತಕ್ಕದ್ದು.
6. ಉತ್ತರ ಬರೆಯುವಾಗ ಅಳಿಸುವುದು, ತಿದ್ದುವುದು ಮಾಡಬಾರದು.
7. ಉತ್ತರಗಳನ್ನು ನಮಗೆ ಕಳುಹಿಸುವ ಕೊನೆಯ ದಿನಾಂಕ 25.01.2023
8. ಈ ಕ್ವಿಜ್‌ನಲ್ಲಿ ಎಲ್ಲಾ ಉತ್ತರಗಳನ್ನು ಸರಿಯಾಗಿ ಬರೆದ ಮೂರು ಮಕ್ಕಳನ್ನು ಮಾತ್ರವೇ ವಿಜೇತರಾಗಿ ಲಕ್ಕಿ ಡಿಫ್ ಮುಖಾಂತರ ಆಯ್ಕೆ ಮಾಡಲಾಗುತ್ತದೆ.
9. ವಿಜೇತರಾದ ಮಕ್ಕಳ ಹೆಸರನ್ನು ಮುಂದಿನ ತಿಂಗಳ ಸಪ್ತಗಿರಿ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದ
10. ತಿ.ತಿ.ದೇ. ಪ್ರಧಾನ ಸಂಪಾದಕರ ಕಾರ್ಯಾಲಯದಲ್ಲಿ ಕೆಲಸ ಮಾಡುವ ಉದ್ಯೋಗಿಗಳ ಮಕ್ಕಳು ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳಬಾರದು.
11. ಕ್ವಿಜ್‌ಗೆ ಸಂಬಂಧಿಸಿದ ಯಾವ ಸಮಾಚಾರವನ್ನು ಫೋನ್ ಮುಖಾಂತರ ನೀಡಲಾಗುವುದಿಲ್ಲ.

**ನಿಮ್ಮ ಉತ್ತರಗಳನ್ನು ಕಳುಹಿಸಬೇಕಾದ ವಿಳಾಸ**

ಪ್ರಧಾನ ಸಂಪಾದಕರು
ಸಪ್ತಗಿರಿ ಮಾಸಪತ್ರಿಕೆ
ತಿ.ತಿ.ದೇ. ಪ್ರೆಸ್ ಕಾಂಪೌಂಡ್
ಕೆ.ಟಿ. ರಸ್ತೆ.
ತಿರುಪತಿ : 517 507
ಆಂಧ್ರ ಪ್ರದೇಶ್



## ರಸಪ್ರಶ್ನೆಗಳು

**ಉತ್ತರಗಳು**

1. ಯಾವ ಎಣ್ಣೆಯಿಂದ ಅಭ್ಯಂಜನ ಸ್ನಾನ ಮಾಡಬೇಕು? ......................
2. ಸೃಷ್ಟಿಯ ಪ್ರಾರಂಭದಲ್ಲಿ ಬಂದ ಮೊದಲ ಅಕ್ಷರ ಯಾವುದು? ......................
3. ಉತ್ತರಾಯಣವನ್ನು ಪ್ರವೇಶಿಸುವ ದಿನ ಯಾವುದು? ......................
4. ಅಧಿಷ್ಠಾನದಲ್ಲಿ ಅಂತರ್ಗತ ಭಗವದ್ರೂಪಗಳನ್ನು ಏನು ಮಾಡುತ್ತಾರೆ? ......................
5. ಸೂರ್ಯನು ಎಷ್ಟು ಕುದುರೆಗಳ ರಥದೊಂದಿಗೆ ಪ್ರವೇಶಿಸುತ್ತಾನೆ? ......................
6. ಹತ್ತು ತಲೆ ರಾವಣನನ್ನು ಯಾವ ಅವತಾರದಲ್ಲಿ ಕೊಂದನು ? ......................
7. ನಾಗಮಂಗಲದಲ್ಲಿ ಅತ್ಯಂತ ಪ್ರಸಿದ್ಧ ದೇವಾಲಯ ಯಾವುದು? ......................
8. ಸಂಕ್ರಾಂತಿಯ ನಾಯಕನಾರು? ......................
9. ವೇದಗಳ ತಾಯಿ ಯಾರು ? ......................
10. ಸಂಕ್ರಮಣದಂದು ಯಾವ ದಾನ ಉತ್ತಮ ? ......................
11. ಶ್ರೀಮಧ್ವರು ತೀರ್ಥಯಾತ್ರೆ ಪ್ರಯುಕ್ತ ಯಾವ ನದಿಯನ್ನು ದಾಟಬೇಕು? ......................
12. ಸೂರ್ಯನಿಗೆ ಯಾವ ಧಾನ್ಯದಿಂದ ನೈವೇದ್ಯ ಮಾಡುತ್ತಾರೆ? ......................
13. ರಾಮಕೃಷ್ಣ ಯತೀಂದ್ರರು ಎಷ್ಟು ರಾಮನಾಮವನ್ನು ಜಪಿಸಬೇಕು ಎಂದು ಹೇಳಿದರು? ......................
14. ನಾರಾಣಪ್ಪನ ಜನ್ಮಸ್ಥಳ ಯಾವುದು? ......................
15. ಗೋಪಾಲದಾಸರ ಅಂಕಿತನಾಮವೇನು? ......................

| | |
|---|---|
| ಹೆಸರು :<br>ಚಂದಾ ಸಂಖ್ಯೆ:<br>ತಂದೆಯ ಹೆಸರು :<br>ತಾಯಿಯ ಹೆಸರು : | ವಿಳಾಸ :<br><br><br>ದೂರವಾಣಿ ಸಂಖ್ಯೆ: |



# ಸ್ತೋತ್ರವನ್ನು ಕಲಿಯೋಣ

## ಭಾವರ್ಥ ಸಹಿತ ಶ್ರೀಭಾರತೀಶ ಕರಾವಲಂಬನ ಸ್ತೋತ್ರ ಶ್ರೀ ಗುರುಭ್ಯೋ ನಮಃ

- ರಚನೆ : ವಿದ್ವಾನ್ ಆರಣಿ ವಾಸುದೇವಾಚಾರ್ಯ



ಶ್ರೀ ಚಕ್ರತೀರ್ಥ ಘಟಿಕಾಚಲ ಪೂರ್ವದೇಶ ವಾಸಿನ್ಸಭಕ್ತ
ಜನಪೋಷಣ ದತ್ತ ಹೃಷ್ಟೇ
ದುಷ್ಟಾರಿ ಪೋಥನ ನಿಷೇವಣ ಹೃಷ್ಟ ಮುಷ್ಟೇ ಶ್ರೀ ಭಾರತೀಶ
ಮಮ ದೇಹಿ ಕರಾವಲಂಬಮ್ ॥7॥

ಶ್ರೀ ಚಕ್ರತೀರ್ಥ, ಶ್ರೀಘಟಿಕಾಚಲ ಮುಂತಾದ ಕ್ಷೇತ್ರಗಳಲ್ಲಿ ನೆಲೆಸಿರುವಂಥ, ತನ್ನ ಭಕ್ತ ಜನರ ಪೋಷಣೆ ಮಾಡಿ, ಅವರಿಗೆ ಸಂತೋಷಪ್ರದರಾದ, ದುಷ್ಟ ಶತೃಗಳ ಸಂಹಾರದಲ್ಲೇ ಸಂತುಷ್ಟರಾದ ಶ್ರೀ ಭಾರತೀಪತಿಯಾದ ವಾಯುದೇವರು ನಮ್ಮ ಕಾಪಾಡಲಿ.



..................................

..................................

..................................

..................................



ಇದರಲ್ಲಿ ಹೋಲಿಕೆ ಇಲ್ಲದ ಚಿತ್ರ ಯಾವುದು

ಸಂಕ್ರಾಂತಿ, ವಸಂತಪಂಚಮಿ ರಥಸಪ್ತಮಿ, ಧರ್ನುಮಾಸ, ಇವುಗಳಿಗೆ ಸಂಬಂಧವಿಲ್ಲದ ಚಿತ್ರವನ್ನು ಕಂಡು ಹಿಡಿಯಿರಿ.

ಚಿತ್ರಕಥೆ

# ಅನ್ನ ಪ್ರದಾತ


ಕಥೆ : ತೆಲುಗು ಮೂಲ : ಡಾ॥ ಕೆ. ರವಿಚಂದ್ರನ್

ಅನುವಾದ : ಆರ್.ಕೆ.

ಚಿತ್ರಗಳು : ಬಿ. ಶಿವಾಜಿ





ಧರ್ಮರಾಜ ತನ್ನ ಪುರೋಹಿತನಾದ ಧೌಮ್ಯನನೊಂದಿಗೆ...
ಗುರುದೇವಾ? ಏನಿದು ವಿಧಿ ವೈಪರೀತ್ಯ ? ನಮ್ಮ ಮೇಲಿನ ಅಭಿಮಾನದಿಂದ ಎಷ್ಟು ಹೇಳಿದರೂ ಕೇಳದೆ ನಮ್ಮ ಜೊತೆ ಬಂದ ಮಹಾಜನರನ್ನು ಆದರಿಸಿ ಪೋಷಿಸುವ ಸ್ಥಿತಿಯಲ್ಲಿ ಇಲ್ಲವಾದನೇ?
ಈ ಮಹಾರಣ್ಯದಲ್ಲಿ ಇಷ್ಟು ಜನಕ್ಕೆ ಆಹಾರವನ್ನು ಹೇಗೆ ಕೊಡಲು ಸಾಧ್ಯ? ಹಸಿವಿನಿಂದ ಇರುವವರಿಗೆ ಅನ್ನವನ್ನು ನೀಡಲಾಗದ ನನ್ನ ಜೀವನ ವ್ಯರ್ಥವಲ್ಲವೇ ?
ಚಿಂತಿಸಬೇಡ ಧರ್ಮರಾಜಾ! ಸಕಲ ಜೀವರಾಶಿಗೆ ಅನ್ನಪ್ರದಾತ ಆ ಸೂರ್ಯ ಭಗವಾನನು. ನೀನು ಕೂಡ ಆ ಸೂರ್ಯನನ್ನು ಆರಾಧಿಸಿ, ಅನುಗ್ರಹಿಸು. ಈ ಅಶೇಷ ಜನರನ್ನು ಪೋಷಿಸಲು ನಿನಗೆ ಸಾಧ್ಯವಾಗುತ್ತದೆ.
ಅರುಣಾಯ! ಶರಣ್ಯಾಯ! ಕರುಣಾರಸ ಸಿಂಧವೇ! ಅಸಮಾನ ಬಲಾಯ ಆರ್ತರಕ್ಷಕಾಯ ನಮೋ ನಮಃ
ವತ್ಸ ! ಧರ್ಮ ನಂದನಾ ! ಇದು ಅಕ್ಷಯ ಪಾತ್ರೆ, ಇದನ್ನು ಅರ್ಚಿಸಿ, ಪ್ರಾರ್ಥಿಸಿದರೆ ಎಷ್ಟು ಜನರಿಗಾದರೂ ಬೇಡಿದ ಆಹಾರವನ್ನು ಪ್ರಸಾದಿಸುತ್ತದೆ.
ಧನ್ಯೋಸ್ಮಿ ಭಗವಾನ್ ! ಧನ್ಯೋಸ್ಮಿ !
ಶುಭಂ

తిరుమలె తిరుపతి ದೇವಸ್ಥಾನಗಳು. ತಿರುಪತಿ

# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)

## ಚಂದಾ ನಮೂನೆ ಪತ್ರ

ಹೆಸರು ಮತ್ತು ವಿಳಾಸ :
(ಬಿಡಿಬಿಡಿ ಅಕ್ಷರಗಳಲ್ಲಿ ಅರ್ಥವಾಗುವಂತೆ ಇಂಗ್ಲೀಷಿನಲ್ಲಿ ಬರಿಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ)

ಬೇಕಾಗುವ ಭಾಷೆ : ☐ ಕನ್ನಡ ☐ ತೆಲುಗು ☐ ಹಿಂದೀ ☐ ತಮಿಳು ☐ ಇಂಗ್ಲೀಷು ☐ ಸಂಸ್ಕೃತ

ವಾರ್ಷಿಕ /ಆಜೀವಚಂದಾ : ☐ ರೂ.240/- ☐ ರೂ.2,400/-( 12 ವರ್ಷ)

ಚಂದಾ ನವೀಕರಣ :

(ಅ) ಚಂದಾ ನಂಬರು :

(ಆ) ಭಾಷೆ :

ಸಲ್ಲಿಸಿದ ಹಣ :

ಡಿ. ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅಟ್‌ಪರ್ ಚೆಕ್ಕು ಮಾತ್ರವೇ :

ಸ್ಥಳ :

ದಿನಾಂಕ: ಚಂದಾದಾರರ ಸಹಿ

ಸಪ್ತಗಿರಿ ವಾರ್ಷಿಕ ಚಂದಾ ರೂ.240/-, ಆಜೀವ ಚಂದಾ (12 ವರ್ಷ) ರೂ.2,400/- ಗಳು ಡಿ. ಡಿ. ಸಂಖ್ಯೆ/ ಈ.ಎಂ.ಓ/ಐ.ಪಿ.ಓ./ ಅಟ್‌ಪರ್ ಚೆಕ್ಕು ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ, ತಿ.ತಿ.ದೇ. ತಿರುಪತಿ. ಅವರ ಹೆಸರಿನಲ್ಲಿ ತೆಗೆಯ ಬೇಕು.

ಸಪ್ತಗಿರಿ ಚಂದಾದಾರರಾಗಿ ಸೇರ ಬಯಸುವವರು / ತಮ್ಮ ಚಂದಾ ನವೀಕರಿಸುವವರು ಈ ಕೂಪನ್‌ನಲ್ಲಿ ಅಥವಾ ಬಿಳಿಹಾಳಿಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು.

ಎಂ.ಓ. ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳಿಸಿ.

ನಮ್ಮ ವಿಳಾಸ -"ಪ್ರಧಾನ ಸಂಪಾಕರು, ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ ಪ್ರೆಸ್ ಕಾಂಪೌಂಡ್, ಕೆ.ಟಿ.ರೋಡ್ಡು ತಿರುಪತಿ - 517 507".

ಸಪ್ತಗಿರಿ ಚಂದಾ ವಿವರಣೆಗಾಗಿ ಫೋನ್ ನಂಬರ್: 0877-2264359, 0877-2264543

ತಿರುಮಲೆ ತಿರುಪತಿ ದೇವಸ್ಥಾನಗಳು

## ಟೋಲ್ ಫ್ರಿ ನಂಬರ್

ಸ್ವಾಮಿಯ ದರ್ಶನಾರ್ಥ ತಿರುಮಲೆಗೆ ಬರುವ ಭಕ್ತರ ಸೌಕರ್ಯಾರ್ಥಕ್ಕಾಗಿ ತಿರುಮಲೆ ತಿರುಪತಿ ದೇವಸ್ಥಾನದವರು **ಟೋಲ್ ಫ್ರಿ ನಂಬರ್** ಅನ್ನು ಏರ್ಪಡಿಸಿದ್ದಾರೆ.

ಯಾತ್ರಿಕರು, ಭಕ್ತರು ದೇವಸ್ಥಾನಕ್ಕೆ ಸಂಬಂಧಿಸಿದ ಸೂಚನೆ /ದೂರುಗಳನ್ನು ಮತ್ತು ಇತರ ಸಮಾಚಾರಕ್ಕಾಗಿ ಈ ನಂಬರನ್ನು ಸಂಪರ್ಕಿಸಬಹುದು.

**ತಿರುಮಲೆ ತಿರುಪತಿ ದೇವಸ್ಥಾನವು ಯಾತ್ರಿಕರಿಗೆ ಮತ್ತಷ್ಟು ಸೇವೆಯನ್ನು ನೀಡಲು ನಿಮ್ಮ ಸೂಚನೆಗಳನ್ನು ನೀಡಿರಿ.**

**ಟೋಲ್ ಫ್ರಿ ನಂಬರ್**

**18004254141**

0877-2233333,
0877-2277777

Printed by Sri P. Ramaraju, M.A., and Published by Dr. K. Radha Ramana, M.A., M.Phil., Ph.D., on behalf of Tirumala Tirupati Devasthanams and Printed and Published at Tirumala Tirupati Devasthanams Press, K.T.Road, Tirupati - 517 507.
Editor : Dr. V. G. Chokkalingam, M.A., Ph.D.

ಭಾರತದ ರಾಷ್ಟ್ರಪತಿ ಗೌ॥ ಶ್ರೀಮತಿ ದ್ರೌಪದಿ ಮುರ್ಮು ತಿರುಮಲೆ ಸ್ವಾಮಿಯವರನ್ನು ಮತ್ತು ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರನ್ನು 05-12-2022 ರಂದು ದರ್ಶಿಸಿದರು. ಗೌ॥ ರಾಷ್ಟ್ರಪತಿಯವರಿಗೆ ತಿ.ತಿ.ದೇ., ಅಧ್ಯಕ್ಷರು ಶ್ರೀ ವೈ.ವಿ. ಸುಬ್ಬಾರೆಡ್ಡಿಯವರು, ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ. ಧರ್ಮಾರೆಡ್ಡಿ, ಐ.ಡಿ.ಈ.ಎಸ್., ಗೌರವ ಮರ್ಯಾದೆಯಿಂದ ಸ್ವಾಗತಿಸಿ, ಸ್ವಾಮಿಯವರ ತೀರ್ಥಪ್ರಸಾದಗಳನ್ನು ನೀಡಿದರು.








ತಿ.ತಿ.ದೇ., ಆಡಳಿತ ಭವನದಲ್ಲಿ (ತಿರುಪತಿ) 18-11-2022 ರಂದು ತಿ.ತಿ.ದೇ., ನಿರ್ವಹಿಸಿದ ಕಾರ್ತೀಕ ದೀಪೋತ್ಸವದ ದೃಶ್ಯಗಳು. ಈ ಕಾರ್ಯಕ್ರಮದಲ್ಲಿ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ. ಧರ್ಮಾರೆಡ್ಡಿ ಐ.ಡಿ.ಈ.ಎಸ್.,ರವರು , ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿಗಳು ಶ್ರೀ ವಿ. ವೀರಬ್ರಹ್ಮ, ಐ.ಎ.ಎಸ್., ಶ್ರೀಮತಿ ಎಸ್. ಭಾರ್ಗವಿ, ಐ.ಎ.ಎಸ್., ಇತರ ತಿ.ತಿ.ದೇ. ಉನ್ನತಾಧಿಕಾರಿಗಳು ಪಾಲ್ಗೊಂಡರು.

SAPTHAGIRI (KANNADA) SPIRITUAL ILLUSTRATED MONTHLY Published by Tirumala Tirupati Devasthanams Printing on 25-12-2022 and Posting at Tirupati RMS.Regd. with the Registrar of Newspapers for India under RNI. No. APKAN/2021/80589. Postal Regd.No.TRP/156/2021-2023 "Licenced toPost Without Prepayment No. PMGK/RNP/WPP-04(6)/2021-2023" Posting on 20th of Every Month

